Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ-19 | ಸಂಚಿಕೆ-37 | ಸೆಪ್ಟೆಂಬರ್ 08-14, 2025 | ಪುಟ 16 | ರೂ.10
Volume-19 | Issue-37 | September 08-14, 2025 | Pages 16 | Price 10/-



ರಷ್ಯಾದ ರಿಯಾಯಿತಿ ದರದ ಕಚ್ಚಾ ತೈಲ ಗ್ರಾಹಕರಿಗಿಲ್ಲ ಅದರ ಲಾಭ




ಎಥೆನಾಲ್ ಮಿಶ್ರಿತ ಪೆಟ್ರೋಲ್ ಒಳಿತೋ-ಕೆಡುಕೋ?

ಅಮೆರಿಕಾದ ಅಡಿಯಾಳು ಮಿತ್ರನಾಗುವುದನ್ನು ನಿಲ್ಲಿಸುವ ಸಮಯ ಭಾರತಕ್ಕೀಗ ಬಂದಿದೆ



ಅತಿವೃಷ್ಟಿ ವಿಪತ್ತು ನಿರ್ವಹಣಾ ಕಾಯ್ದೆ ಬಳಸಿ

ಸಾರ್ವಕರ್ ಕಟ್ಟುಕತೆ ಮತ್ತು ವಾಸ್ತವ



ಭಾಗ 36

ಜೆ.ಎನ್. ಕಾಲಂ

ಚಾರ್ಟಿಸಂನಿಂದ ಕಮ್ಯುನಿಸಂ ಕಡೆಗೆ ಆಮೂಲಾಗ್ರ ಪ್ರಜಾಪ್ರಭುತ್ವದಿಂದ ಸಮಾಜವಾದದ ಕಡೆಗೆ ಪಯಣ

ಲೆನಿನ್ ಹೇಳಿದ್ದು: ಆಗಿನ (ಚಾರ್ಟಿಸ್ಟ್) ಇಂಗ್ಲಿಷ್ ಕಾರ್ಮಿಕ ಚಳುವಳಿ ಭವಿಷ್ಯದ ಮಾರ್ಕ್ಸ್‌ವಾದದ ಬಹಳಷ್ಟನ್ನು ಉಜ್ವಲವಾಗಿ ಮುನ್ಸೂಚನೆ ನೀಡಿತು.

ಎಂಗೆಲ್ಸ್: ಈ ಕಾರ್ಮಿಕ ವರ್ಗದ ಸಮಾಜವಾದ ಚಾರ್ಟಿಸಂ ಮೂಲಕ ಹಾದು, ಬಂಡವಾಳಶಾಹಿ ಅಂಶಗಳನ್ನು ತೊಡೆದು, ಶುದ್ಧಿಕರಣಗೊಂಡು, ಇಂಗ್ಲಿಷ್ ಜನರ ಬೆಳವಣಿಗೆಯ ಚರಿತ್ರೆಯಲ್ಲಿ ಅಲ್ಪ ಸಮಯದಲ್ಲಿಯೇ ಮುಖ್ಯ ಪಾತ್ರ ವಹಿಸುತ್ತದೆ

"1792ರಿಂದ 1842ರ ನಡುವಣ ಅರ್ಧ ಶತಮಾನದಲ್ಲಿ ಬ್ರಿಟನ್‌ನಲ್ಲಿ ಸಂಪತ್ತನ್ನು ಉತ್ಪಾದಿಸುವ ಸಾಧನಗಳು 40 ಪಟ್ಟು ಹೆಚ್ಚಾಗಿವೆ. ಆದರೆ ಅದು ಜನರ ಬದುಕನ್ನು ಉತ್ತಮಗೊಳಿಸಲು ವಿಫಲವಾಗಿದೆ. ಅದಕ್ಕೆ ಬದಲಾಗಿ ಉತ್ಪಾದನೆ ಹೆಚ್ಚಾದಂತೆಲ್ಲ ದಟ್ಟ ದಾರಿದ್ರ್ಯ ಹೆಚ್ಚಾಗಿದೆ."

"ಉತ್ಪಾದನೆ ಯಾವ ಪ್ರಮಾಣದಲ್ಲಿ ಹೆಚ್ಚಾಗಿದೆಯೋ ಅದೇ ಪ್ರಮಾಣದಲ್ಲಿ ಕಾರ್ಮಿಕರ ವೇತನ ತಗ್ಗಿದೆ."

ಈಗ 21ನೆಯ ಶತಮಾನದಲ್ಲಿ ಮಾರ್ಕ್ಸ್‌ವಾದಿ ಕಾರ್ಮಿಕ ನಾಯಕರು ಆಡುವ ಮಾತುಗಳು, ಈ ಮಾತುಗಳ ಅನುರಣನ ಎನ್ನುವಂತಿದೆಯಲ್ಲವೇ? ಆದರೆ ಇವರುಗಳು ಯಾರೂ ಮಾರ್ಕ್ಸ್‌ವಾದಿಗಳಾಗಿರಲಿಲ್ಲ. ಆಗ ಇನ್ನೂ ಮಾರ್ಕ್ಸ್, ಎಂಗೆಲ್ಸ್‌ರವರೇ ಮಾರ್ಕ್ಸ್‌ವಾದಿಯಾಗಿರಲಿಲ್ಲ.

ಈ ಮಾತುಗಳು ಕಾರ್ಮಿಕರ ಜೀವನಾನುಭವದಿಂದ ಹುಟ್ಟಿದವಾಗಿದ್ದವು. ಅವರ ಬದುಕಿನ ಸಂಕಟಗಳ ಮೂಲದ ಬಗ್ಗೆ ಆಸಕ್ತಿಯ ಗಮನ, ಪತ್ರಿಕೆಗಳಲ್ಲಿ ಲಭ್ಯಮಾಹಿತಿಯ ಸಂಗ್ರಹಣೆ, ಅದರ ಪರಿಶೀಲನೆ, ಚಿಂತನೆ ಈ ಅವರು ತಿಳಿವಿಗೆ, ನಿರ್ಣಯಗಳಿಗೆ ಬರಲು ಕಾರಣವಾಗಿದ್ದವು. ಚಾರ್ಟಿಸ್ಟ್ ನಾಯಕರು ಮತ್ತು ಇತರ ಕಾರ್ಯಕರ್ತರು ಈ ವಾದವನ್ನು ತಾವು ಭಾಷಣ ಮಾಡಿದ ಹತ್ತಾರು ಸಾವಿರ ಸಭೆಗಳಲ್ಲಿ, ಹಲವು ಲಕ್ಷಾಂತರ ಕಾರ್ಮಿಕರ ಮುಂದೆ ಮಂಡಿಸಿದರು.

ಆಧುನಿಕ ಯಂತ್ರಗಳು ತರುವ ಲಾಭದಲ್ಲಿ ಪಾಲು

ಇಂದು 21ನೇ ಶತಮಾನದಲ್ಲಿ, ಎಐ ಎಂಬ ಯಾಂತ್ರಿಕ ಬುದ್ಧಿಮತ್ತೆ, ಹಲವು ಜಾಲತಾಣದ ತಂತ್ರಜ್ಞಾನದ ರೂಪಗಳು ಕೈಗಾರಿಕೆಗಳಲ್ಲಿ ಮಾತ್ರವಲ್ಲ ಮಾರಾಟ, ನೂರಾರು ಕೂಲಿ ಕೆಲಸಗಳಲ್ಲಿ, ಕೃಷಿ, ಪಶು ಸಂಗೋಪನೆಗಳಲ್ಲಿಯೂ ಕೋಟ್ಯಾಂತರ ಉದ್ಯೋಗಗಳಿಗೆ ಕುತ್ತು ತಂದಿರುವ ಸಂದರ್ಭ.

ಪ್ರತಿನಿತ್ಯ ವಿಶ್ವದ ಲಕ್ಷಾಂತರ ಉದ್ಯಮಗಳಲ್ಲಿ ಊಹೆಗೂ ಮೀರಿ ವೇಗವಾಗಿ ಆಧುನಿಕ ತಂತ್ರಜ್ಞಾನ ಬೃಹತ್ ಸಮಸ್ಯೆಯಾಗಿದೆ. ಅದರ ಪರಿಹಾರಕ್ಕೆ ಕಾರ್ಮಿಕ ವರ್ಗ ದಿನನಿತ್ಯದ ಸಂಘರ್ಷದ ತಿರುಳಾಗಿದೆ.

ಅಂತಹ ಸಮಯದಲ್ಲಿ 19ನೆಯ ಶತಮಾನದ ಆರಂಭದಲ್ಲಿ ಆಗಿನ್ನೂ ಆಧುನಿಕ ಯಂತ್ರಗಳು ಉತ್ಪಾದನೆಯನ್ನು ವ್ಯಾಪಕವಾಗಿ ಪ್ರವೇಶಿಸಿ ಕೈಗಾರಿಕಾ ಕ್ರಾಂತಿ ರಭಸವಾಗಿ ನಡೆಯುತ್ತಿದ್ದ ಸಮಯದಲ್ಲಿ ಕಾರ್ಮಿಕರು ಇದನ್ನು ಹೇಗೆ ಅರ್ಥೈಸಿಕೊಂಡರು, ಯಾವ ರೀತಿ ಸಮಸ್ಯೆಯ ಪರಿಹಾರ ರೂಪಿಸಿಕೊಂಡರು ಎಂಬುದು ಕುತೂಹಲಕರ ವಿಷಯ. ಮೊದಲಿಗೆ ತಮ್ಮ ಉದ್ಯೋಗಗಳನ್ನು ನಾಶಪಡಿಸಿ ಹಸಿವಿಗೆ ದೂಡುತ್ತಿರುವ ಯಂತ್ರಗಳನ್ನೇ ನಾಶಪಡಿಸಲು ಪ್ರಯತ್ನಿಸಿದರು. 1811– 1813ರ ನಡುವೆ ರಾತ್ರಿಯ ವೇಳೆ ಕಾರ್ಮಿಕರು ಮುಖ ಮರೆಸಿಕೊಂಡು ಕಾರ್ಖಾನೆಗಳಿಗೆ ನುಗ್ಗಿ ಯಂತ್ರಗಳನ್ನು ನಾಶಪಡಿಸಿದರು. ಗಲ್ಲು, ಬಂಧನ ಶಿಕ್ಷೆಗೊಳಗಾದರು. ಸೀಮಿತವಾದ ಪ್ರದೇಶದಲ್ಲಿ ನಡೆದ ಇದನ್ನು ಲುಡ್ಡೈಟ್ ಚಳುವಳಿ ಎಂದು ಕರೆದರು. ಮುಂದೆ ಕಾರ್ಮಿಕರು ಈ ದಾರಿಯಲ್ಲಿ ಮುಂದುವರೆಯುವುದರಿಂದ ಉಪಯೋಗವಿಲ್ಲ ಎಂದು ಕಂಡುಕೊಂಡರು.

ಆದರೆ ಆಧುನಿಕ ಯಂತ್ರಗಳನ್ನು ಕೈಗಾರಿಕೆಗಳಲ್ಲಿ ಅಳವಡಿಸಿಕೊಳ್ಳುವುದು ವ್ಯಾಪಕವಾಗಿ ಮುಂದುವರೆಯಿತು. ಅದರ ಫಲವಾಗಿ 1840– 1849ರ ದಶಕ ಹಸಿವಿನ ದಶಕ ಎಂದು ಎಷ್ಟೊಂದು ಪ್ರಸಿದ್ಧವಾಗಿದೆಯೆಂದರೆ, ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ – ಕನ್ನಡ ನಿಘಂಟುವಿನಲ್ಲಿ ಸೇರ್ಪಡೆಯಾಗುವಷ್ಟು!! ಇದೇ ದಶಕವೇ ಚಾರ್ಟಿಸ್ಟ್ ದಶಕವೂ ಹೌದು ಎಂಬುದು ಕಾಗೆ ಬಂದು ಕುಳಿತಿತು, ಕೊಂಬೆಯೂ ಮುರಿದು ಬಿತ್ತು (ಕಾಕತಾಳೀಯ) ಎಂಬಂತಹ ಆಕಸ್ಮಿಕ ಘಟನೆಯಲ್ಲ.

1760ರಿಂದ ಆರಂಭವಾಗಿ 1830ರವರೆಗೂ ನಡೆದ ಕೈಗಾರಿಕಾ ಕ್ರಾಂತಿಯ ಏಳು ದಶಕಗಳು ವಿಜ್ಞಾನ, ತಂತ್ರಜ್ಞಾನ, ಅರ್ಥಶಾಸ್ತ್ರ, ರಾಜಕೀಯ ಎಲ್ಲವೂ ಮೇಳೈಸಿದ, ಮಾನವ ಇತಿಹಾಸದಲ್ಲಿ ಬಹು ಮುಖ್ಯ ದಶಕಗಳಿವು. ಆಧುನಿಕ ಯಂತ್ರಗಳಿಂದ ಹಾನಿಗೊಳಗಾಗಿದ್ದ ತಮ್ಮ ಬದುಕಿನ ಸಮಸ್ಯೆಗಳನ್ನು ಅವರು ಆಳವಾದ ವಿಶ್ಲೇಷಣೆಗೆ ಒಳಪಡಿಸಬೇಕಾಯಿತು. ಈ ವಿಶ್ಲೇಷಣೆಯ ಆಧಾರದಲ್ಲಿ ಅವರು ಈ ಕೆಳಗಿನ ಹಕ್ಕೊತ್ತಾಯವನ್ನು ಮುಂದಿಟ್ಟರು. ಚಾರ್ಟಿಸ್ಟ್ ಪತ್ರಿಕೆಗಳಲ್ಲಿ ವಿವರವಾಗಿ ವಿಶ್ಲೇಷಣೆ ಮಾಡಿದರು.

1842ರಲ್ಲಿ ಬರೆದ "ಯಂತ್ರಗಳ ಉಪಯೋಗ ಮತ್ತು ದುರುಪಯೋಗ" ಎಂಬ ಲೇಖನದಲ್ಲಿ ಚಾರ್ಟಿಸ್ಟರು ಯಂತ್ರ ವಿರೋಧಿಗಳು ಎಂಬ ಬಂಡವಾಳಶಾಹಿಗಳ ಆಪಾದನೆಯನ್ನು ಖಡಾಖಂಡಿತವಾಗಿ ನಿರಾಕರಿಸಿದರು. ಸಂಪತ್ತಿನ ಅಪಾರ ಕೇಂದ್ರೀಕರಣಕ್ಕೆ ಕಾರಣವಾಗುವಂತೆ ಯಂತ್ರಗಳನ್ನು ದುರುಪಯೋಗ ಮಾಡುತ್ತಿರುವ ಬಗ್ಗೆ ಮಾತ್ರ ತಮ್ಮ ವಿರೋಧ ಎಂಬುದನ್ನು ಸ್ಪಷ್ಟಪಡಿಸಿದರು. ಅವರು ಬಂಡವಾಳಿಗರು ಯಂತ್ರಗಳನ್ನು ಉಪಯೋಗಿಸುತ್ತಿರುವ ರೀತಿ "ಜನರಿಗೆ ಬಹು ದೊಡ್ಡ ವರವಾದ ಯಂತ್ರಗಳನ್ನು ಬಹು ದೊಡ್ಡ ಉಪದ್ರವ ಮತ್ತು ಶಾಪವನ್ನಾಗಿಸಿದೆ. ಯಂತ್ರಗಳನ್ನು ದುಡಿಸಿಕೊಳ್ಳುವುದರಿಂದ ಬರುವ ಆದಾಯದಲ್ಲಿ ದುಡಿಯುವವರಿಗೆ ತಮ್ಮ ನ್ಯಾಯ ಬದ್ಧವಾದ ಪಾಲು ಲಭ್ಯವಾಗುವಂತೆ ಅವುಗಳನ್ನು ಸರಿಯಾದ ರೀತಿ ಪ್ರಯೋಗಿಸಬೇಕು" ಎಂದು ಅವರು ವಾದಿಸಿದರು.

"ಉತ್ಪಾದನಾ ವ್ಯವಸ್ಥೆಯ ಪ್ರತಿ ಉತ್ತಮಪಡಿಸುವಿಕೆಯೂ ಕೂಡಾ ಕಾರ್ಮಿಕರ ಶ್ರಮದ ಹೊರೆಯನ್ನು ಕಡಿಮೆ ಮಾಡುವುದರ ಬದಲಾಗಿ ಹೆಚ್ಚು ಮಾಡುತ್ತಿವೆ. ಅವು ಒಬ್ಬ ಕಾರ್ಮಿಕನ ಶ್ರಮವನ್ನು ಹೆಚ್ಚಿಸಿದರೆ ಮತ್ತೊಬ್ಬರನ್ನು ಹಸಿವಿನಿಂದ ಸಾಯಲು ಬೀದಿಗೆ ದೂಡುತ್ತಿವೆ."

"ಯಂತ್ರಗಳನ್ನು ಈಗ ಉಪಯೋಗಿಸುತ್ತಿರುವ ವಿಧಾನದಲ್ಲಲ್ಲದೆ ಬೇರಾವ ರೀತಿಯಲ್ಲಿಯೂ ಬಳಸಲು ಸಾಧ್ಯವಿಲ್ಲವೆಂಬ ಮಾತನ್ನು ನಮಗೆ ಹೇಳಲು ಬರಬೇಡಿ. ಉತ್ಪಾದನೆಯನ್ನು ಉತ್ತಮಪಡಿಸುವ ಪ್ರತಿಯೊಂದು ಕ್ರಮದಿಂದ ಸಿಗುವ ಪ್ರಯೋಜನದ ಸರಿಪಾಲನ್ನು ಕಾರ್ಮಿಕರಿಗೆ ಖಾತರಿಗೊಳಿಸಲು ಅಸಾಧ್ಯ ಎಂಬ ಮಾತನ್ನು ನಮಗೆ ಹೇಳಲು ಬರಬೇಡಿ. ನಾನು ನಿಮಗೆ ಹೇಳ ಬಯಸುತ್ತೇವೆ, ಅದು ಸಾಧ್ಯ ಎಂದು ಮಾತ್ರವಲ್ಲ ಅದನ್ನು ಮಾಡಲೇಬೇಕು ಎಂದು."

ಅಷ್ಟೇ ಅಲ್ಲ, ಚಾರ್ಟಿಸ್ಟರು ಘಟ್ಟಿಸಿ ಹೇಳಿದರು: "ಆಳುವವರಿಗೆ ಇದನ್ನು ಪರಿಣಾಮಕಾರಿಯಾಗಿ, ಯಾರಿಗೂ ಹಾನಿಮಾಡದೆ ಕಾರ್ಯಗತಗೊಳಿಸಲು ಸಾಧ್ಯವಿಲ್ಲದೆ ಹೋದರೆ ಅವರು ತಮ್ಮ ಕುರ್ಚಿಯನ್ನು ಅದನ್ನು ಮಾಡಲು ಸಾಧ್ಯವಿರುವವರಿಗೆ ಬಿಟ್ಟುಕೊಡಬೇಕು. ಶ್ರಮದ ಫಲವನ್ನು ಹೆಚ್ಚು ಉತ್ತಮವಾಗಿ ಮತ್ತು ಹೆಚ್ಚು ನ್ಯಾಯಬದ್ಧವಾಗಿ ಹಂಚಲೇಬೇಕು. ಶಾಸನ ಮಾಡುವವರಿಗೆ ಮತ್ತು ಆಡಳಿತಾಧಿಕಾರಿಗಳಿಗೆ ಸಾಧ್ಯವಿಲ್ಲದೇ ಹೋದರೆ ಹೊರ ನಡೆಯಿರಿ."

ವರ್ಗ ವಿಭಜಿತ ಸಮಾಜದ ಸ್ಪಷ್ಟತೆ, ಅಂತರ ರಾಷ್ಟ್ರೀಯ ಸೌಹಾರ್ದ

ಅಂದಿನ ದಿನಗಳಲ್ಲಿ ಇಂತಹ ದಾಷ್ಟ್ರ್ಯ ಬಹಳ ವಿಶೇಷವಾದ್ದು. ಕಾರ್ಮಿಕ ವರ್ಗ ಅಲ್ಲಿಯವರೆಗಿನ ಬಂಡವಾಳಶಾಹಿ ವರ್ಗದ ಹಿಂಬಾಲಕತನದ ಮನಸ್ಥಿತಿಯಿಂದ ಬಿಡಿಸಿಕೊಂಡದ್ದು ಮಾತ್ರವಲ್ಲ, ಅವರಿಗೆ ಸವಾಲು ಹಾಕುವಂತಹ ಮಟ್ಟಿಗೆ ಸ್ವತಂತ್ರ ವರ್ಗ ದೃಷ್ಟಿಯನ್ನು ಬೆಳೆಸಿಕೊಂಡದ್ದು. ಅವರು ತಮ್ಮ ಬರಹಗಳಲ್ಲಿ ಕೇವಲ ಕಾರ್ಮಿಕರ ಬದುಕಿಗೆ ಮಾತ್ರ ಸೀಮಿತವಾಗದೆ ಅಂದಿನ ರಾಜಕೀಯ ಅರ್ಥಶಾಸ್ತ್ರವನ್ನು ವಿಶ್ಲೇಷಣೆ ಮಾಡಿದರು.

ಚಾರ್ಟಿಸ್ಟರು ಈ ಆರ್ಥಿಕ ವಿಶ್ಲೇಷಣೆಗಳಿಗೆ ಅನುಗುಣವಾಗಿ ಈ ಕೆಳಗಿನ ಒತ್ತಾಯಗಳನ್ನು ಮುಂದಿಟ್ಟರು:

* ತೆರಿಗೆಗಳನ್ನು ಕಾರ್ಮಿಕರ ಹೆಗಲಿನಿಂದ ವರ್ಗಾಯಿಸಿ ಆಸ್ತಿಗಳ ಆಧಾರದಲ್ಲಿ ಆಸ್ತಿವಂತರ ಮೇಲೆ ಹೊರಿಸಬೇಕು. ಇದರಿಂದ ಕಾರ್ಮಿಕರ ಬದುಕಿನ ಸಂಕಟಗಳನ್ನು ಕುಗ್ಗಿಸುವುದರ ಜೊತೆಗೆ ಸಂಪತ್ತಿನ ಕೇಂದ್ರೀಕರಣ ತಪ್ಪಿಸಲು ನೆರವಾಗುತ್ತದೆ.
* ಚರ್ಚ್‌ಗಳ ಧಾರ್ಮಿಕ ಸುಂಕ ನಿಷೇಧಿಸಬೇಕು. ಪ್ರಭುತ್ವ ಮತ್ತು ಧಾರ್ಮಿಕ ವ್ಯವಹಾರ ಪೂರ್ತಿ ಪ್ರತ್ಯೇಕಗೊಳ್ಳಬೇಕು.
* ಎಲ್ಲ ನಿರುದ್ಯೋಗಿಗಳಿಗೂ ಕೃಷಿಯಾಗದ ಭೂಮಿ ನೀಡುವ ಮೂಲಕ ಜೀವನ ಭದ್ರತೆ ಒದಗಿಸಬೇಕು.
* ರಾಜ, ರಾಜ ಮನೆತನದವರೂ ಸೇರಿದಂತೆ ಎಲ್ಲರಿಗೂ ಕೇವಲ ಸ್ಥಾನಮಾನಕ್ಕಾಗಿ ನೀಡುತ್ತಿರುವ ಗೌರವಧನ, ಪೆನ್ಷನ್ ಮುಂತಾದವನ್ನು ಕೂಡಲೇ ರದ್ದುಗೊಳಿಸಬೇಕು.
* ಪರದೇಶಗಳ ಮೇಲೆ ಯುದ್ಧ ಸಾರುತ್ತಾ ಅದರ ವೆಚ್ಚವನ್ನು ಜನರು ಭರಿಸುವಂತೆ ಮಾಡುವ ಸೈನ್ಯಕ್ಕೆ ಬದಲಾಗಿ ಸ್ಥಳೀಯ ಸ್ವಯಂಸೇವಾ ಪಡೆಗಳ ಮೂಲಕ ಕಾನೂನು ಸುವ್ಯವಸ್ಥೆ ನಿರ್ವಹಿಸಬೇಕು.
* ಆಧುನಿಕ ಯಂತ್ರಗಳು ವರದಾನವಾಗಿವೆ. ಪರಸ್ಪರ ಸ್ಪರ್ಧೆಯ ಬದಲಾಗಿ ಮಾದರಿಗಳ ನಿರ್ಮಾಣ ಮತ್ತು ಅನುಸರಣೆ ಪ್ರಧಾನವಾಗಬೇಕು. ಅಂಗಡಿಗಳ ಬದಲಾಗಿ ದಾಸ್ತಾನು ಮಳಿಗೆಗಷ್ಟೇ ಅಸ್ತಿತ್ವಕ್ಕೆ ಬರಬೇಕು.

ನೊ ಕಿಂಗ್, ನೊ ಸೋಲ್ಜರ್, ನೊ ಹ್ಯಾಂಗ್ ಮ್ಯಾನ್ (ರಾಜ ಬೇಡ, ಸೈನಿಕನೂ ಬೇಡ, ಗಲ್ಲಿಗೆ ಹಾಕುವವನೂ ಬೇಡ). ಇಂತಹ ವಿಚಾರಧಾರೆ ಉಳ್ಳ ಚಾರ್ಟಿಸ್ಟರು ಕೇವಲ ಮತದಾನದ ಹಕ್ಕುಗಳನ್ನೇ ಕೇಳಿದ್ದರೂ ಕೂಡಾ ಆಳುವ ವರ್ಗಕ್ಕೆ ಭಯ ಭಯ ಭಯ. ಎಲ್ಲರಿಗೂ ಮತದಾನದ ಹಕ್ಕು ದೊರೆತರೆ, ಆ ಮತದಾರರಿಗೆ ಈ ರೀತಿಯ ಪ್ರಜ್ಞಾವಂತಿಕೆ ಇದ್ದರೆ ಏನಾಗಬಹುದು ಎಂಬ ಭಯ. ವಿಗ್ ಪಕ್ಷದ ನಾಯಕರಲ್ಲೊಬ್ಬನಾದ ಮೆಕಾಲೆ, ಭಾರತದ ಇತಿಹಾಸದಲ್ಲಿ ಇಂಗ್ಲಿಷ್ ಮಾದರಿ ಶಿಕ್ಷಣ ಜಾರಿಗೆತರಲು ಕಾರಣನಾದ ಅದೇ ಲಾರ್ಡ್ ಮೆಕಾಲೆ ಹೇಳುತ್ತಾನೆ: "ಚಾರ್ಟಿಸ್ಟ್‌ಗಳ ಮತದಾನದ ಹಕ್ಕಿನ ಮಹಾಮನವಿಯನ್ನು ಒಪ್ಪಿ ಕಾನೂನಾಗಿ ಅಂಗೀಕರಿಸಿದ್ದೇ ಆದರೆ ಬ್ರಿಟನ್‌ನ ಪ್ರತಿ ನಗರ, ಪ್ರತಿ ಹಳ್ಳಿಯಲ್ಲೂ, ದೇಶದ ಎಲ್ಲ ಭಾಗಗಳಲ್ಲೂ ಇರುವ ಎಲ್ಲ ಆಸ್ತಿಯನ್ನೂ ದುಡಿಯುವ ವರ್ಗದ ಕಾಲ ಬುಡಕ್ಕೆ ಒಪ್ಪಿಸಿದಂತಾಗುತ್ತದೆ."

ಆಳುವ ವರ್ಗ ಇದೇ ಭಯದಿಂದ 1647ರಿಂದ 1928ರವರೆಗೂ ಲೆವೆಲರ್ಸ್‌ಗಳ ಮನವಿಗಳಿಂದ ಆರಂಭಿಸಿ ಚಾರ್ಟಿಸ್ಟರ ಮಹಾ ಮನವಿಗಳವರೆಗೂ ದುಡಿಯುವ ವರ್ಗಕ್ಕೆ ಮತದಾನದ ಹಕ್ಕನ್ನು ನಿರಾಕರಿಸಿತು.

ನ್ಯಾಷನಲ್ ಚಾರ್ಟರ್ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಸಮಾಜದ ವರ್ಗ ವಿಭಜನೆಯ ಬಗೆಗೆ ಹೀಗೆ ವಿಶ್ಲೇಷಿಸಿದರು: "ದಮನ ಮಾಡುವವರು ಮತ್ತು ದಮನಿತರು, ಉತ್ಪಾದಕನಲ್ಲದ ದರೋಡೆಗಾರ ಮತ್ತು ದರೋಡೆಗೊಳಗಾದ ಉತ್ಪಾದಕ ಎರಡೇ ವರ್ಗಗಳಾಗಿ ದೇಶ ವಿಭಜನೆಗೊಳ್ಳುತ್ತಿರುವ ಸಮಯ ಬಹುಬೇಗ ಸಮೀಪಿಸುತ್ತಿದೆ."

ಯುರೋಪಿನ ವಿವಿಧ ದೇಶಗಳಲ್ಲಿ ನಡೆಯುತ್ತಿರುವ ಪ್ರಜಾಪ್ರಭುತ್ವದ ಹೋರಾಟಗಳಿಗೆ, ವಿಶೇಷವೆಂದರೆ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857ರ ಸಿಪಾಯಿ ದಂಗೆ)ದಲ್ಲಿ ಭಾರತದ ಸಿಪಾಯಿಗಳು, ಜನತೆಗೆ, ಚೀನಾದ ಮೇಲೆ ಬ್ರಿಟನ್‌ನ ಅಫೀಮು ಯುದ್ಧದ ಸಂದರ್ಭದಲ್ಲಿ ಚೀನಾದ ಜನತೆಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಿದರು. ಕಾರ್ಮಿಕ ವರ್ಗ ತನ್ನ ಸ್ವತಂತ್ರ ವರ್ಗ ನಿಲುವಿನ ಆರಂಭದಲ್ಲಿಯೇ, ಮಾರ್ಕ್ಸ್‌ವಾದದ ಬೆಳವಣಿಗೆಯ ಪೂರ್ವದಲ್ಲಿಯೇ ಕಾರ್ಮಿಕ ಅಂತರರಾಷ್ಟ್ರೀಯತೆಯನ್ನು ವ್ಯಕ್ತಪಡಿಸಿದೆ ಎಂಬುದು ಗಮನಾರ್ಹವಾದದ್ದು.

ಚಾರ್ಟಿಸಂ ತಾತ್ವಿಕ ದೃಷ್ಟಿಕೋನ

ಆಮೂಲಾಗ್ರ ಪ್ರಜಾಪ್ರಭುತ್ವ ಬದಲಾವಣೆಯ ದೃಷ್ಟಿಕೋನ, ಕಾರ್ಮಿಕ ವರ್ಗದ ದೃಷ್ಟಿಯಿಂದ ಪ್ರಜಾಪ್ರಭುತ್ವವನ್ನು ವಿಸ್ತರಿಸುವ ದೃಷ್ಟಿಕೋನ, ಹಾಗೆ ವಿಸ್ತರಿಸಿದ ಪ್ರಜಾಪ್ರಭುತ್ವವನ್ನು ಕಾರ್ಮಿಕ ವರ್ಗದ ಬದುಕಿನ ಉನ್ನತಿಗೆ ಉಪಯೋಗಿಸಿಕೊಳ್ಳುವ ಆ ಮೂಲಕ ಪ್ರಭುತ್ವದ ಆರ್ಥಿಕ, ಸಾಮಾಜಿಕ ನೀತಿಗಳಲ್ಲಿ ಅಸಮೂಲಾಗ್ರ ಬದಲಾವಣೆ ತರಬೇಕೆಂಬ ಅತೀವ ಬಯಕೆ. ಹೀಗೆ ಅವರಿಗೆ ಪ್ರಜಾಪ್ರಭುತ್ವ ತನ್ನ ಪೂರ್ಣ ಸತ್ವದಿಂದ ಜಾರಿಗೆ ತರುವ ಮೂಲಕ ಸಮಾಜದ ಬದಲಾವಣೆ ಸಾಧ್ಯ ಎಂದು ನಂಬಿದ್ದರು.

ಲಾಕ್, ಪೇನ್, ಹೆಲ್ವಿಷಯಸ್ ಮೊದಲಾದ ಪ್ರಜಾಪ್ರಭುತ್ವದ ತತ್ವಶಾಸ್ತ್ರಜ್ಞರ ಚಿಂತನೆಗಳನ್ನು ಅಧ್ಯಯನ ಮಾಡಿದ್ದರು. ಆ ಪ್ರಭಾವ ಅವರ ಮೇಲೆ ದಟ್ಟವಾಗಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ಪ್ರಜಾಪ್ರಭುತ್ವದ ಮಿತಿಗಳ ಆವರಣವನ್ನು ಮೀರುವುದು ಅವರಿಗೆ ಸಾಧ್ಯವಾಗಿರಲಿಲ್ಲ ಎಂಬುದೂ ಸತ್ಯ. ●

ಪುಟ .. ನೋಡಿ

ಸಂಪಾದಕೀಯ

ಅತಿವೃಷ್ಟಿ: ವಿಪತ್ತು ನಿರ್ವಹಣಾ ಕಾಯ್ದೆ ಬಳಸಿ

ಈ ಮಳೆಗಾಲದಲ್ಲಿ ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ಮಳೆಯ ಕಾರಣವಾಗಿ ವಿಪರೀಪ ಹಾನಿಯಾಗಿದೆ. ಮನೆಗಳು ಶಿಥಿಲವಾಗಿ ಬಿದ್ದುಹೋಗಿವೆ. ವಾರಗಟ್ಟಲೆ ಸುರಿದ ಮಳೆಗೆ ಮಳೆ ನೀರು ಮನೆಯ ಸುತ್ತ, ಮನೆಯ ಒಳಗೂ ಸೇರಿಕೊಂಡು ಕುಟುಂಬ ಪೂರ್ತಿ ಬೀದಿಯಲ್ಲಿ ನಿಂತಿವೆ. ಇದರಿಂದಾಗಿ ವೃದ್ಧರು, ಬಾಣಂತಿಯರು, ಮಕ್ಕಳು ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ಅತ್ತ ಚಿಕಿತ್ಸೆಗೆ ಹಣವೂ ಇಲ್ಲದೆ, ಇತ್ತ ಚಿಕಿತ್ಸೆಗಾಗಿ ಯಾವ ವ್ಯವಸ್ಥೆಯೂ ಇಲ್ಲದೆ ಸಾಮಾನ್ಯ ಬಡ ಕುಟುಂಬಗಳು ತೀವ್ರ ಸಂಕಟಕ್ಕೆ ಈಡಾಗಿವೆ. ಅದೇ ರೀತಿಯಲ್ಲಿ ಅತಿವೃಷ್ಟಿಯು ರೈತರನ್ನು ಇನ್ನಿಲ್ಲದಂತೆ ಸಂಕಟಕ್ಕೆ ದೂಡಿದೆ. ರಾಜ್ಯದ ಕರಾವಳಿ, ಮಲೆನಾಡು ಮತ್ತು ಉತ್ತರ ಕರ್ನಾಟಕದಲ್ಲಿ ಮುಂಗಾರು ಬೆಳೆಯನ್ನು ಬೇರು ಕೊಳೆ ರೋಗಕ್ಕೆ ಈಡುಮಾಡಿದೆ. ಕಲ್ಯಾಣ ಕರ್ನಾಟಕದಲ್ಲಿ ಹೆಸರು, ಉದ್ದು ಮುಂತಾದ ದ್ವಿದಳ ಧಾನ್ಯಗಳು ನಿರಂತರ ಮಳೆಯಿಂದಾಗಿ ರಾಶಿಮಾಡಲೂ ಆಗದೆ, ಇದ್ದಲ್ಲಿಯೇ ಮೊಳಕೆಯೊಡೆದಿವೆ. ಮತ್ತು ಮಾಡಲಾದ ರಾಶಿಯ ಇಳುವರಿಯಲ್ಲಿ ಪ್ರತಿಶತ ಶೇ. 30ರಷ್ಟೂ ಕೈಗೆ ಬಂದಿಲ್ಲ. ಹತ್ತಿ, ಮೆಣಸಿನಕಾಯಿ, ಸಜ್ಜೆ ಮತ್ತಿತರ ಬಹುತೇಕ ಬೆಳೆಗಳು ಹಾನಿಯಾಗಿ ತೀವ್ರ ನಷ್ಟವನ್ನುಂಟುಮಾಡಿವೆ. ಸರಕಾರಿ ಲೆಕ್ಕದ ಪ್ರಕಾರ ಎಪ್ರಿಲ್ 1ರಿಂದ ಆಗಸ್ಟ್ 1ರವರೆಗೆ ಪ್ರಕೃತಿ ವಿಕೋಪದಿಂದ 101 ಮಾನವ ಜೀವಗಳಿಗೆ ಹಾನಿಯಾಗಿದೆ. 843 ಜಾನುವಾರುಗಳು ಮುಂಗಾರು ಮತ್ತು ಹಿಂಗಾರಿನ ಅವಧಿಯಲ್ಲಿ ಸುರಿದ ಮಳೆಯಿಂದ ಸಾವನ್ನಪ್ಪಿವೆ. 5174 ಮನೆಗಳಿಗೆ ಹಾನಿಯಾಗಿದೆ. ಸಿಡಿಲಿಗೆ 49 ಮರಗಳು ಮತ್ತು 15 ಮನೆಗಳು ಹಾಳಾಗಿವೆ. 17 ಮಂದಿ ಜೀವಗಳು ಸಿಡಿಲಿಗೆ ಇಲ್ಲವಾಗಿವೆ. ಸರಕಾರದಿಂದ ರೂ. 1.29 ಕೋಟಿ ಪರಿಹಾರ ವಿತರಿಸಲಾಗಿದೆ ಎಂದು ಹೇಳಲಾಗಿದೆ. ಆದರೆ ವಾಸ್ತವದಲ್ಲಿ ಈ ಅಂಕಿಸಂಖ್ಯೆಗಳು ಅನೇಕ ಪಟ್ಟು ಹೆಚ್ಚಿರುವ ಸಾಧ್ಯತೆಗಳಿವೆ. ನಮ್ಮ ಪ್ರತಿ ಗ್ರಾಮಗಳಲ್ಲಿ ಶೇ. 90ಕ್ಕಿಂತಲೂ ಹೆಚ್ಚು ಮನೆಗಳು ಮಣ್ಣಿನಿಂದ ಕೂಡಿವೆ ಮತ್ತು ದುರ್ಬಲವಾಗಿವೆ. ಸರಕಾರವೇ ಕಟ್ಟಿಸಿದ ಮನೆಗಳು ಕಳಪೆ ಗುಣಮಟ್ಟ ಹೊಂದಿವೆ. ಹೀಗಿದ್ದಾಗ ಇಡೀ ರಾಜ್ಯದಲ್ಲಿ ಮಳೆಗೆ 5174 ಮನೆಗಳು ಮಾತ್ರ ಅಧಿಕಾರಿಗಳ ಸಮೀಕ್ಷೆಯ ವ್ಯಾಪ್ತಿಗೆ ಬಂದಿವೆ. ಸಮೀಕ್ಷೆಯ ಮಾನದಂಡಗಳು ಹೇಗಿರಬಹುದು ಎಂಬುದನ್ನು ಗಂಭೀರವಾಗಿ ಪರಿಶೀಲಿಸಬೇಕು.

ಹಾನಿಯು ಕೃಷಿಯಲ್ಲಿ ವಸತಿಯಲ್ಲಿ ಮಾತ್ರ ಆಗಿದೆ ಅಂತಲ್ಲ. ರಸ್ತೆಗಳು ಸಂಪೂರ್ಣ ಕೊಚ್ಚಿ ಹೋಗಿವೆ. ಶಿಥಿಲಗೊಂಡಿವೆ. ಜಾನುವಾರುಗಳು ಹರಿದುಹೋಗಿವೆ. ಉಕ್ಕಿಹರಿದ ನದಿಗಳು, ಹಳ್ಳಕೊಳ್ಳಗಳ ಪ್ರವಾಹಗಳು ಇಡೀ ಗ್ರಾಮದ ಎಲ್ಲ ಸಂಪನ್ಮೂಲಗಳಿಗೆ ನಷ್ಟಮಾಡಿದೆ. ಶಾಲೆಯ ಕಟ್ಟಡಗಳು, ಹಳೆಯ ಸರಕಾರಿ ಕಚೇರಿಯ ಕಟ್ಟಡಗಳು, ಬಸ್ ನಿಲ್ದಾಣಗಳು, ಹೀಗೆ ಜನವಾಸದ ಎಲ್ಲ ಸಂಪನ್ಮೂಲಗಳೂ ಅತಿವೃಷ್ಟಿಗೆ ಬಲಿಯಾಗಿವೆ. ಇದನ್ನೆಲ್ಲ ಸರಕಾರವು ಹಾನಿಯ ಲೆಕ್ಕಕ್ಕೆ ಪರಿಗಣಿಸುತ್ತದೆಯೆ? ಪ್ರತಿ ಮಳೆಗಾಲದಲ್ಲಿ ಇಂತಹ ಅವಘಡಗಳು ಸಾಮಾನ್ಯ. ಮತ್ತು ಸರಕಾರವು ಪ್ರಕೃತಿ ವಿಕೋಪದ ಸವಾಲುಗಳನ್ನು ಎದುರಿಸಲು ಸಜ್ಜಾಗಿರುತ್ತದೆಯೇ? ಆಯ್ಕೆಯಾಗಿ ಹೋದ ಜನಪ್ರತಿನಿಧಿಗಳು ಜನತೆಯ ಇಂತಹ ಸಂಕಷ್ಟಕ್ಕೆ ಹೇಗೆ ಸ್ಪಂದಿಸುತ್ತಾರೆ? ನಗರ ಗ್ರಾಮಗಳೆರಡರಲ್ಲಿಯೂ ಇಂತಹ ಹಾನಿಗಳಾದಾಗ ಹೇಗೆ ನಿರ್ವಹಣೆ ಮಾಡಲಾಗುತ್ತಿದೆ?

ವಾರಗಟ್ಟಲೆ ಸುರಿವ ಜಡಿಮಳೆಯ ಹೊತ್ತಿನಲ್ಲಿ ದವಸ ಧಾನ್ಯಗಳು ಹರಿದುಹೋಗಿ ಅಥವ ಕೆಟ್ಟುಹೋಗಿ ಊಟಕ್ಕೂ ಗತಿಯಿಲ್ಲದೆ, ರಾತ್ರಿ ಮಲಗಲು ಜಾಗವೇ ಇಲ್ಲದೇ, ಜನರು ಪರದಾಡುವಾಗ ಶಾಸಕರು ಸ್ಪಂಧಿಸಿದ ರೀತಿಯು ವಿಡಂಬನಾತ್ಮಕವಾದದ್ದಾಗಿದೆ. ಮಳೆ ನಿಂತ ಮೇಲೆ ಕೆಲವು ಶಾಸಕರು ತಮ್ಮ ಕ್ಷೇತ್ರಕ್ಕೆ ಹೋಗಿ ಕೆಲವು ಸಂತ್ರಸ್ತರಿಗೆ ಸ್ಥಳದಲ್ಲಿಯೇ ರೂ.5000 ಚೆಕ್ ಕೊಟ್ಟು ಮುಂದಕ್ಕೆ ಹೋದರು. ಇಷ್ಟಕ್ಕೇ ಸಮಸ್ಯೆ ಮುಗಿದು ಹೋಯಿತೆ? ಕೆಲವು ಗ್ರಾಮಗಳಲ್ಲಿ ಮಳೆನೀರು ಹರಿದುಹೋಗಲು ದಾರಿಮಾಡಿದರೂ ಸಮಸ್ಯೆ ಪರಿಹಾರವಾಗುತ್ತಿತ್ತು. ಇದಕ್ಕಾಗಿ ತಮ್ಮಲ್ಲಿ ಬಜೆಟ್ ಇಲ್ಲವೆಂದು ನಿರ್ಲಕ್ಷಿಸಲಾಗಿದೆ. ಯಂತ್ರಗಳ ಮೂಲಕ ನೀರೆತ್ತುವುದು, ಕೂಡಲೇ ತಾತ್ಕಾಲಿಕ ಪುನರ್ವಸತಿ ಕಲ್ಪಿಸುವುದು, ಎಲ್ಲ ಮನೆಗಳಿಗೂ ದವಸ ಧಾನ್ಯಗಳ ಕಿಟ್ ತಲುಪಿಸುವುದು, ಶಾಲೆಗಳನ್ನು ರಿಪೇರಿಮಾಡುವುದು, ಶುದ್ಧ ಕುಡಿಯುವ ನೀರು ಒದಗಿಸುವುದು, ಆರೋಗ್ಯ ಇಲಾಖೆಯು ಮನೆಮನೆಗೆ ಆರೋಗ್ಯದ ಕಿಟ್‌ನೊಂದಿಗೆ ಹೋಗಿ ತುರ್ತು ಚಿಕಿತ್ಸೆ ಕೊಡುವುದು, ಕಂಬಳಿ ಹೊದಿಕೆ ಮತ್ತಿತರೆ ಬೆಚ್ಚನೆ ಉಡುಪು ವಿತರಿಸುವುದು ಮುಂತಾದ ತುರ್ತುಕ್ರಮಗಳನ್ನು ಕಾಳಜಿಯುಕ್ತವಾಗಿ ಮಾಡಬಹುದು. ಆದರೆ ಹೀಗೆ ಮಾಡಲಾಗಿದೆಯೇ? ರಾಜ್ಯದಾದ್ಯಂತ ಈ ರೀತಿಯ ನೆರವಿಗೆ ಸರಕಾರ ಮುಂದೆ ಬರಲಿಲ್ಲ. ನಗರ ಮತ್ತು ಗ್ರಾಮಗಳಲ್ಲಿನ ಸ್ವಚ್ಛತಾ ಸಿಬ್ಬಂದಿಗಳಂತೂ ಪ್ರತಿ ದಿನ ಕೆಲಸ ಮಾಡಲೇಬೇಕಲ್ಲ. ಮಳೆಗಾಲ ಬರುವ ಮುನ್ನವೇ ಅವರಿಗೆ ಪೂರ್ಣ ಅಳತೆಯ ರೇನ್ ಕೋಟ್ ಒದಗಿಸಲು ಆಗ್ರಹಿಸಲಾಗಿತ್ತು. ಕಲಬುರಗಿಯಂತಹ ಕಡೆಗಳಲ್ಲಿ ಹಿತೈಷಿಗಳಿಂದ ಪಡೆದುಕೊಂಡು ರೇನ್ ಕೋಟ್ ಒದಗಿಸಿದ್ದು ಈವಾರದಲ್ಲಿ. ಅದೂ ಎಲ್ಲ ಪೌರ ಮತ್ತು ಸ್ವಚ್ಛತಾ ಕಾರ್ಮಿಕರಿಗಲ್ಲ. ಸರಕಾರವು ಈ ದಿಕ್ಕಿನಲ್ಲಿ ಸಮಗ್ರವಾಗಿ ಆಲೋಚಿಸುವ ದೃಷ್ಟಿಕೋನ ಹೊಂದಿಲ್ಲ ಎಂಬುದು ಇದರಿಂದ ಸಾಬೀತಾದಂತೆ.

ಆಯಾ ಪ್ರದೇಶದಲ್ಲಿನ ಬೆಳೆಗಳು ನಷ್ಟವಾಗಿದ್ದಕ್ಕೆ ಕೂಡಲೇ ಸಮೀಕ್ಷೆಮಾಡಿ, ಎಕರೆಗೆ ತಲಾ ರೂ.25,000 ಪರಿಹಾರಧನ ಒದಗಿಸಬೇಕೆಂದು ರೈತರು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಸರಕಾರವು ಇದಕ್ಕೂ ಮುನ್ನವೇ ಪರಿಹಾರ ಒದಗಿಸಿ, ಮುಂದಕ್ಕೆ ಕೃಷಿಗಾಗಿ ಬೇಕಾದ ಎಲ್ಲ ಸೌಲಭ್ಯಗಳನ್ನು ಉಚಿತವಾಗಿ ಒದಗಿಸುವ ನಿರ್ಣಯ ಖಂಡಿತ ಮಾಡಲು ಸಾಧ್ಯವಾಗಬೇಕಿತ್ತು. ಬೆಳೆ ಸಾಲ ಮನ್ನಾ, ಬೆಳೆ ವಿಮೆ ಮುಂತಾದ ಪರಿಹಾರದ ಕ್ರಮಗಳನ್ನು ತುರ್ತಾಗಿ ಸರಕಾರವು ಮಾಡಬೇಕು. ಆದರೆ ಯಾಂತ್ರಿಕವಾದ ಸಮೀಕ್ಷೆ ಅರೆಬರೆಯಾಗಿ ಮುಗಿಯುವುದು ವಿಳಂಬದಲ್ಲಿಯೆ. ಪರಿಹಾರ ವಿತರಿಸುವಷ್ಟರಲ್ಲಿ ರೈತರು ಇನ್ನಷ್ಟು ಸಾಲದ ಬಲೆಗೆ ಸಿಲುಕಿಕೊಂಡಿರುತ್ತಾರೆ. ಅನಾರೋಗ್ಯದಿಂದ ಕುಟುಂಬವು ಇನ್ನೂ ಸಮಸ್ಯೆ ಎದುರಿಸುತ್ತಿರುತ್ತದೆ.

ಅಮೇರಿಕಾದ ಶೇ. 50ರಷ್ಟು ಆಮದು ಸುಂಕ

ಈಗಾಗಲೆ ಅಮೇರಿಕಾದ ಶೇ. 50ರಷ್ಟು ಆಮದು ಸುಂಕ ಹೇರಿಕೆಯಲ್ಲಿ ನಮ್ಮ ರೈತರು ತಲ್ಲಣಿಸಿ ಹೋಗಿದ್ದಾರೆ. ಅಮೇರಿಕಾದ ಅಧ್ಯಕ್ಷ ಟ್ರಂಪ್‌ನ ಬೆದರಿಕೆಯ ಒತ್ತಡಗಳಿಗೆ ಕರ್ನಾಟಕದ ಕೃಷಿಕರು ಸಂಕಟಕ್ಕೆ ಸಿಲುಕಿದ್ದಾರೆ. ಜವಳಿ ಉದ್ಯಮ, ಸಿದ್ಧ ಉಡುಪು ತಯಾರಿಕೆ, ಹತ್ತಿ ಬೆಳೆಗಾರರು, ಸೀಗಡಿ ಮೀನುಗಾರರು, ಉದ್ಯಮಗಳು, ವ್ಯಾಪಾರಗಳು ಬಿಕ್ಕಟ್ಟಿಗೆ ಸಿಲುಕಿವೆ. ದಶಲಕ್ಷಾಂತರ ಕಾರ್ಮಿಕರು, ಸುಮಾರು 20 ಲಕ್ಷ ಎಕರೆ ಪ್ರದೇಶದ ಹತ್ತಿ ಬೆಳೆಗಾರರು, ಲಕ್ಷಾಂತರ ಮೀನೋದ್ಯಮ ಕೆಲಸಗಾರರು ತೀವ್ರ ತೊಂದರೆಗೀಡಾಗಿ ಅಪಾಯವನ್ನು ಎದುರಿಸುತ್ತಿದ್ದಾರೆ. 35 ಲಕ್ಷ ಎಕರೆ ಪ್ರದೇಶದಲ್ಲಿ ಭತ್ತ ಬೆಳೆಯುವ ಬೆಳೆಗಾರರು ಮತ್ತು ರೈಸ್ ಮಿಲ್‌ಗಳು, ರಾಜ್ಯದ 24,000 ಗ್ರಾಮಗಳಲ್ಲಿ ಪ್ರತಿ ದಿನ 85 ಲಕ್ಷ ಕೆಜಿ ಹಾಲು ಉತ್ಪಾದಿಸುವ ಹೈನುಗಾರರು, ಹೈನೋದ್ಯಮ ಮತ್ತು ಸಹಕಾರಿ ಹೈನೋದ್ಯಮ ಮತ್ತು ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ಲಕ್ಷಾಂತರ ಕಾರ್ಮಿಕರು ಮತ್ತು ನೌಕರರು ಬೀದಿ ಪಾಲಾಗಲಿದ್ದಾರೆ. ಇದೇ ರೀತಿಯಲ್ಲಿ ಎಲ್ಲ ಆಹಾರ ಧಾನ್ಯಗಳ, ಮಾಂಸ ಉತ್ಪಾದಕರ\ಉದ್ಯಮಗಳ ಪರಿಸ್ಥಿತಿಯು ಬೀದಿ ಪಾಲಾಗುವ ಅಪಾಯದಲ್ಲಿದೆ. ಈಗಾಗಲೆ ಜಾಗತಿಕ ಮಟ್ಟದ ಸಾಮ್ರಾಜ್ಯಶಾಹಿಯ ಧಾಳಿಗೆ ರೈತ ಕಾರ್ಮಿಕರು ಇಂತಹ ಸಮಸ್ಯೆಗಳಿಂದ ಕಂಗಾಲಾಗಿದ್ದಾರೆ.

ಒಂದೆಡೆ ಬಲಾಢ್ಯರು ನಿರ್ಮಿತ ವಾಸ್ತವ ಪರಿಸ್ಥಿತಿಯು ಹೀಗಿದೆ, ಇನ್ನೊಂದೆಡೆ ಪ್ರಾಕೃತಿಕವಾಗಿ ಅತಿವೃಷ್ಟಿ ಹಾಗೂ ಅನಾವೃಷ್ಟಿಯು ತಂದೊಡ್ಡುವ ಅಪಾಯಗಳನ್ನು ಜನರು ಎದುರಿಸಬೇಕು. ನ್ಯಾಯಾಲಯ, ಸರಕಾರಗಳು ಸಾಲಾಗಿ ಕಾರ್ಪೋರೇಟ್‌ಗಳ ಹಾನಿಯನ್ನು ತುಂಬಲು ಕಟಿಬದ್ಧವಾಗಿರುತ್ತವೆ. ಆದರೆ ಇದೇ ಸಂದರ್ಭದಲ್ಲಿ ಜನ ಸಾಮಾನ್ಯರಿಗಾಗುವ ಹಾನಿಯನ್ನು ಭರಿಸಲು ದಿವ್ಯ ನಿರ್ಲಕ್ಷ್ಯ ನೋಡಬಹುದು. ಅತಿವೃಷ್ಟಿ ಅನಾವೃಷ್ಟಿಯ ಸಂದರ್ಭಗಳನ್ನು ಸಮರ್ಥವಾಗಿ ಎದುರಿಸಲು ವಿಪತ್ತು ನಿರ್ವಹಣಾ ಕಾಯ್ದೆಯನ್ನು ಸರಕಾರಗಳು ಬಳಸಿ ಜನತೆಯನ್ನು ಸಂಕಟದಿಂದ ಪಾರು ಮಾಡಲು ಸಾಧ್ಯವಾಗಬೇಕು. ವಿಪತ್ತು ನಿರ್ವಹಣಾ ಸಮಿತಿಗಳಲ್ಲಿ ತುರ್ತು ನೆರವಿಗಾಗಿ ನಿಧಿಯನ್ನು ಕಾಯ್ದಿಡಲಾಗುತ್ತದೆ. ಈ ನಿಧಿಯನ್ನು ಬಳಸಿ ಕರ್ನಾಟಕದಲ್ಲಿ ಎಲ್ಲ ರೀತಿಯ ನೆರವನ್ನು ಒದಗಿಸುವ ಕ್ರಮ ವಹಿಸಬೇಕಾಗಿತ್ತು. ಸರಕಾರವು ಇಂತಹ ಸಂದರ್ಭದಲ್ಲಿ ತಾನು ಯಾರ ಪರ ಎಂಬುದನ್ನು ತನ್ನ ಕ್ರಿಯೆಯ ಮೂಲಕ ಅಭಿವ್ಯಕ್ತಿಸುತ್ತದೆ. ಹೊಲದಲ್ಲಿ ಬೆಳೆ ಹಾನಿಯಾಗಿ, ಊರಲ್ಲಿ ಮನೆ ಕುಸಿದು ಹೋಗಿ, ಮನೆ ಮಂದಿಯೆಲ್ಲ ಅನಾರೋಗ್ಯಕ್ಕೆ ಈಡಾಗಿದ್ದಲ್ಲಿ ಸರಕಾರವು ತಲಾ ಐದು ಸಾವಿರ ರೂಪಾಯಿ ಕೊಟ್ಟು ಕೈತೊಳೆದುಕೊಳ್ಳುತ್ತದೆ. ನಂತರ ಜನತೆಯು ಪರಿಹಾರಕ್ಕಾಗಿ ಅರ್ಜಿಗಳನ್ನು ತುಂಬಿಕೊಂಡು ಕಚೇರಿಗಳಿಗೆ ಅಲೆಯುವುದರಲ್ಲಿಯೇ ಬಸವಳಿದು ಹೋಗುತ್ತಾರೆ. ಜನತೆಯಿಂದ ಮತಗಳನ್ನು ಪಡೆದು ಆಯ್ಕೆಯಾದ ಸರಕಾರವು ಜನತೆಯ ರಕ್ಷಣೆಗೆ ನಿಲ್ಲದೆ ಹೋಗುವುದು ಸರಕಾರದ ಪ್ರಾಮಾಣಿಕತೆಯ ಬಗ್ಗೆ ಸಂಶಯ ದೃಢಗೊಳ್ಳುವುದು ಸಹಜವಾಗಿದೆ.

ರಾಷ್ಟ್ರೀಯ ವಿಪತ್ತು ಘೋಷಿಸಬೇಕು ಮತ್ತು ಸಮರೋಪಾದಿಯಲ್ಲಿ ಪರಿಣಾಮಕಾರಿ ಪರಿಹಾರ ಒದಗಿಸಬೇಕು: ಕೇಂದ್ರ ಸರಕಾರಕ್ಕೆ ಸಿಪಿಐ(ಎಂ) ಆಗ್ರಹ

ಉತ್ತರ ಭಾರತದಲ್ಲಿ ಪ್ರವಾಹ ಮತ್ತು ಭೂಕುಸಿತದ ಅಸಾಧಾರಣ ಪರಿಸ್ಥಿತಿ ಉಂಟಾಗಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ತೀವ್ರ ಕಳವಳ ವ್ಯಕ್ತಪಡಿಸಿದೆ. ಈ ಬೃಹತ್ ವಿಪತ್ತನ್ನು ನಿಭಾಯಿಸುವಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ವಿಫಲವಾಗಿದೆ. ಇದನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಬೇಕು, ಪರಿಹಾರ ಮತ್ತು ಪುನರ್ವಸತಿ ಕ್ರಮಗಳನ್ನು ಯುದ್ಧೋಪಾದಿಯಲ್ಲಿ ಕೈಗೊಳ್ಳಬೇಕು ಎಂದು ಅದು ಆಗ್ರಹಿಸಿದೆ.

ಪಂಜಾಬ್, ಹಿಮಾಚಲ ಪ್ರದೇಶ, ಉತ್ತರಾಖಂಡ, ಜಮ್ಮು ಮತ್ತು ಕಾಶ್ಮೀರ, ಹರಿಯಾಣ, ರಾಜಸ್ಥಾನ ಮತ್ತು ದೆಹಲಿಗಳು ಭಾರೀ ಮಳೆ, ಪ್ರವಾಹ ಮತ್ತು ಭೂಕುಸಿತದಿಂದ ತತ್ತರಿಸಿವೆ. ಈ ಅಭೂತಪೂರ್ವ ವಿಪತ್ತಿನಲ್ಲಿ ಆಗಿರುವ ಜೀವಹಾನಿಗೆ ಸಿಪಿಐ(ಎಂ) ಸಂತಾಪ ಸೂಚಿಸಿದೆ.

ಸಿಪಿಐ(ಎಂ) ತಂಡಗಳು ಎಲ್ಲಾ ಪೀಡಿತ ರಾಜ್ಯಗಳಲ್ಲಿ ಸಕ್ರಿಯವಾಗಿದ್ದು, ಸಂತ್ರಸ್ತರಿಗೆ ಪರಿಹಾರ ಒದಗಿಸುತ್ತಿವೆ. ಸಿಪಿಐ(ಎಂ) ತನ್ನ ಎಲ್ಲಾ ಕಾರ್ಯಕರ್ತರಿಗೆ ಆಯಾ ರಾಜ್ಯಗಳಲ್ಲಿ ಪರಿಹಾರ ಕಾರ್ಯದಲ್ಲಿ ಸೇರಲು ಕರೆ ನೀಡಿದೆ. ಪೀಡಿತ ಜನರಿಗೆ ಪರಿಹಾರ ಒದಗಿಸಲು ನಿಧಿ ಸಂಗ್ರಹಿಸಲು ಪಕ್ಷವು ಕರೆ ನೀಡಿದೆ.

ಪಂಜಾಬ್ ಅತ್ಯಂತ ಹೆಚ್ಚು ಹಾನಿಗೊಳಗಾಗಿದ್ದು, ರಾಜ್ಯದ ಎಲ್ಲಾ 23 ಜಿಲ್ಲೆಗಳನ್ನು ಪ್ರವಾಹ ಪೀಡಿತವೆಂದು ಘೋಷಿಸಲಾಗಿದೆ. ವರದಿಗಳ ಪ್ರಕಾರ, ಪಂಜಾಬ್ ನ 1655 ಹಳ್ಳಿಗಳಲ್ಲಿ ಸುಮಾರು 3 ಲಕ್ಷ ಎಕರೆ ಬೆಳೆದ ಬೆಳೆಗಳು ಭಾಗಶಃ ಅಥವಾ ಸಂಪೂರ್ಣವಾಗಿ ಮುಳುಗಿವೆ ಮತ್ತು 4 ಲಕ್ಷಕ್ಕೂ ಹೆಚ್ಚು ಜನರನ್ನು ಇದು ನೇರವಾಗಿ ಬಾಧಿಸಿದೆ ಎಂದು ವರದಿಯಾಗಿದೆ. ಹಲವಾರು ಅಣೆಕಟ್ಟುಗಳಿಂದ ಬಿಡುಗಡೆಯಾದ ಹೆಚ್ಚುವರಿ ನೀರಿನೊಂದಿಗೆ ಭಾರೀ ಮಳೆಯಿಂದಾಗಿ ಬಿಯಾಸ್, ಸಟ್ಲೆಜ್, ರಾವಿ ಮತ್ತು ಘಗ್ಗರ್ ನದಿಗಳು ಉಕ್ಕಿ ಹರಿಯುತ್ತಿವೆ ಮತ್ತು ಇದರ ಪರಿಣಾಮವಾಗಿ ಉಂಟಾದ ಪ್ರವಾಹವು ಪಂಜಾಬ್ ಮತ್ತು ಹರಿಯಾಣದಲ್ಲಿ ಬೆಳೆದು ನಿಂತ ಪೈರುಗಳಿಗೆ ವ್ಯಾಪಕ ಹಾನಿಯನ್ನುಂಟುಮಾಡಿದೆ.

ಹರಿಯಾಣದಲ್ಲಿ, 12 ಜಿಲ್ಲೆಗಳ 1,402 ಹಳ್ಳಿಗಳಲ್ಲಿ ಹರಡಿರುವ ಸುಮಾರು 2.5 ಲಕ್ಷ ಎಕರೆ ಪ್ರದೇಶದಲ್ಲಿ ಬೆಳೆದು ನಿಂತಿದ್ದ ಬೆಳೆಗಳು ಸಂಪೂರ್ಣವಾಗಿ ನಾಶವಾಗಿವೆ.

ಜಮ್ಮು–ಕಾಶ್ಮೀರದಲ್ಲೂ ಸಹ, ಧಾರಾಕಾರ ಮಳೆ ಮತ್ತು ಪ್ರವಾಹದಲ್ಲಿ ಸಾವಿರಾರು ಎಕರೆ ಭತ್ತ ಕೊಚ್ಚಿಹೋಗಿದೆ. 170 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ರಾಜಸ್ಥಾನ ಮತ್ತು ದೆಹಲಿಯ ಕೆಲವು ಭಾಗಗಳಲ್ಲಿಯೂ ವ್ಯಾಪಕ ಹಾನಿಯಾಗಿದೆ.

ಹಿಮಾಚಲ ಪ್ರದೇಶವು 320 ಕ್ಕೂ ಹೆಚ್ಚು ಜನರ ಸಾವು ಸೇರಿದಂತೆ ಭಾರಿ ನಷ್ಟವನ್ನು ಅನುಭವಿಸಿದೆ ಮತ್ತು ಅನೇಕರು ಕಾಣೆಯಾಗಿದ್ದಾರೆ ಎಂದು ವರದಿಯಾಗಿದೆ. ಸಾರ್ವಜನಿಕ ಮೂಲಸೌಕರ್ಯ, ಭೂಮಿ ಮತ್ತು ಮನೆಗಳು, ಜಾನುವಾರುಗಳು, ಹಣ್ಣಿನ ಮರಗಳು, ಬೆಳೆದು ನಿಂತಿದ್ದ ಪೈರುಗಳು, ವಾಹನಗಳು ಮತ್ತು ಗೋಶಾಲೆಗಳು ಅಪಾರ ಪ್ರಮಾಣದಲ್ಲಿ ನಾಶವಾಗಿವೆ. ಶಿಮ್ಲಾ ಮತ್ತು ಕುಲುದಲ್ಲಿನ ಸೇಬು ತೋಟಗಳು ನಾಶವಾಗಿವೆ, ಅಧಿಕಾರಿಗಳು ಸುಮಾರು 25,000 ಎಕರೆ ತೋಟಗಾರಿಕಾ ಭೂಮಿಗೆ ಹಾನಿಯುಂಟಾಗಿದೆ ಎಂದು ಅಂದಾಜಿಸಿದ್ದಾರೆ. ಉತ್ತರಾಖಂಡವು ಕೂಡ ಹಠಾತ್ ಪ್ರವಾಹ ಮತ್ತು ಭೂಕುಸಿತಕ್ಕೆ ತುತ್ತಾಗಿದ್ದು, ಹಲವರು ಕಾಣೆಯಾಗಿದ್ದಾರೆ ಎಂದು ವರದಿಯಾಗಿದೆ.

ಕೋಮುವಾದ ಮತ್ತು ಮಹಿಳೆಯರ ಮೇಲಿನ ಹಿಂಸೆ ತಡೆಗಟ್ಟಲು ಆಗ್ರಹಿಸಿ ಹೋರಾಟ ರೂಪಿಸಲು

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ 12ನೇ ರಾಜ್ಯ ಸಮ್ಮೇಳನದ ಕರೆ

'ಘನತೆಯ ಬದುಕು ನಮ್ಮ ಹಕ್ಕು' ಎಂಬ ಘೋಷಣೆಯಡಿಯಲ್ಲಿ ನಡೆದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 12ನೇ ರಾಜ್ಯ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ರಾಯಚೂರಿನ ಸಿಂಧನೂರಿನಲ್ಲಿ ನಡೆಯಿತು. 2025ರ ಆಗಸ್ಟ್ 30ರಿಂದ ಸೆಪ್ಟೆಂಬರ್ 1ರವರೆಗೆ ಮೂರು ದಿನಗಳ ಕಾಲ ನಡೆದ ಈ ಸಮ್ಮೇಳನವು ಕೋಮುವಾದ ಮತ್ತು ಮಹಿಳೆಯರ ಮೇಲಿನ ಹಿಂಸೆ ತಡೆಗಟ್ಟಲು ಆಗ್ರಹಿಸಿ ರಾಜ್ಯಮಟ್ಟದ ಹೋರಾಟ ರೂಪಿಸುವ ಕರೆಯೊಂದಿಗೆ ಮುಕ್ತಾಯವಾಯಿತು. ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಕಿರುಕುಳ ತಡೆಗಟ್ಟಿ, ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳಿಗೆ ಬ್ಯಾಂಕುಗಳ ಮೂಲಕ 10 ಲಕ್ಷದವರೆಗೆ ದೀರ್ಘಾವಧಿ ಬಡ್ಡಿ ರಹಿತ ಸಾಲ ನೀಡಬೇಕು. ಮಹಿಳೆಯರು ತಯಾರಿಸಿದ ವಸ್ತುಗಳಿಗೆ ಸರ್ಕಾರವೇ ಮಾರುಕಟ್ಟೆ ಒದಗಿಸಬೇಕು. ತರಬೇತಿ ನೀಡಬೇಕು, ಕಚ್ಚಾ ವಸ್ತುಗಳನ್ನ ಸರ್ಕಾರವೆ ನೀಡಬೇಕು ಎಂಬಿತ್ಯಾದಿ ನಿರ್ಣಯಗಳನ್ನು ಸಮ್ಮೇಳನದಲ್ಲಿ ತೆಗೆದುಕೊಳ್ಳಲಾಯಿತು.

ಈ ಸಮ್ಮೇಳನದಲ್ಲಿ 17 ಜಿಲ್ಲೆಗಳಿಂದ 196 ಪ್ರತಿನಿಧಿಗಳು, 31 ವೀಕ್ಷಕರು, ವಿವಿಧ ಸಂಘಟನೆಗಳಿಂದ 9 ಸೌಹಾರ್ದ ಪ್ರತಿನಿಧಿಗಳು ಭಾಗವಹಿಸಿದ್ದರು. ದೇವನಹಳ್ಳಿ ರೈತ ಮಹಿಳೆಯರು ದೇವನಹಳ್ಳಿಯಿಂದ ತಂದ ಮಣ್ಣು, ಧರ್ಮಸ್ಥಳದಂದ ಸೌಜನ್ಯ ಮತ್ತು ಪದ್ಮಲತಾ ಮನೆಯಿಂದ ತಂದ ಮಣ್ಣು, ಬಿಜಾಪುರದ ದಲಿತ ಅಪ್ರಾಪ್ತ ಬಾಲಕಿ ದಾನಮ್ಮಳ ಮೇಲೆ ಅತ್ಯಾಚಾರ ನಡೆದ ಊರಿನಿಂದ ತಂದ ಹಿಡಿ ಮಣ್ಣುಗಳನ್ನು ಒಂದೆಡೆ ಸೇರಿಸಿ ಗಿಡ ನೆಡುವ ಮೂಲಕ ಸಮ್ಮೇಳನವನ್ನು ಉದ್ಘಾಟನೆ ಮಾಡಲಾಯಿತು.



ಬೃಹತ್ ರ್ಯಾಲಿ

ಈ ಸಮ್ಮೇಳನಕ್ಕೂ ಮುನ್ನ ಆಗಸ್ಟ್ 30, 2025ರಂದು ಸಿಂದನೂರಿನ ಮಿಲಾಪ್ ಶಾದಿ ಮಹಲ್‌ನಿಂದ ಟೌನ್ ಹಾಲ್‌ವರೆಗೆ ಬೃಹತ್ ರ್ಯಾಲಿ ನಡೆಯಿತು. ನಂತರ ಟೌನ್ ಹಾಲ್‌ನಲ್ಲಿ ಸಾರ್ವಜನಿಕ ಸಭೆ ನಡೆಯಿತು. ಈ ಸಭೆಯಲ್ಲಿ ರಾಜ್ಯದ ವಿವಿದ ಜಿಲ್ಲೆಗಳಿಂದ ಬಂದಿದ್ದ ಒಂದು ಸಾವಿರಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು.

AIDWA ಅಖಿಲ ಭಾರತ ಅಧ್ಯಕ್ಷರು ಹಾಗೂ ಮಾಜಿ ಸಂಸದರು ಪಿ.ಕೆ.ಶ್ರೀಮತಿ ಟೀಚರ್ ಅವರು ಬಹಿರಂಗ ಸಭೆಯನ್ನು ಉದ್ಘಾಟಿಸಿದರು. AIDWA ನ ರಾಷ್ಟ್ರೀಯ ಕಾರ್ಯದರ್ಶಿ ಯು.ವಾಸುಕಿ, ರಾಷ್ಟ್ರೀಯ ಖಜಾಂಚಿ ಪುಣ್ಯವತಿ, ರಾಜ್ಯ ಉಪಾಧ್ಯಕ್ಷರಾದ ಕೆ.ಎಸ್.ವಿಮಲಾ ಹಾಗೂ ಕೆ.ನೀಲಾ ಮತ್ತು ಸ್ವಾಗತ ಸಮಿತಿ ಗೌರವಾಧ್ಯಕ್ಷರಾದ ಶಕುಂತಲಾ ನಾಗರೆಡ್ಡಿ ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದರು. AIDWA ರಾಜ್ಯ ಅಧ್ಯಕ್ಷರಾದ ಡಾ. ಮೀನಾಕ್ಷಿ ಬಾಳಿ ಅವರು ಅಧ್ಯಕ್ಷತೆ ವಹಿಸಿದ್ದರು. ಸ್ವಾಗತ ಸಮಿತಿ ಅಧ್ಯಕ್ಷರಾದ ಸರಸ್ವತಿ ಪಾಟೀಲ್ ಸ್ವಾಗತಿಸಿದರು. ವರಲಕ್ಷ್ಮಿ ಅವರಿಂದ ನಿರ್ವಹಣೆ ಮತ್ತು ಶಕುಂತಲಾ ಪಾಟೀಲ್ ಅವರು ವಂದನಾರ್ಪಣೆ ಮಾಡಿದರು.

ಕೋಮುವಾದ ಮತ್ತು ಮಹಿಳೆ ಕುರಿತಂತೆ ನಿರ್ಣಯ:

ಭಾರತ ಇಂದು ಕೋಮುವಾದಿಗಳ ಕಪಿಮುಷ್ಟಿಗೆ ಸಿಲುಕಿಕೊಂಡಿದೆ. ಜನಾಂಗೀಯ ದ್ವೇಷವ ದೇಶದ ಅಭಿವೃದ್ಧಿಗೆ ಮತ್ತು ಸಮಗ್ರತೆಗೆ ಕಂಟಕವಾಗಿ ಪರಿಣಮಿಸುತ್ತಿದೆ. ಕೋಮುವಾದವನ್ನೇ ತನ್ನ ಅಸ್ತ್ರವಾಗಿಸಿಕೊಂಡಿರುವ ಬಿಜೆಪಿ, ದೇಶದ ಚುಕ್ಕಾಣಿ ಹಿಡಿದ 2014ರಿಂದಲೂ ಜನಾಂಗೀಯ ತಾರತಮ್ಯವನ್ನು ತಾರಕಕ್ಕೆ ಏರಿಸಿದೆ. ಹಿಂದುತ್ವದ ವಿಷಾನಿಲವನ್ನು ಕಾಳ್ಗಿಚ್ಚಿನಂತೆ ಹರಡಿಸಲಾಗುತ್ತಿದೆ. ನಿಜವಾದ ಹಿಂದೂ ಆಗುವುದೆಂದರೆ ಮುಸ್ಲಿಂ ವಿರೋಧಿಗಳಾಗಿರಬೇಕೆಂಬ ದುರ್ಭಾವವನ್ನು ಯುವ ಪೀಳಿಗೆಯಲ್ಲಿ ಕಸಿ ಮಾಡಲಾಗಿದೆ. ಈ ಕೋಮು ವಿಕೃತಿಗೆ ಮುಸ್ಲಿಂ ಮಹಿಳೆಯರು ಮೊದಲ ಬಲಿಪಶುವಾಗುತ್ತಿದ್ದಾರೆ. ಹಿಜಾಬ್ ವಿರೋಧಿ ಹುಚ್ಚಾಟಕ್ಕೆ ಬಲಿಯಾಗಿ ಸಾವಿರಾರು ಮುಸ್ಲಿಂ ಯುವತಿಯರು ಶಿಕ್ಷಣದಿಂದ ವಂಚಿತರಾಗಿದ್ದಕ್ಕೆ ಸಾಕ್ಷಿಯಾಗಿದ್ದೇವೆ. ಪೆಹಲ್ಗಾಮ್ ದಾಳಿಯ ನೆಪದಲ್ಲಿ ಪಾಕಿಸ್ತಾನದ ಮೇಲೆ ಯುದ್ಧ ಸಾರಿದ ಸಂದರ್ಭದಲ್ಲಿ ಸೈನ್ಯದ ಮುಖ್ಯಾಧಿಕಾರಿಯಾಗಿದ್ದ ಸೋಫಿಯಾ ಖುರೇಷಿಯವರನ್ನು ಸಂಘ ಪರಿವಾರದ ಸಂಸದನೊಬ್ಬ ಭಯೋತ್ಪಾದಕರ ಸಹೋದರಿ ಎಂದು ಹಂಗಿಸಿದ್ದು ಕೋಮುದ್ವೇಷದ ನೀಚತನವೇ ಆಗಿದೆ. ಕಲ್ಬುರ್ಗಿಯ ಜಿಲ್ಲಾಧಿಕಾರಿ ಮುಸ್ಲಿಂ ಮಹಿಳೆ ಎಂಬ ಕಾರಣಕ್ಕೆ ಅವರನ್ನು ಬಿಜೆಪಿಯ ಶಾಸಕ ಎನ್.ರವಿಕುಮಾರ್ ಪಾಕಿಸ್ತಾನಿ ಎಂದು ಹಂಗಿಸಿದ್ದು ಕೂಡ ಕೋಮು ದ್ವೇಷದ ಮನೋಭಾವವೇ ಆಗಿದೆ. ಇನ್ನೊಂದೆಡೆ ಸಂಘ ಪರಿವಾರದ ವಕ್ತಾರರು ಮುಸ್ಲಿಂರನ್ನು ನಿರ್ನಾಮಮಾಡಲು ಹಿಂದು ಮಹಿಳೆಯರು ಹೆಚ್ಚೆಚ್ಚು ಹೆರಬೇಕೆಂದು ಪರ್ಮಾನು ಹೊರಡಿಸುತ್ತಾರೆ. ಮತ್ತೊಂದೆಡೆ ಮುಸ್ಲಿಂ ಮಹಿಳೆಯರ ಮೇಲೆ ರೇಪ್ ಮಾಡಬೇಕೆಂದು ಕರೆ ನೀಡುತ್ತಾರೆ. ಸಾಮಾಜಿಕ ಜಾಲತಾಣಗಳಲ್ಲಿ ಮುಸ್ಲಿಂ ಮಹಿಳೆಯರ ಕುರಿತು ಅತ್ಯಂತ ಹೇಯ ಮತ್ತು ಅಸಭ್ಯ ಭಾಷೆ ಬಳಸುತ್ತಿರುವುದನ್ನು ನೋಡುತ್ತಿದ್ದೇವೆ. ಕರಾವಳಿಯಲ್ಲಂತೂ ಕೋಮುದ್ವೇಷ ರಾಜಕಾರಣ ಬಲಗೊಳ್ಳುತ್ತಿದ್ದು ಹಿಂದು ಮುಸ್ಲಿಂ ಮಹಿಳೆಯರಾದಿಯಾಗಿ ಯಾರು ಸುರಕ್ಷಿತರಲ್ಲ ಎಂಬುದು ಹಲವು ಘಟನೆಗಳಿಂದ ಸ್ಪಷ್ಟವಾಗುತ್ತಿದೆ.

ರಾಜ್ಯದಲ್ಲಿ ಘಟಿಸುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯಗಳ ಸಂದರ್ಭದಲ್ಲಿ ಘಟನೆಯನ್ನು ಘಟನೆಯನ್ನಾಗಿ ನೋಡದೆ, ಜಾತಿ–ಧರ್ಮದ ಹಿನ್ನೆಲೆಯ ಪೂರ್ವಾಗ್ರಹಗಳಲ್ಲಿ, ಕೋಮುಭಾವನೆಯನ್ನು ಪ್ರಚೋದಿಸುವ ರಾಜಕಾರಣವು ಅತ್ಯಂತ ಅಪಾಯಕಾರಿಯಾಗಿ ಬಲಗೊಳ್ಳುತ್ತಿದೆ.

ಈ ಹಿನ್ನೆಲೆಯಲ್ಲಿ ಕೋಮುದ್ವೇಷ ರಾಜಕಾರಣದಲ್ಲಿ ಮಹಿಳೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿವೆ. ಸರ್ಕಾರ ಮತ್ತು ಪೋಲೀಸ್ ಇಲಾಖೆ, ರಾಜ್ಯ ಮಹಿಳಾ ಆಯೋಗ, ಮಾನವ ಹಕ್ಕುಗಳ ಆಯೋಗ ಸ್ವಪ್ರೇರಿತ ದೂರುಗಳನ್ನು ದಾಖಲಿಸುವ ಮೂಲಕ ಮತ್ತು ನಿಷ್ಪಕ್ಷಪಾತ ರಾಜಕೀಯ ಮುಕ್ತ ತನಿಖೆಗಳು ಆಗುವಂತೆ, ಆರೋಪಿಗಳು ಶಿಕ್ಷೆಯಿಂದ ಮುಕ್ತರಾಗದಂತೆ ಕ್ರಮ ವಹಿಸಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ 12ನೇ ರಾಜ್ಯ ಸಮ್ಮೇಳನವು ಒತ್ತಾಯಿಸುತ್ತದೆ.

ಇತರೆ ನಿರ್ಣಯಗಳು:

ಧರ್ಮಸ್ಥಳ ಪದ್ಮಲತಾರಿಂದ ಸೌಜನ್ಯವರಗೆ ಅತ್ಯಾಚಾರ, ಕೊಲೆ ಹಾಗೂ ಮೈಕ್ರೋ ಫೈನಾನ್ಸ್, ಭೂಕಬಳಿಕೆ ಈ ಎಲ್ಲ ಪ್ರಕರಣಗಳನ್ನು SIT ತನಿಖೆಗೆ ಅಗ್ರಹಿಸುವ ನಿರ್ಣಯ ಸೇರಿದಂತೆ 12 ನಿರ್ಣಯಗಳನ್ನು ರಾಜ್ಯ ಸಮ್ಮೇಳನದಲ್ಲಿ ತೆಗೆದುಕೊಳ್ಳಲಾಗಿದೆ. * ಜನ ಪ್ರತಿಧಿಗಳು ಮತ್ತು ರಾಜಕಾರಣಿಗಳು ಮಹಿಳಾ ವಿರೋಧಿ ಭಾಷೆ ಮತ್ತು ಮನೋಭಾವ ಬದಲಾಗಬೇಕು. * ಕೋಮುವಾದಿ ಬಿಜೆಪಿ ಮತ್ತು ಸಂಘ ಪರಿವಾರದ ಅನೇಕರು ಬಾನು ಮುಸ್ತಾಕ ಅವರನ್ನು ದಸಾರ ಉದ್ಘಾಟನೆಗೆ ಆಮಂತ್ರಿಸಿದನ್ನು ಕುರಿತು ತಕರಾರು ತೆಗೆಯುತ್ತಿರುವುದನ್ನು ಖಂಡಿಸಿ. * ಎಲ್ಲಾ ಜನರಿಗೆ ಆಹಾರ ಭದ್ರತೆಯನ್ನು ಖಾತ್ರಿಮಾಡಿ,. ಮಹಿಳಾ ಪರ ಆಹಾರ ನೀತಿಯನ್ನು ರೂಪಿಸಿ. * ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ನಿರ್ಮೂಲನೆಗೆ ಒತ್ತಾಯಿಸಿ. * ಸಾರ್ವಜನಿಕ ಆರೋಗ್ಯ ರಂಗವನ್ನು ಬಲಪಡಿಸಿ ಆರೋಗ್ಯದ ಹಕ್ಕನ್ನು ಶಾಸನ ಬದ್ಧಗೊಳಿಸಿ. * ದುಡಿಯುವ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ಕಡ್ಡಾಯಗೊಳಿಸಲು ಒತ್ತಾಯಿಸಿ. * ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಕಿರುಕುಳವನ್ನು ತಡೆಗಟ್ಟಿ ಮಹಿಳೆಯರನ್ನು ಸಾಲ ಬಾಧೆಯಿಂದ ರಕ್ಷಿಸಿ. * ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು ಸ್ಕೀಮ್ ಮಾಡುವುದನ್ನು ಕೈಬಿಟ್ಟು, ಉದ್ಯೋಗ ಖಾತ್ರಿ ಯೋಜನೆಯನ್ನು ನಗರಗಳಿಗೂ ವಿಸ್ತರಿಸಿ. * ಬ್ಯಾಲೆನ್ಸ್ ಟೆನ್‌ನಲ್ಲಿ ಇಸ್ರೇಲ್ ದುರಾಕ್ರಮಣ ನಿಲ್ಲಿಸಲು ಒತ್ತಾಯಿಸಿ. * ಪ್ರತಿ ವರ್ಷವು ಸರಕಾರಿ ಪದವಿ, ಪಿಯು ಕಾಲೇಜುಗಳ ವಿದ್ಯಾರ್ಥಿಗಳು ಉಪನ್ಯಾಸಕರ ಕೊರತೆಯಿಂದಾಗಿ ಪಠ್ಯಗಳ ಪೂರ್ಣ ಬೋಧನೆಯಿಂದ ಮತ್ತು ಮನನದಿಂದ ವಂಚಿತರಾಗುತ್ತಿದ್ದಾರೆ. ಉಪನ್ಯಾಸಕರನ್ನು ನೇಮಿಸಲು ಆಗ್ರಹಿಸಿ ನಿರ್ಣಯ ತೆಗೆದುಕೊಳ್ಳಲಾಯಿತು.

ನೂತನ ರಾಜ್ಯ ಸಮಿತಿ

ಚಂದ್ರ ಕುಮಾರಿ ಅವರನ್ನು ಅಧ್ಯಕ್ಷರನ್ನಾಗಿ, ದೇವಿ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಸುನೀತಾ ಅವರನ್ನು ಖಜಾಂಚಿಯಾಗಿ ಆಯ್ಕೆ ಮಾಡಲಾಯಿತು. ಸಂಘಟನೆಯ ಪೋಷಕರಾಗಿ ವಿಮಲಾ ಕೆ.ಎಸ್. ಹಾಗೂ ನೀಲಾ ಕೆ. ಅವರನ್ನು ಆಯ್ಕೆ ಮಾಡಲಾಯಿತು. 13 ಪದಾಧಿಕಾರಿಗಳನ್ನೊಳಗೊಂಡ 35 ಸದಸ್ಯರ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಉಪಾಧ್ಯಕ್ಷರಾಗಿ ಮೀನಾಕ್ಷಿ ಬಾಳಿ, ಕೆ.ಎಸ್.ಲಕ್ಷ್ಮಿ, ಗೌರಮ್ಮ, ರೇಷ್ಮಾ ಕುಂದನ, ಪದ್ಮಿನಿ ಕಿರಣಗಿ ಆಯ್ಕೆಯಾಗಿದ್ದಾರೆ. ಸಹಕಾರ್ಯದರ್ಶಿಗಳಾಗಿ ಸುಶೀಲಾ, ಬಸಮ್ಮ, ವರಲಕ್ಷ್ಮಿ, ರೇಣುಕಾ ಆಯ್ಕೆಯಾಗಿದ್ದಾರೆ.

ರಾಜ್ಯ ಸಮಿತಿಯ ಇತರೆ ಸದಸ್ಯರು: ಗೀತಾ, ಶಶಿಕಲಾ, ಲತಾ, ಕಲಾವತಿ, ಶೋಭಾ, ಶಾಂತಾ, ಪ್ರಮಿಳಾ, ಕಿರಣಪ್ರಭ, ಶಕುಂತಲಾ, ಶೀಲಾವತಿ, ಅನುಸೂಯ, ವಿಜಯಲಕ್ಷ್ಮಿ, ರುದ್ರಮ್ಮ, ವರಲಕ್ಷ್ಮಿ ಬಳ್ಳಾರಿ, ಪದ್ಮಿನಿ ಕೊಡಗು, ಶಕುಂತಲ, ವಿನೋದ ಹಾಗೂ ಬಸ್ಸಮ್ಮ ವಿಜಾಪುರ. ರಾಜ್ಯ ಸಮಿತಿಯ ವಿಶೇಷ ಆಹ್ವಾನಿತರಾಗಿ ಅರ್ಪಿತ ಆಯ್ಕೆಯಾಗಿದ್ದಾರೆ.



ಎಡದಿಂದ ಬಲಕ್ಕೆ: ಸುನೀತಾ, ದೇವಿ, ಚಂದ್ರಕುಮಾರಿ



ಇದು 2017ರಲ್ಲಿ ಪ್ರಕಟವಾದ 'ಕ್ಯಾಸ್ಟ್ರೋ ಕತೆ' ಪುಸ್ತಕಕ್ಕೆ ಡಾ.ಕೆ.ಪ್ರಕಾಶ್ ಅವರು ಬರೆದ ದೀರ್ಘ ಮುನ್ನುಡಿ. 'ಕ್ಯಾಸ್ಟ್ರೋ ಕತೆ' ಪತ್ರಕರ್ತರೂ ಮತ್ತು ಜಾಗತಿಕ ಪರ್ಯಾಯಗಳ ಚಿಂತಕರೂ ಆದ ಇಗ್ನೇಷಿಯೊ ರಮೋನೆಟ್ ಇವರು ನಡೆಸಿದ "ಫಿಡೆಲ್ ಜೊತೆ ನೂರು ಗಂಟೆಗಳು" ಸಂದರ್ಶನದ ಪುಸ್ತಕ ಆವೃತ್ತಿಯ ("ಮೈ ಲೈಫ್: ಫಿಡೆಲ್ ಕ್ಯಾಸ್ಟ್ರೋ") ಕನ್ನಡ ಸಂಗ್ರಹಾನುವಾದ. ಫಿಡೆಲ್ ಮತ್ತು ಈ ಪುಸ್ತಕ ಎರಡನ್ನೂ ಪರಿಚಯಿಸುವ, ಅದರ ಮಹತ್ವ ಸಾರುವ ಈ ಬರಹ ಸಾರ್ವಕಾಲಿಕ ಪ್ರಸ್ತುತತೆ ಉಳ್ಳದ್ದು. ಫಿಡೆಲ್ ಕ್ಯಾಸ್ಟ್ರೋ ಅವರ ಶತಮಾನೋತ್ಸವದ ಸಂದರ್ಭದಲ್ಲಂತೂ ಜರೂರಿನ ಓದು. ಜತೆಗೆ ಈ ಪುಸ್ತಕದ ಓದು ಸಹ ಇಂದಿನ ಜರೂರಿನ ಓದು.

ಫಿಡೆಲ್ ನಿನ್ನ ಹೆಸರದು ಸಿಡಿಲ್ ಸದ್ದು ಸಾಮ್ರಾಜ್ಯಕ್ಕೆ...

..... ಕಳೆದ ಸಂಚಿಕೆಯಿಂದ

ಫಿಡೆಲ್ ಸತ್ತರೆ ಏನಾಗಬಹುದೆಂಬ ಲೆಕ್ಕಾಚಾರ ಸಾಮ್ರಾಜ್ಯಕ್ಕೆ ತುಂಬಾ ಅಪ್ಯಾಯಮಾನವಾಗಿತ್ತು. ಫಿಡೆಲ್ ನಂತರ ಅಧಿಕಾರದ ಏಣಿಯಲ್ಲಿ ಅಷ್ಟೇ ಸಮರ್ಥರಾದ ನಾಯಕರು ಯಾರೂ ಇಲ್ಲ ಎಂದು ಭಾವಿಸಿದರು. ಪೂರ್ವ ಯೂರೋಪಿನಲ್ಲಾದಂತೆ, ಬರ್ಲಿನ್ ಗೋಡೆಯನ್ನು ಕೆಡವಿ ಹಾಕಿದಂತೆ ಕ್ಯೂಬನ್ ವ್ಯವಸ್ಥೆ ಕುಸಿದು ಬೀಳುತ್ತದೆ ಅಥವಾ ಅದನ್ನು ಕೆಡವಿ ಹಾಕಲಾಗುತ್ತದೆ ಎಂದು ಕೆಲವು ಚಿಂತಕರು ಮತ್ತು ವಿಮರ್ಶಕರು ವಿಶ್ಲೇಷಣೆ ಮಾಡಿದರು. ಆದರೆ ಅದು ಅವರ ಆಶಾ ಗೋಪುರವಾಗಿತ್ತು. ಇದಕ್ಕೆ ವಿರುದ್ಧವಾದ ಪ್ರಕ್ರಿಯೆ ಕ್ಯೂಬಾದಲ್ಲಿ ನಡೆದಿದ್ದನ್ನು ಗುರುತಿಸಲು ಅಮೇರಿಕದ ನೂತನ ಪ್ರತಿಗಾಮಿಗಳು ವಿಫಲರಾಗಿದ್ದರು. ಕ್ಯೂಬಾದ ವ್ಯವಸ್ಥೆ ಪೂರ್ವ ಯೂರೋಪಿನ ರೀತಿಯಲ್ಲಿ ಹೊರಗಿನಿಂದ ಹೇರಲ್ಪಟ್ಟಿದ್ದಲ್ಲ, ಬದಲಿಗೆ ಜನತೆಯ ಚಳುವಳಿಯ ಮೂಲಕ ರೂಪಿಸಲ್ಪಟ್ಟಿತ್ತು ಎಂಬುದನ್ನು ಅವರು ಗುರುತಿಸದಾದರು. ತಮ್ಮ ದೈಹಿಕ ಸಮಸ್ಯೆಯಿಂದಾಗ ಜುಲೈ 2006ರಲ್ಲಿ ಫಿಡೆಲ್ ಪ್ರಭುತ್ವದ ಎಲ್ಲಾ ಅಧಿಕಾರವನ್ನು ರಾಲ್ ಕ್ಯಾಸ್ಟ್ರೋ ನೇತೃತ್ವದ ಏಳು ಜನರ ಕೈಗೆ ಹಸ್ತಾಂತರಿಸಿದಾಗ ಅಮೇರಿಕದ ಪ್ರತಿಗಾಮಿ ಶಕ್ತಿಗಳು ಕ್ಯೂಬಾ ಕುಸಿತದ ಭ್ರಮೆಯಲ್ಲಿ ಮುಳುಗಿದ್ದರು. ಕೆಲವರಂತೂ ಕೂಡಲೇ ಕ್ಯೂಬಾದಲ್ಲಿ ಪ್ರತಿಕ್ರಾಂತಿಯನ್ನು ಸಂಘಟಿಸಿ ಅಧಿಕಾರ ಹಿಡಿಯುವಂತೆ ಕರೆ ನೀಡಿದರೂ ಕೂಡಾ!

ಸಮಾಜವಾದಿ "ಪ್ರಭುತ್ವವನ್ನು ಉರುಳಿಸಲು, ಮಿಲಿಟರಿ ಮತ್ತು ನಾಗರಿಕ ದಂಗೆ ನಡೆಸಬೇಕೆಂದು" ಕ್ಯೂಬನ್–ಅಮೇರಿಕನ್ ನ್ಯಾಷನಲ್ ಫೌಂಡೇಷನ್ ಕರೆ ನೀಡಿತು. ಅಮೇರಿಕದ ಅಧ್ಯಕ್ಷ ಜಾರ್ಜ್ ಡಬ್ಲ್ಯು.ಬುಷ್ ಕ್ಯೂಬನ್ ಜನತೆಗೆ ಸಂದೇಶವನ್ನು ಕಳುಹಿಸಿ ರಾಷ್ಟ್ರೀಯ ದಂಗೆಯನ್ನು ನಡೆಸಲು ಕರೆ ನೀಡಿದರು: "ಪ್ರಜಾಪ್ರಭುತ್ವ ಪಥಕ್ಕೆ ಬದ್ಧವಾದ ಒಂದು ಸ್ಥಿತ್ಯಂತರ ಸರ್ಕಾರವನ್ನು... ಸ್ಥಾಪಿಸುವ ನಿಮ್ಮ ಪ್ರಯತ್ನಗಳನ್ನು ನಾವು ಬೆಂಬಲಿಸುತ್ತೇವೆ" ಎಂದು ಹೇಳಿದರು. "ಮುಕ್ತ ಕ್ಯೂಬಾ"ವನ್ನು ವಿರೋಧಿಸುವ ಕ್ರಾಂತಿಯ ಬೆಂಬಲಿಗರನ್ನು ತೀವ್ರವಾಗಿ ಪರಿಗಣಿಸುತ್ತೇವೆ ಎಂದು ಎಚ್ಚರಿಸಿದರು. ಆದರೆ ಕಾಲ ಕಳೆದಂತೆ ಕ್ಯೂಬಾದಲ್ಲಿ ಅಂತಹ ಯಾವುದೇ ಬೆಳವಣಿಗೆಗಳು ನಡೆಯಲಿಲ್ಲ. ಕ್ಯೂಬನ್ ಕ್ರಾಂತಿ ಹೊರಗಿನಿಂದ ಹೇರಿದ್ದಲ್ಲ, ಆ ಸಮಾಜದೊಳಗಿಂದ ಅಲ್ಲಿನ ಜನತೆ ಕಟ್ಟಿದ್ದು ಎಂಬುದನ್ನು ಜಗತ್ತಿಗೆ ಸಾರಿ ಹೇಳಿದರು. ಅಮೇರಿಕದ ಆಕ್ರಮಣದ ವಿರುದ್ಧ ಕ್ಯೂಬನ್ ಜನತೆಯ ಚಾರಿತ್ರಿಕವಾದ ಹೋರಾಟದ ಪರಂಪರೆಯಲ್ಲಿ ಬೇರುಬಿಟ್ಟ ದೇಶಪ್ರೇಮದ ಕ್ರಾಂತಿಯದು. ಹೀಗಾಗಿ ಕ್ಯೂಬನ್ನರ ವಿಚಾರಗಳಲ್ಲಿ ಕ್ರಾಂತಿ ಬೆರೆತು ಹೋಗಿದೆ. ಎಲ್ಲಿವರೆಗೆ ಬಹುಸಂಖ್ಯಾತ ಕ್ಯೂಬನ್ನರು ಸಮಾಜವಾದಿ ವಿಚಾರಗಳ ಆಧಾರದಲ್ಲಿ ಪ್ರೇರಿತರಾಗಿರುತ್ತಾರೋ, ಅಲ್ಲಿಯವರೆಗೆ ಅಮೇರಿಕದ ಪ್ರತಿಗಾಮಿ ಶಕ್ತಿಗಳ ಕನಸು ನನಸಾಗುವುದಿಲ್ಲ.

ರಷ್ಯನ್ ಕ್ರಾಂತಿಯ ಮೂಲಕ ಜಗತ್ತಿನ ಮೇಲೆ ಪ್ರಭಾವ ಬೀರಿದ ಲೆನಿನ್ ನಂತರ ಅಂತಹುದೊಂದು ಪ್ರಭಾವ ಬೀರಿದ್ದು ಫಿಡೆಲ್ ಎಂದರೆ ತಪ್ಪಾಗಲಿಕ್ಕಿಲ್ಲ. ಮೂರನೇ ಜಗತ್ತಿನ ಎಡ ಮತ್ತು ಪ್ರಗತಿಪರ ಚಳುವಳಿಗಳ ಮೇಲೆ ಅಪಾರ ಪರಿಣಾಮವನ್ನು ಬೀರಿದ ಕ್ಯೂಬಾದ ಸಮಾಜವಾದಿ ಕ್ರಾಂತಿಯು, ಫಿಡೆಲ್‌ರ ಮಾರ್ಕ್ಸ್‌ವಾದಿ ಸಿದ್ಧಾಂತ ಮತ್ತು ಆಚರಣೆಯ ಒಂದು ಕಾಣಿಕೆಯಾಗಿದೆ. ಚೀನಾದಲ್ಲಿ ಮಾವೋ ಮತ್ತು ವಿಯೆಟ್ನಾಂನಲ್ಲಿ ಹೊ ಚಿ ಮಿನ್ಹ್ ಅವರಂತೆ ಫಿಡೆಲ್ ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿದ್ದಾರೆ.

ಕ್ಷಣ ಕ್ಷಣವೂ ಅಮೇರಿಕದ ಸಾಮ್ರಾಜ್ಯಶಾಹಿಗಳ ಕುತಂತ್ರಗಳನ್ನು ಎದುರಿಸುತ್ತಾ ಇಡೀ ಜೀವನವನ್ನು ಜನತೆಗಾಗಿ ಮುಡಿಪಿಟ್ಟ ಫಿಡೆಲ್‌ರದು ತೆರದಿಟ್ಟ ಬದುಕು. ತಮ್ಮ ತಂದೆ ಸಂಪಾದಿಸಿದ್ದ ಸುಮಾರು 25,000 ಎಕರೆ ಭೂಮಿಯನ್ನು ಕ್ರಾಂತಿಯಾಗುತ್ತಲೇ ಜನರಿಗೆ ಫಿಡೆಲ್ ಹಂಚಿಕೆ ಮಾಡಿದರು. ವಾರದ ಏಳೂ ದಿನವೂ ಕೆಲಸ ಮಾಡುತ್ತಿದ್ದ ಫಿಡೆಲ್‌ಗೆ ದಿನ ಕೊನೆಯಾಗುತ್ತಿದ್ದುದು ಮುಂಜಾನೆ 4 ಅಥವಾ 5 ಗಂಟೆಗೆ. ದಿನವೊಂದಕ್ಕೆ ಸರಾಸರಿ 4 ಗಂಟೆ ನಿದ್ರೆ ಮಾಡುತ್ತಿದ್ದ ಫಿಡೆಲ್ ಅತ್ಯಂತ ಕ್ರಿಯಾಶೀಲ ಮತ್ತು ಅಪಾರ ಜ್ಞಾನ ಸಂಪತ್ತಿನ ಕಣಜ. ಭವಿಷ್ಯದ ಬಗ್ಗೆ ಅಂದಾಜು ಮಾಡುವುದು ಮತ್ತು ಇತಿಹಾಸದ ಬಗ್ಗೆ ಆಸಕ್ತಿ ಫಿಡೆಲ್‌ರ ವಿಶೇಷ. ಅವರ ದಣಿವರಿಯದ ದುಡಿತದ ವೇಗಕ್ಕೆ ಯಾರೂ ಸಾಟಿಯಿಲ್ಲ. ಜಾಗತೀಕರಣದ ಅಪಾಯಗಳ ಬಗ್ಗೆ ಯುವಜನತೆಯನ್ನು ಸಜ್ಜುಗೊಳಿಸಲು ತುಂಬಾ ಮಹತ್ವ ನೀಡುತ್ತಿದ್ದರು. ಫಿಡೆಲ್ ನಿಖರತೆ, ಖಚಿತತೆ, ನಿಷ್ಕೃಷ್ಟತೆ, ಶಿಸ್ತು ಇವುಗಳನ್ನು ತುಂಬಾ ಪಾಲಿಸುತ್ತಿದ್ದರು. ಯಾವುದೇ ವಿಚಾರದಲ್ಲಿ ಗಣಿತದ ರೀತಿಯ ಖಚಿತತೆ ಬಯಸುತ್ತಿದ್ದರು. ಅಂದಾಜು ಮಾಡಿ ಹೇಳುವುದನ್ನು ಅವರು ಒಪ್ಪುತ್ತಿರಲಿಲ್ಲ. ಜ್ಞಾಪಕ ಶಕ್ತಿಗೆ ಮತ್ತೊಂದು ಹೆಸರನ್ನು ಏನಾದರೂ ಕೊಡುವುದಿದ್ದರೆ ಅದನ್ನು ಫಿಡೆಲ್ ಎನ್ನಬೇಕು. ಕ್ಯೂಬಾದ ಜನಮನವೆಲ್ಲವನ್ನೂ ಆವರಿಸಿಕೊಂಡಿದ್ದ ಫಿಡೆಲ್ ಭೌತಿಕವಾಗಿ ಇಲ್ಲವೆನ್ನುವ ಸಂಗತಿಯನ್ನು ಒಪ್ಪಿಕೊಳ್ಳುವುದಕ್ಕೆ ಕಾಲ ಹಿಡಿಯುತ್ತದೆ. ಆದರೆ ಹೆಚ್ಚುತ್ತಿರುವ ಬಂಡವಾಳಶಾಹಿ ಜಾಗತೀಕರಣದ ಪ್ರಸ್ತುತ ಸಂದರ್ಭದಲ್ಲಿ ಫಿಡೆಲ್‌ರ ವಿಚಾರಗಳು ಜೀವಂತವಾಗಿವೆ. ಭಾರತದಲ್ಲಿನ ಜನಪರ ಮತ್ತು ಕ್ರಾಂತಿಕಾರಿ ಹೋರಾಟಗಳಿಗೆ ಒಂದು ಸಮೃದ್ಧ ಅನುಭವವಾಗಿ ಫಿಡೆಲ್ ಮತ್ತು ಕ್ಯೂಬಾ ನಮ್ಮ ಮುಂದಿದ್ದಾರೆ.

ಒಬ್ಬ ಕ್ರಾಂತಿಕಾರಿಗೆ ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದ ಕಾಂಪಾಸ್ ಇದ್ದ ಹಾಗೆ, ಅದಿಲ್ಲದೆ ಮುನ್ನಡೆಯಲಾಗದು ಎಂಬುದು ಫಿಡೆಲ್ ವಾದ. 'ಸಮಾಜವಾದ ಇಲ್ಲವೇ ಸಾವು' ಎನ್ನುವ ಫಿಡೆಲ್‌ರ ಘೋಷಣೆಗಳು ಹತಾಶೆಯ ಮಾತುಗಳಲ್ಲ, ಬದಲಿಗೆ ಅವು 'ವೈಚಾರಿಕ ಸಂಘರ್ಷ'ದ ಪ್ರತೀಕವಾಗಿವೆ. 'ವ್ಯಕ್ತಿಗಳನ್ನು ಕೊಲ್ಲಬಹುದು, ಚಿಂತನೆಗಳನ್ನು ಕೊಲ್ಲಲಾಗದು' ಎಂದು ಬಲವಾಗಿ ಪ್ರತಿಪಾದಿಸಿದ ಫಿಡೆಲ್, ಜಾಗತೀಕರಣವನ್ನು ಎದುರಿಸಲು ಜಗತ್ತಿನ ತುಂಬೆಲ್ಲಾ ಸಮಾಜವಾದಿ ಚಿಂತನೆಗಳನ್ನು ಜಾಗತೀಕರಿಸಬೇಕು ಎನ್ನುತ್ತಾರೆ.



ಈ ರೀತಿಯಾಗಿ ಫಿಡೆಲ್‌ರನ್ನು ಸಮಗ್ರವಾಗಿ ಜಗತ್ತಿಗೆ ತೆರೆದಿಟ್ಟ ಇಗ್ನೇಷಿಯೊ ರಮೊನೆಟ್‌ರವರು (Ignacio Ramonet) ಜಿಯೋಪೊಲಿಟಿಕ್ಸ್, ಅರ್ಥಶಾಸ್ತ್ರ, ಸಂಸ್ಕೃತಿ ಇತಿಹಾಸದ ತಜ್ಞರು. ಪ್ಯಾರಿಸ್‌ನಲ್ಲಿರುವ ಡೆನಿಸ್ ಡಿದೆರಾಟ್ ವಿಶ್ವವಿದ್ಯಾಲಯದಲ್ಲಿ ಸಂವಹನ ಸಿದ್ಧಾಂತದ ಪ್ರಾಧ್ಯಾಪಕರು. ಫ್ರೆಂಚ್ ಮ್ಯಾಗಜೈನ್ ಲೆ ಮಾಂಡೆ ಡಿಪ್ಲೊಮ್ಯಾಟಿಕ್‌ನ (Le Monde Diplomatique) ದೀರ್ಘಕಾಲದ ಸಂಪಾದಕರು. ಪೋರ್ಟ್ ಅಲೆಗ್ರೆಯಲ್ಲಿ ನಡೆದ ಮೊದಲ ವಿಶ್ವ ಸಾಮಾಜಿಕ ವೇದಿಕೆಯನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಮೀಡಿಯಾ ವಾಚ್ ಗ್ಲೋಬಲ್ ಎಂಬ ಎನ್‌ಜಿಓ ನಡೆಸುತ್ತಾರೆ. ನಿಯಮಿತವಾಗಿ ಎಲ್ ಪಾಯ್ಸ್‌ಗೆ (El Pais) ಬರೆಯುತ್ತಾರೆ. ಅಮೇರಿಕದ ಟಿವಿ ಸಾಮ್ರಾಜ್ಯಶಾಹಿ ಹಿಡಿತದ ವಿರುದ್ಧವಾಗಿ ಚಾವೇಜ್, ಫಿಡೆಲ್ ಮತ್ತಿತರರ ಮುತುವರ್ಜಿಯಿಂದ ಆರಂಭವಾದ ದಕ್ಷಿಣ ಅಮೇರಿಕದ ಪರ್ಯಾಯ ದೂರದರ್ಶನ ಜಾಲ ಟೆಲಿಸೂರ್‌ನ (TeleSUR) ಸಲಹಾ ಮಂಡಳಿಯಲ್ಲಿದ್ದಾರೆ.

ಹೀಗಿರುವಾಗ, ಸಂಗಾತಿ ವಸಂತರಾಜ್ ಅವರು ಈ ಪುಸ್ತಕವನ್ನು ಒಮ್ಮೆ ತೋರಿಸಿ ಇದನ್ನು ಕನ್ನಡಕ್ಕೆ ತಂದರೆ ಹೇಗೆ ಎಂದು ಕೇಳಿದರು. ನಾನು ಕೂಡಲೇ ಹೌದು ಎಂದು ಹೇಳಿದೆ. ನನ್ನ ತಕ್ಷಣದ ಒಪ್ಪಿಗೆಗೆ ಎರಡು ಕಾರಣಗಳಿದ್ದವು. ಫಿಡೆಲ್ ಬಗ್ಗೆ ಮತ್ತು ಪುಟ್ಟ ರಾಷ್ಟ್ರದ ಸಾಹಸಗಳ ಬಗ್ಗೆ ನನಗಿದ್ದ ಆಸಕ್ತಿ, ಮತ್ತು ನಾನು 1997 ರಲ್ಲಿ ಹವಾನಾದಲ್ಲಿ ನಡೆದ 'ವಿಶ್ವ ವಿದ್ಯಾರ್ಥಿ ಮತ್ತು ಯುವಜನ ಉತ್ಸವ'ದಲ್ಲಿ ಭಾಗವಹಿಸಿದ್ದೆ. ಅಲ್ಲಿ ಫಿಡೆಲ್‌ರನ್ನು ನೋಡಿದ್ದೆ, ರೋಮಾಂಚಿತನಾಗಿದ್ದೆ ಎಂಬ ಕಾರಣಕ್ಕೆ.

ರಮೊನೆಟ್ ಯಾವ ಸದುದ್ದೇಶದಿಂದ ಇಂತಹ ಒಂದು ಸಾಹಸ ಯಾತ್ರೆಯನ್ನು ಕೈಗೊಂಡರೋ ಅದನ್ನು ಕನ್ನಡದ ಓದುಗರಿಗೆ ತಲುಪಿಸುವ ಮಹದಾಸೆಯನ್ನು ನಾವು ಹೊಂದಿದೆವು. ರಮೊನೆಟ್‌ರ ನೂರು ಗಂಟೆಗಳ ಸಂದರ್ಶನ ಪುಸ್ತಕ ಫಿಡೆಲ್‌ರ ಪ್ರಾರಂಭದ ದಿನಗಳಿಂದ ಸುಮಾರು 2005 ಇಸವಿಯವರೆಗೆ ಒಳಗೊಳ್ಳುತ್ತದೆ. ಸುಮಾರು 700 ಕ್ಕೂ ಹೆಚ್ಚು ಪುಟಗಳನ್ನು ಹೊಂದಿದೆ. ಇದನ್ನು ಯಥಾವತ್ತಾಗಿ ಭಾಷಾಂತರ ಮಾಡಿದರೆ ಕನ್ನಡದ ಸಾಮಾನ್ಯ ಓದುಗರನ್ನು ಹೆಚ್ಚಿನ ಪ್ರಮಾಣದಲ್ಲಿ ತಲುಪಲು ಕಷ್ಟಸಾಧ್ಯವಾಗುತ್ತದೆ

ಪುಟ 06 ಕ್ಕೆ

ಫಿಡೆಲ್ ನಿನ್ನ ಹೆಸರದು...

....ಪುಟ 5 ರಿಂದ

ಎಂದು ಭಾವಿಸಿದೆವು. ಓದುಗರ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಅದರ ಮೂರನೇ ಒಂದು ಭಾಗದಷ್ಟು ಕನ್ನಡದ ಪುಸ್ತಕವನ್ನು ತರಬೇಕೆಂದು ಯೋಚಿಸಿದೆವು. ಇದನ್ನು ಯೋಜಿಸಿ ಮೂರು ವರ್ಷಗಳೇ ಕಳೆದಿತ್ತು. ನಡುವೆ ಜನಶಕ್ತಿ ಪತ್ರಿಕೆಯಲ್ಲಿ ಧಾರವಾಹಿಯಾಗಿ ಬರುತ್ತಿತ್ತು. ಫಿಡೆಲ್‌ರದು ನೂರಕ್ಕೆ ಮುಂಚೆ ಸಾಯುವ ಭೌತಿಕ ದೇಹವಲ್ಲ ಎಂಬ ನನ್ನ ವಿಚಿತ್ರ ನಂಬಿಕೆಯೂ ಈ ನಿಧಾನಗತಿಗೆ ಕಾರಣವಾಗಿತ್ತು. ಈ ನಡುವೆ ಈ ಕಥಾನಕದ ಕೇಂದ್ರ ಬಿಂದು ಫಿಡೆಲ್ ತಮ್ಮ ಇಳಿ ವಯಸ್ಸಿನಲ್ಲಿ ತೀರಿಕೊಂಡರು. ಬದುಕಿರುವಾಗ ಫಿಡೆಲ್‌ರನ್ನು ಹೆಚ್ಚು ಓದುವಂತೆ ಮಾಡಲಾಗದಿದ್ದರೂ, ಅವರ ಚಿಂತನೆಗಳ ಮೂಲಕ ಹೆಚ್ಚು ಓದುವಂತೆ ಮಾಡಬೇಕೆಂಬ ಆಶಯದಿಂದ ಈ ಪುಸ್ತಕವನ್ನು ಈಗ ನಿಮ್ಮ ಕೈಗಿಡಲಾಗುತ್ತಿದೆ. ಕನ್ನಡದ ಈ ಕೃತಿ ಇಗ್ನೇಷಿಯೋ ರಮೊನೆಟ್ ಅವರ ಕೃತಿಯ ಯಥಾವತ್ ಭಾಷಾಂತರವಲ್ಲ. ಕೆಲವು ಮಾಹಿತಿಗಳನ್ನು ಬೇರೆ ಮೂಲಗಳಿಂದಲೂ ಪಡೆದು ಇದರಲ್ಲಿ ಬಳಸಲಾಗಿದೆ. ಆದರೆ ತಿರುಳು ರಮೊನೆಟ್‌ರದೇ ಆಗಿದೆ.

ಸಮಾಜವಾದಿ ಬಣ ಕುಸಿದು, ಸೋವಿಯತ್ ರಷ್ಯಾ ವಿಘಟನೆಯಾಗಿ, ಕ್ಯೂಬಾ "ವಿಶೇಷ ಅವಧಿ"ಗೆ ಒಳಗಾದಾಗ, ಭಾರತದಾದ್ಯಂತ ಬೀದಿ ಬೀದಿಗಳಲ್ಲಿ ಆಹಾರವನ್ನು ಮತ್ತು ಔಷಧಿಗಳನ್ನು ಸಂಗ್ರಹ ಮಾಡಿ ಕ್ಯೂಬಾಕ್ಕೆ ಕಳುಹಿಸಲಾಗಿತ್ತು. "ಕ್ಯೂಬಾ ಸೌಹಾರ್ದತಾ ಸಮಿತಿ"ಗಳನ್ನು ರಚಿಸಲಾಗಿತ್ತು. ಬೆಂಗಳೂರಿನಲ್ಲಿ ಕಮ್ಯುನಿಸ್ಟ್ ಪಕ್ಷಗಳ ಕಾರ್ಯಕರ್ತರು, ಸಮಾಜವಾದಿಗಳು, ಸಾಹಿತಿಗಳು, ಬರಹಗಾರರು, ಕವಿಗಳು, ಬುದ್ಧಿಜೀವಿಗಳು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು, ಹೀಗೆ ವಿವಿಧ ವಿಭಾಗಗಳ ಜನರನ್ನು ಇದರಲ್ಲಿ ಒಳಗೊಳ್ಳಲಾಗಿತ್ತು. ಈ ರೀತಿ ದೇಶಾದ್ಯಂತ ಸಂಗ್ರಹ ಮಾಡಿದ 10,105 ಟನ್ ಆಹಾರವನ್ನು ಮತ್ತು ಔಷಧಿಯನ್ನು ಹೊತ್ತ ಸೌಹಾರ್ದತಾ ಹಡಗು, ಅಂದಿನ ಭಾರತದ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ.ಹರ್ಕಿಷನ್‌ಸಿಂಗ್ ಸುರ್ಜಿತ್ ಮತ್ತು ಭಾರತದ 'ಕ್ಯೂಬಾ ಸೌಹಾರ್ದತಾ ಸಮಿತಿ'ಯ ಸಂಚಾಲಕರಾಗಿದ್ದ ಕಾಂ.ಎಂ.ಎ.ಬೇಬಿ ಅವರ ನೇತೃತ್ವದಲ್ಲಿ ಹವಾನಾ ಬಂದರು ತಲುಪಿದಾಗ ಸ್ವತಃ ಫಿಡೆಲ್ ಬಂದು ಅದನ್ನು ಸ್ವಾಗತಿಸಿದರು. "10,105 ಟನ್ ಗೋಧಿ ಮತ್ತು ಔಷಧಿಗಳು ಕೇವಲ ಸಾಂಕೇತಿಕವಲ್ಲ, ಅದಕ್ಕಿಂತಲೂ ಹೆಚ್ಚು, ಇವು 10,105 ಟನ್‌ಗಳಷ್ಟು ಸೌಹಾರ್ದತೆ ಮತ್ತು ನೈತಿಕ ಬೆಂಬಲ. ಇವು ನಮ್ಮನ್ನು ಹೆಚ್ಚು ಅಂತರ್‌ರಾಷ್ಟ್ರೀಯಗೊಳಿಸುತ್ತವೆ, ಮಾತ್ರವಲ್ಲ ಹೆಚ್ಚು ದೇಶಪ್ರೇಮಿಗಳನ್ನಾಗಿ, ಹೆಚ್ಚು ಕ್ರಾಂತಿಕಾರಿಗಳನ್ನಾಗಿ ಮತ್ತು ನಮ್ಮ ವೈಭವದ ಉದ್ದೇಶವನ್ನು ರಕ್ಷಿಸಿಕೊಳ್ಳಲು ಹೆಚ್ಚು ದೃಢತೆಯುಳ್ಳವರನ್ನಾಗಿ ಮಾಡುತ್ತದೆ" ಎಂದು ಘೋಷಿಸಿದರು.



ಭಾರತದ ಜೊತೆಗಿನ ಕ್ಯೂಬನ್ ಭಾಂಧವ್ಯ ಕೇವಲ ಸಾಂಕೇತಿಕವಾದುದಲ್ಲ. 1997ರಲ್ಲಿ ವಿಶ್ವ ವಿದ್ಯಾರ್ಥಿ ಯುವಜನ ಉತ್ಸವದಲ್ಲಿ ಭಾರತದ ನಿಯೋಗಕ್ಕೆ ಕ್ಯೂಬನ್ ಜನರು ನೀಡಿದ ಅಭೂತಪೂರ್ವ ಕರತಾಡನವನ್ನು ನಾನೆಂದಿಗೂ ಮರೆಯಲು ಸಾಧ್ಯವಿಲ್ಲ. ಹತ್ತಾರು ಸಹಸ್ರ ಕಿ.ಮೀ. ದೂರವಿರುವ ಭಾರತದ ಬಗೆಗ್ಯಾಕೆ ಈ ಕ್ಯೂಬನ್ನರಿಗೆ ಇಷ್ಟೊಂದು ಪ್ರೀತಿ ಎಂಬುದು ಆಗ ಕೇವಲ ರೋಮಾಂಚನದ ವಿಷಯವಾಗಿತ್ತು. ವಸಾಹತುಶಾಹಿಯ ವಿರುದ್ಧ, ಸಾಮ್ರಾಜ್ಯವಾದದ ವಿರುದ್ಧ, ನವ–ಉದಾರವಾದದ ವಿರುದ್ಧ, ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆಯುವ ಅನ್ಯಾಯದ ವಿರುದ್ಧ ನೀನು ಸಿಡಿದೆದ್ದರೆ ಆಗ ನೀನು ನನ್ನ ಸಂಗಾತಿ ಎಂದ ಚೆ ಗೆವಾರನ ಆಶಯದಂತೆ ಧ್ವನಿಯೆತ್ತುತ್ತಿದ್ದ ಭವ್ಯ ಭಾರತದ ಜನತೆಗೆ ನೀಡಿದ ಕರತಾಡನವದು ಎಂದು ನಂತರ ತಿಳಿದಿತ್ತು.

ಬದಲಾವಣೆಯಲ್ಲಿ ಅಚಲ ನಂಬಿಕೆ ಹೊಂದಿದ್ದ ಫಿಡೆಲ್‌ರ ಭೌತಿಕ ದೇಹ ನಮ್ಮೊಂದಿಗಿಲ್ಲ. ಫಿಡೆಲ್‌ರ ನಂತರ ಕ್ಯೂಬಾವನ್ನು ಮುಗಿಸಿಬಿಡಬಹುದೆಂಬ ಅಮೇರಿಕನ್ ಸಾಮ್ರಾಜ್ಯದ ಕನಸು ನನಸಾಗದಂತೆ ಕ್ಯೂಬನ್ ಜನತೆ ತಡೆಯುತ್ತಾರೆ. ಯಾಕೆಂದರೆ ಅವರು ನಡೆಸುವ ಯುದ್ಧದಲ್ಲಿ ಶಸ್ತ್ರಾಸ್ತ್ರಗಳಿಲ್ಲ. ವಿಚಾರಗಳೆಂಬುದು ಕ್ಯೂಬನ್ನರ ತಲೆಯನ್ನು ಹೊಕ್ಕು ಆಯುಧಗಳಾಗಿವೆ. ಕೇವಲ ಒಂದು ಕೋಟಿ ಜನತೆಯ ವೈಚಾರಿಕ ಸಾಮರ್ಥ್ಯ ಜಗತ್ತಿನ ಸಾಮ್ರಾಜ್ಯವನ್ನು ನಿದ್ದೆಗೆಡಿಸಿದೆ. ಸಾಮ್ರಾಜ್ಯದ ಮೂರು ಪಟ್ಟು ಜನಸಂಖ್ಯೆಯನ್ನು ಹೊಂದಿರುವ ಬೃಹತ್ ಭಾರತದ 130 ಕೋಟಿ ಜನತೆ ಸಮಾಜವಾದವೆಂಬ ವೈಚಾರಿಕ ಅಸ್ತ್ರಗಳನ್ನು ಹಿಡಿದರೆ? ಬದಲಾಗುತ್ತಿರುವ ಭಾರತದಿಂದ ಫಿಡೆಲ್, ಕ್ಯೂಬಾ, ಇಡೀ ಜಗತ್ತು ಬಯಸುತ್ತಿರುವುದು ಇದನ್ನೇ ಎಂದೆನಿಸುತ್ತದೆ.

(ಮುಗಿಯಿತು)

ಕಲಾಕೃತಿಗಳಾಗಿ ರೂಪಗೊಂಡ ವಿಜೂ ಕೃಷ್ಣನ್ ಅವರ ಛಾಯಾಚಿತ್ರ ಪ್ರದರ್ಶನ...

ಪುಟ 16 ರಿಂದ

ಹೋದಾಗ ಅಲ್ಲಿದ್ದವರ ಕಣ್ಣುಗಳಲ್ಲಿನ ನಿರೀಕ್ಷೆ, ದುಃಖ, ಆತಂಕ ಎಲ್ಲವೂ ಮಡುಗಟ್ಟಿತ್ತು. ಇಲ್ಲಿ ನಾನು ತೆಗೆದ ಕೆಲವು ಫೋಟೋಗಳು ಅದರಲ್ಲೂ ಒಬ್ಬ ಬಾಲಕನ ಫೋಟೋ, ಅದರಲ್ಲೂ ಅವನ ಕಣ್ಣುಗಳು "ಭಾರತದ ನಾಗರೀಕರ ಮೇಲೆ ಇಷ್ಟೊಂದು ಕ್ರೂರ ದಬ್ಬಾಳಿಕೆ ನಡೆಯುತ್ತಿದ್ದರೂ ನೀವುಗಳೆಲ್ಲಾ ಸುಮ್ಮನಿದ್ದೀರಲ್ಲಾ" ಎಂದು ನಮ್ಮೆಲ್ಲರನ್ನು ಉದ್ದೇಶಿಸಿ ಹೇಳುವಂತಿವೆ. ಈ ಫೋಟೋ ನನ್ನನ್ನು ತುಂಬಾ ಕಾಡಿದೆ. ಹಲವರು ಈ ರೀತಿ ವ್ಯಕ್ತಿಗಳ ಫೋಟೋಗಳನ್ನು ಅವರ ಅನುಮತಿ ಇಲ್ಲದೆ ತೆಗೆದು ಪ್ರದರ್ಶಿಸಬಾರದು ಎಂದು ವಾದಿಸುತ್ತಾರೆ. ಆದರೆ ಕೆಲವು ಘಟನೆಗಳನ್ನು ಸಮಾಜಕ್ಕೆ ನೆನಪಿಸಬೇಕಾದರೆ, ಅದರಿಂದ ಸಮಾಜಕ್ಕೆ ಒಂದು ಸಂದೇಶ ಕೊಡಬೇಕಾದರೆ, ಇಂತಹ ಕೆಲವು ಫೋಟೋಗಳನ್ನು ತೆಗೆಯುವುದು ಅನಿವಾರ್ಯವಾಗುತ್ತದೆ.

ಉದಾಹರಣೆಗೆ ನಾಜಿ ಹಿಟ್ಲರ್‌ನ ಕಾನ್ಸಂಟ್ರೇಷನ್ ಕ್ಯಾಂಪ್‌ನ ಕ್ರೂರತೆ ಬಗ್ಗೆ ಇಂದಿಗೂ ನಾವು ಫೋಟೋಗಳನ್ನು ನೋಡಿಯೇ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು. ಅಂತಹದ್ದೇ ಒಂದು ಫೋಟೋ ಅಮೇರಿಕಾ ವಿಯೆಟ್ನಾಂ ಮೇಲೆ ಬಾಂಬ್ ದಾಳಿ ನಡೆಸಿದಾಗಿನ ಭೀಕರ ಪರಿಸ್ಥಿತಿಯನ್ನು ಚಿತ್ರಿಸುವ ಒಂದು ಪುಟ್ಟ ಬಾಲಕಿಯ ಫೋಟೋ. ಇವು ಕೇವಲ ಘಟನೆಗಳನ್ನು ದಾಖಲಿಸುವ ಫೋಟೋಗಳು ಮಾತ್ರವಲ್ಲ, ಬದಲಾಗಿ ಅಂತಹ ಅಮಾನವೀಯ ಕ್ರೌರ್ಯದ ವಿರುದ್ಧ ಜನರನ್ನು ಜಾಗೃತರನ್ನಾಗಿ ಮಾಡುವ ಒಂದು ಅಸ್ತ್ರವೂ ಹೌದು.



ಮತ್ತೊಂದು ಫೋಟೋ ತಮಿಳುನಾಡಿನಲ್ಲಿ ಆನೆ ಕಾರಿಡಾರ್ ಹೆಸರಿನಲ್ಲಿ ಅಲ್ಲಿಯ ಆದಿವಾಸಿಗಳನ್ನು ಒಕ್ಕಲೆಬ್ಬಿಸಿದ ಸಂದರ್ಭದಲ್ಲಿ ತೆಗೆದ ಆದಿವಾಸಿ ಮಹಿಳೆಯರದ್ದು. ಇನ್ನೊಂದು, ತಿರುಚಿಯಲ್ಲಿ ಕಳೆದ 40 ವರ್ಷಗಳಿಂದ ಹಮಾಲಿ ಕೆಲಸ ಮಾಡುತ್ತಿರುವ ಒಬ್ಬ ಕಾರ್ಮಿಕನ ಫೋಟೋ. ತಮಿಳುನಾಡಿನ ಮದುರೈ ಪ್ರದೇಶದಲ್ಲಿ ಹದವಾದ ಮಣ್ಣಿನಿಂದ ಅಂದವಾದ ಮಡಿಕೆಯ ಕಲಾಕೃತಿಗಳನ್ನು ನಿರ್ಮಾಣ ಮಾಡುವ ಕುಂಬಾರರ ಕೆಲಸದ ಕೈಗಳ ಫೋಟೋಗಳು.

ದುರಂತದ ಸಂದರ್ಭದಲ್ಲೂ ಕೆಲಸ ಮಾಡುತ್ತಿದ್ದ ಗಣಿ ಕಾರ್ಮಿಕರು

ಉತ್ತರಾಖಾಂಡ್‌ನ ತಪೋವನ್ ಎಂಬ ಪ್ರದೇಶದಲ್ಲಿ ಮೇಘ ಸ್ಫೋಟ ಉಂಟಾಗಿ ನೂರಾರು ಜನ ಕಾರ್ಮಿಕರು, ನಾಗರೀಕರು ಹಸುನೀಗಿದ ಸಂದರ್ಭದಲ್ಲೂ, ಅದರ ಮಾರನೇ ದಿನವೂ, ಅದೇ ಪ್ರದೇಶದ ಕಲ್ಲು ಗಣಿಗಾರಿಕೆಯಲ್ಲಿ ಕಾರ್ಮಿಕರು ತಮ್ಮ ಪ್ರಾಣವನ್ನು ಒತ್ತೆಯಿಟ್ಟು ಕೆಲಸ ಮಾಡುತ್ತಿದ್ದರು. ಈ ಫೋಟೋ ಕೂಡ ನನ್ನನ್ನು ಕಾಡಿದೆ. ಇಲ್ಲಿನ ಫೋಟೋಗಳಲ್ಲಿ ವಿದೇಶಗಳಲ್ಲಿ ತೆಗೆದ ಹಲವು ಚಿತ್ರಗಳಿವೆ. ಮಹಾರಾಷ್ಟ್ರದ ನಾಸಿಕ್, ಮುಂಬೈ ಐತಿಹಾಸಿಕ ಕಿಸಾನ್ ಲಾಂಗ್ ಮಾರ್ಚ್‌ನ ಫೋಟೋಗಳಿವೆ. ಜೊತೆಗೆ ಕೆಲವು ಪ್ರಕೃತಿಯ ಮತ್ತು ಪ್ರಾಣಿ ಪಕ್ಷಿಗಳ ಫೋಟೋಗಳೂ ಪ್ರದರ್ಶನದಲ್ಲಿವೆ.

ಬಹುತೇಕ ಕಪ್ಪು ಬಿಳುಪಿನಿಂದ ಕೂಡಿದ ಫೋಟೋಗಳು

ನನ್ನ ಫೋಟೋಗಳು ಬಹುತೇಕ ಕಪ್ಪು ಬಿಳುಪಿನಿಂದ ಕೂಡಿವೆ. ನಾನು ಕೆಲವು ಬಾರಿ ಫೋಟೋ ತೆಗೆಯುವಾಗಲೇ ಬ್ಲಾಕ್ ಅಂಡ್ ವೈಟ್ ಮೂಡ್‌ನಲ್ಲೇ ಫೋಟೋ ತೆಗೆಯುತ್ತೇನೆ. ಇನ್ನೂ ಕೆಲವನ್ನು ಆ ನಂತರ ಬ್ಲಾಕ್ ಅಂಡ್ ವೈಟ್ ಮಾಡುತ್ತೇನೆ. ಈ ವಿಚಾರದಲ್ಲಿ ನನ್ನ ಮೇಲೆ ಪರಿಣಾಮ ಬೀರಿದ್ದು ಸೆಬಾಸ್ಟಿಯೋ ಸೆಲ್ಗಾಡೋ ಎಂಬ ಒಬ್ಬ ಫೋಟೋಗ್ರಾಫರ್ ಕಾರ್ಮಿಕರನ್ನು ಕೇಂದ್ರೀಕರಿಸಿ ತೆಗೆದಿರುವ ಕಪ್ಪು ಬಿಳುಪು ಫೋಟೋಗಳು. ಜಗತ್ತಿನ ಯುವಜನರ ಸ್ಫೂರ್ತಿ ಚೆಗುವಾರನ ಮರೆಯಲಾಗದ ಒಂದು ಫೋಟೋವನ್ನು ಅಲ್ಬೆಟೋ ಕೂಡ ಬ್ಲಾಕ್ ಅಂಡ್ ವೈಟ್‌ನಲ್ಲಿ ತೆಗೆದಿದ್ದಾರೆ. ಅದು ಎಷ್ಟು ಸಾರಿ ಮರು ಮುದ್ರಣವಾಗಿದೆಯೋ ಮತ್ತು ಅದನ್ನು ಎಲ್ಲೆಲ್ಲಿ, ಯಾವ್ಯಾವ ರೂಪದಲ್ಲಿ ಮರುಬಳಕೆ ಮಾಡಲಾಗಿದೆಯೋ ಲೆಕ್ಕವೇ ಸಿಗುವುದಿಲ್ಲ. ಇವರು ಕ್ಯೂಬಾದ ಹಲವು ಅತ್ಯುತ್ತಮ ಫೋಟೋಗಳನ್ನು ತೆಗೆದಿದ್ದಾರೆ. ಭಾರತದವರೇ ಆದ ಸುನಿಲ್ ಜಾನ ಕಮ್ಯೂನಿಸ್ಟ್ ಪಕ್ಷದಲ್ಲಿದ್ದು ತೇಬಾಗ, ತೆಲಂಗಾಣ, ವಾರ್ಲಿಗಳಲ್ಲಿ ನಡೆದ ರೈತ ಮತ್ತು ಕಮ್ಯೂನಿಸ್ಟ್ ಚಳುವಳಿಯನ್ನು, ಬಂಗಾಳದ ಬರವನ್ನು ಸೆರೆಹಿಡಿದಿದ್ದಾರೆ. ಇವರು ಪಕ್ಷದ ಅಧಿಕೃತ ಫೋಟೋಗ್ರಾಫರ್ ಆಗಿ ನಿಯೋಜನೆಗೊಂಡು ಈ ರೀತಿಯ ಫೋಟೋಗಳನ್ನು ತೆಗೆದವರು. ಆದರೆ ನಾನು ಚಳುವಳಿಯ ಒಬ್ಬ ಕಾರ್ಯಕರ್ತನಾಗಿ ಅಲ್ಲೆಲ್ಲಾ ಭಾಗವಹಿಸಿ ಫೋಟೋಗಳನ್ನು ತೆಗೆದಿದ್ದೇನೆ. 2002ರ ಗುಜರಾತ್ ಗಲಭೆಯ ಸತ್ಯಶೋಧನಾ ತಂಡದ ಭಾಗವಾಗಿ ನಾನೂ ಇದ್ದೆ. ಆ ಗಲಭೆಯ ದುರಂತ ಅವಶೇಷಗಳ ಅನೇಕ ಛಾಯಾಚಿತ್ರಗಳನ್ನು ಮರುಪಡೆಯಲು ಸಾಧ್ಯವಾಗದ ಕಾರಣ ಪ್ರದರ್ಶನದಲ್ಲಿ ಸೇರಿಸಲಾಗಿಲ್ಲ.

ಮೊಬೈಲ್ ಫೋಟೋಗ್ರಫಿ ಅವಕಾಶವನ್ನು ವಿಫುಲಗೊಳಿಸಿದೆ ಮತ್ತು ವಿಸ್ತರಿಸಿದೆ. ನನ್ನ ಬಹುತೇಕ ಫೋಟೋಗಳನ್ನು ಮೊಬೈಲ್‌ನಲ್ಲೇ ಕ್ಲಿಕ್ಕಿಸಿದ್ದೇನೆ. ಏಕೆಂದರೆ ಫೋಟೋಗ್ರಫಿ ಎಂದರೆ ಟೈಮಿಂಗ್ ಆ ಕ್ಷಣಕ್ಕೆ ಅದನ್ನು ಸೆರೆಹಿಡಿಯದಿದ್ದರೆ, ಅದು ನಮ್ಮಿಂದ ಕೈತಪ್ಪಿದರೆ, ಮತ್ತೆ ಆ ಸಂದರ್ಭವನ್ನು ಸೃಷ್ಟಿಸಲು ಸಾಧ್ಯವಿಲ್ಲ. ಈ ಎಲ್ಲಾ ದೃಷ್ಟಿಯಿಂದ ಮೊಬೈಲ್ ಹೆಚ್ಚು ಸಹಾಯ ಮಾಡುತ್ತದೆ. ಆದರೆ ಒಳ್ಳೆಯ ಕ್ಯಾಮರಾ ಇರುವ, ಅದರ ಬಗ್ಗೆ ಸ್ವಲ್ಪವಾದರೂ ತಾಂತ್ರಿಕ ಜ್ಞಾನ ಮತ್ತು ಫೋಟೋಗ್ರಫಿಯ ಉದ್ದೇಶ ಸ್ಪಷ್ಟವಾಗಿದ್ದರೆ ಸಾಕು.

ಇಲ್ಲಿ ಪ್ರದರ್ಶನವಾಗಿರುವ ಕಣ್ಣೂರಿನಲ್ಲಿ ತೆಗೆದ ಒಂದು ಕಣ್ಣಿನ ಪಾರಿವಾಳದ ಫೋಟೋ 'ಒನ್ ಐಲ್ಯಾಂಡ್' (One Eyeland) ಅಂತರಾಷ್ಟ್ರೀಯ ಮೊಬೈಲ್ ಫೋಟೋಗ್ರಫಿ ಸ್ಪರ್ಧೆಯಲ್ಲಿ ಆಯ್ಕೆಯಾಗಿರುವ 10 ಫೋಟೋಗಳಲ್ಲಿ ಒಂದು ಎಂದು ಹೇಳಲು ಹೆಮ್ಮೆಯಾಗುತ್ತದೆ.

ಹಿತೈಷಿಗಳು ಮತ್ತು ಸ್ನೇಹಿತರ ಒತ್ತಾಸೆ ಮತ್ತು ಸಹಕಾರದಿಂದ ಇಂತಹದೊಂದು ಪ್ರದರ್ಶನವನ್ನು ಮೊದಲ ಬಾರಿಗೆ ನಡೆಸಲಾಗಿದೆ. ಆದರೆ ಫೋಟೋಗಳನ್ನು ಕ್ಯಾನ್ವಾಸ್ ಮೇಲೆ ಗುಣಮಟ್ಟದಲ್ಲಿ ಪ್ರಿಂಟ್ ಮಾಡಿಸಿ, ಅದನ್ನು ಫ್ರೇಮ್ ಮಾಡಿಸಿ ಪ್ರದರ್ಶಿಸುವುದು ದುಬಾರಿಯಾದದ್ದು. ಕಮ್ಯೂನಿಸ್ಟ್ ಪಕ್ಷದ ಪೂರ್ಣಾವಧಿ ಕಾರ್ಯಕರ್ತರಿಗೆ ವೈಯಕ್ತಿಕವಾಗಿ ಇವುಗಳನ್ನು ಮಾಡುವುದು ಕಷ್ಟ. ಅದಕ್ಕೆ ಸರಿಯಾದ ಸಹಕಾರದ ಅಗತ್ಯ ಬೇಕಾಗುತ್ತದೆ.


ನನ್ನದೊಂದು ಕಿವಿಮಾತು...

ಫೋಟೋಗ್ರಫಿಯನ್ನು ಹವ್ಯಾಸವನ್ನಾಗಿಸಿ ಕೊಂಡಿರುವವರಿಗೆ ನನ್ನದೊಂದು ಕಿವಿಮಾತು. ಈಗಿನ ಡಿಜಿಟಲ್ ಯುಗದಲ್ಲಿ ಮೊಬೈಲ್ ಇದ್ದವರೆಲ್ಲಾ ಫೋಟೋಗ್ರಾಫರ್‌ಗಳೆ. ಎಲ್ಲರಿಗೂ ತಮ್ಮ ತಮ್ಮ ಜೀವನದಲ್ಲಿ ಹಲವು ಪ್ರದೇಶಗಳಿಗೆ ಭೇಟಿನೀಡುವ, ಹಲವು ಘಟನೆಗಳಿಗೆ ಸಾಕ್ಷಿಯಾಗುವ ಹಲವು ಸಂದರ್ಭಗಳು ಒದಗಿಬರುತ್ತವೆ. ಇಂತಹ ಸದರ್ಭದಲ್ಲಿ ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟಿರುವ ದುಡಿಯುವ ವರ್ಗದ ಜನರಾದ ರೈತರು, ಕಾರ್ಮಿಕರು, ಕೂಲಿಕಾರರು, ಆದಿವಾಸಿಗಳು, ಮಹಿಳೆಯರು, ದಲಿತರು ಇವರ ಬದುಕಿನ ಸಂಕಷ್ಟಗಳ ಬಗ್ಗೆ ಫೋಟೋ ತೆಗೆದು ಅವುಗಳನ್ನು ಸಮಾಜದ ಮುಂದಿಟ್ಟು, ಅವರ ಬಗ್ಗೆ ಸಮಾಜಕ್ಕೆ ಅರ್ಥಮಾಡಿಸುವ ಕೆಲಸ ಮಾಡಿದರೆ ನಮ್ಮ ಫೋಟೋಗ್ರಫಿ ಸಾರ್ಥಕವಾಗುತ್ತದೆ ಎನ್ನುತ್ತಾರೆ ವಿಜೂ ಕೃಷ್ಣನ್ ಅವರು.

"ನಾನು ಎಂಟು ಭಾಷೆಗಳನ್ನು ಓದಲು ಮತ್ತು 11 ಭಾಷೆಗಳನ್ನು ಮಾತನಾಡಲು ಕಲಿತಿದ್ದೇನೆ. ಸಾಂಕ್ರಾಮಿಕ ಸಮಯದಲ್ಲಿ ನಾನು ಸ್ಪ್ಯಾನಿಷ್ ಅನ್ನು ಅಧ್ಯಯನ ಮಾಡಿದೆ. ಅವರೊಂದಿಗೆ ಬೆರೆತ ಪರಿಣಾಮವಾಗಿ ರೈತರ ಹೋರಾಟದ ಭಾಗವಾಗಿ ಉತ್ತರ ಭಾರತದಲ್ಲಿ ನಡೆದ ರ್ಯಾಲಿಗಳಲ್ಲಿ ಹೆಚ್ಚಿನ ಸಂಖ್ಯೆಯ ಜನರನ್ನು ಸಜ್ಜುಗೊಳಿಸಲು ಸಾಧ್ಯವಾಯಿತು." ಎಂದು ವಿಜೂ ಕೃಷ್ಣನ್ ಹೇಳುತ್ತಾರೆ

– ಹೆಚ್.ಆರ್. ನವೀನ್‌ಕುಮಾರ್ ಹಾಸನ

ಸ್ವತಂತ್ರ ವಿದೇಶಾಂಗ ನೀತಿಯ ಮಹತ್ವ



ನೀಲೋತ್ಪಲ್ ಬಸು
ಕನ್ನಡಕ್ಕೆ: ವಿಶ್ವ

ಶಾಂಘೈ ಸಹಕಾರ ಸಂಸ್ಥೆಯ (ಎಸ್‌ಸಿಒ) ಶೃಂಗಸಭೆ ಚೀನಾದ ಬಂದರು ನಗರ ತಿಯಾಂಜಿನ್ ನಗರದಲ್ಲಿ ನಡೆದಿದೆ. ಆರ್ಥಿಕ ಸಹಕಾರ, ಸಾಂಸ್ಕೃತಿಕ ವಿನಿಮಯಗಳು ಮತ್ತು ಇಂಧನ ಭದ್ರತೆಯನ್ನು ಕೂಡ ಸೇರಿಸಿಕೊಂಡು ಎಸ್‌ಸಿಒ ತನ್ನ ಗುರಿಯನ್ನು ವಿಸ್ತರಿಸಿಕೊಂಡಿದೆ. ಭಾರತ ಮತ್ತು ಪಾಕಿಸ್ತಾನ 2017ರಲ್ಲಿ ಪೂರ್ಣ ಸದಸ್ಯರಾಗಿ ಸೇರ್ಪಡೆಗೊಂಡಿದ್ದವು. 2023ರಲ್ಲಿ ಇರಾನ್ ಮತ್ತು 2024ರಲ್ಲಿ ಬೆಲಾರುಸ್ ಎಸ್‌ಸಿಒವನ್ನು ಸೇರಿದ್ದವು.

21ನೇ ಶತಮಾನದ ಸವಾಲುಗಳು ಮತ್ತು ಅವಕಾಶಗಳಿಗೆ ಎಸ್‌ಸಿಒ ಹೊಂದಿಕೊಳ್ಳುವುದಕ್ಕೆ ತಾಂತ್ರಿಕತೆಯ ಮೇಲೆ ಗಮನ ಕೇಂದ್ರೀಕರಿಸಿರುವುದನ್ನು ಸಾಬೀತುಪಡಿಸಲೆಂಬಂತೆ ಶೃಂಗಸಭೆಯ ತಾಣದ ಸಮೀಪವೇ ಅತ್ಯಾಧುನಿಕ ಮಾಧ್ಯಮ ಕೇಂದ್ರವನ್ನು ಸ್ಥಾಪಿಸಿ ಅದ್ಭುತ ಮುನ್ನಡೆಗಳನ್ನು ಚೀನಾ ಪ್ರದರ್ಶಿಸಿದೆ. ಈ ಕೇಂದ್ರವು ಹ್ಯುಮನಾಯ್ಡ್ ರೋಬೋಗಳು ಮತ್ತು ಎಐ ಪ್ರೇರಿತ ವ್ಯವಸ್ಥೆಗಳಿಂದ ಸಜ್ಜುಗೊಂಡಿತ್ತು. ಭದ್ರತೆ ಮತ್ತು ವಿಶ್ವಾಸಾರ್ಹತೆ ವಿಚಾರದಲ್ಲಿ ಎಐ ರಿಸ್ಕ್‌ಗಳನ್ನು ತಗ್ಗಿಸಲು ಸದಸ್ಯ ದೇಶಗಳು ಒಪ್ಪಿವೆ.

ಅನಿಶ್ಚಿತತೆಯ ಈ ಸಮಯದಲ್ಲಿ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರ 'ಬುಲ್ ಇನ್ ಎ ಚೈನಾ ಶಾಪ್' ಬ್ರ್ಯಾಂಡ್‌ನ ಸುಂಕ ಆಕ್ರಮಣದ ಹಿನ್ನೆಲೆಯಲ್ಲಿ, ತಿಯಾಂಜಿನ್ ನಿಸ್ಸಂದೇಹವಾಗಿಯೂ ಪ್ರಮುಖ ಆಕರ್ಷಣೆಯ ಕೇಂದ್ರವಾಗಿತ್ತು. ಅಮೆರಿಕ ನೇತೃತ್ವದ ವಿಶ್ವ ವ್ಯವಸ್ಥೆಗೆ ತುರ್ತು ಸ್ಪಂದನೆ ಹೆಚ್ಚು ಅಗತ್ಯ ಎಂಬ ಕರೆಯು ಟ್ರಂಪ್‌ರ ಮೇಕ್ ಅಮೆರಿಕ ಗ್ರೇಟ್ ಅಗೇಯ್ನ್ (ಎಂಎಜಿಎ–ಮಗಾ) ಅಜೆಂಡಾಕ್ಕೆ ಸಾಂಕೇತಿಕವಾಗಿದೆ. ಅಮೆರಿಕದ ಲಾಭಗಳನ್ನು ಗರಿಷ್ಠಗೊಳಿಸಲು ವಿನ್ಯಾಸಗೊಳಿಸಲಾಗಿರುವ ಪರಿಚಿತವಾದ ಆಡಳಿತ ಆಧಾರಿತ ವಾಣಿಜ್ಯ ವ್ಯವಸ್ಥೆಯಿಂದ ದೂರ ಸರಿದು ದ್ವಿಪಕ್ಷೀಯ ವ್ಯವಸ್ಥೆಗಳತ್ತ ಹೊರಳುವುದು ಅದರ ಬಯಕೆಯಾಗಿದೆ. ಈ ಬದಲಾವಣೆಯು ಬಹುಪಕ್ಷೀಯ ವಿಶ್ವ ವ್ಯವಸ್ಥೆಯ ಅನಿವಾರ್ಯತೆಯನ್ನು ನಾಟಕೀಯವಾಗಿ ಪ್ರತಿಪಾದಿಸುತ್ತದೆ.

ಟ್ರಂಪ್ ಸುಂಕಗಳು ಭಾರತ ಮತ್ತು ಬ್ರೆಜಿಲ್‌ಗೆ ತುಂಬಾ ತೀಕ್ಷ್ಣವಾಗಿದೆ. ಭಾರತದ ಪ್ರಕರಣದಲ್ಲಿ, ರಷ್ಯಾದಿಂದ ತೈಲ ಖರೀದಿಸಿ, ನಂತರ ಅದನ್ನು ಲಾಭಕ್ಕಾಗಿ ಮಾರಲಾಗುತ್ತಿದೆ ಎನ್ನುವುದೇ ಪ್ರಮುಖವಾದ ನೆಪವಾಗಿದೆ. ಆದರೆ ಟ್ರಂಪ್‌ರ ಘೋಷಿತ ಉದ್ದೇಶ ಅದಕ್ಕೂ ಮೀರಿದ್ದಾಗಿದೆ. 'ಭಾರತ ನಮಗೆ ತುಂಬಾ ಹೆಚ್ಚು ಸುಂಕಗಳನ್ನು ಹೇರಿತ್ತು. ಅದರಿಂದಾಗಿ ನಮ್ಮ ಕಂಪನಿಗಳಿಗೆ ಭಾರತದಲ್ಲಿ ಮಾರಾಟ ಮಾಡಲು ಆಗುತ್ತಿರಲಿಲ್ಲ' ಎನ್ನುವುದೇ ಆ ಅಂಶವಾಗಿದೆ. ಯದ್ವಾತದ್ವವಾಗಿ ವರ್ತಿಸಿದ ಟ್ರಂಪ್, ಭಾರತ ಒಂದು 'ಮೃತ ಆರ್ಥಿಕತೆ' ಎಂದು ಹೇಳಿದ್ದಲ್ಲದೆ ಭಾರತದೊಂದಿಗಿನ ವಾಣಿಜ್ಯ ವ್ಯವಹಾರವು 'ಏಕ ಮುಖಿ ದುರಂತ' ಎಂದಿದ್ದರು. ಮಿಲಿಟರಿ ಸಂಘರ್ಷಗಳನ್ನು ನಿಲ್ಲಿಸುವಲ್ಲಿ ತಮ್ಮ ಪಾತ್ರವನ್ನು ಭಾರತ ಸಾಕಷ್ಟು ಒಪ್ಪಿಕೊಂಡಿರದ ಕಾರಣದಿಂದಲೂ ಟ್ರಂಪ್ ಭಾವನಾತ್ಮಕವಾಗಿ ಹತಾಶರಾಗಿದ್ದರು. ಟ್ರಂಪ್‌ರ ಆಪ್ತರೊಬ್ಬರು, ಉಕ್ರೇನ್ ವಿರುದ್ಧ ಯುದ್ಧ ನಡೆಸಲು ರಷ್ಯಾಕ್ಕೆ ಭಾರತ ನೆರವಾಗುತ್ತಿದೆ ಎಂದು ಆರೋಪಿಸುವ ಮಟ್ಟಕ್ಕೂ ಹೋಗಿದ್ದರು. ಈ ಎಲ್ಲವೂ ಎಷ್ಟರ ಮಟ್ಟಿಗೆ ಸಮರ್ಥನೀಯ ಎನ್ನುವುದು ಊಹೆಗೆ ಬಿಟ್ಟಿದ್ದಾಗಿದೆ. ಆದರೆ, ಟ್ರಂಪ್ ಸಂದೇಶವು ಭಾರತಕ್ಕೆ ಮಾತ್ರ ಸೀಮಿತವಲ್ಲ. ಅಮೆರಿಕವನ್ನು ಸಂತೃಪ್ತಿಪಡಿಸಲು ಭಾರತ ತನ್ನೊಂದಿಗೆ ದ್ವಿಪಕ್ಷೀಯ ಒಪ್ಪಂದ ಮಾಡಿಕೊಳ್ಳುವಂತೆ ಭಾರತವನ್ನು ಮಣಿಸುವುದು ಅದರ ಪ್ರಮುಖ ಗುರಿಯಾಗಿದೆ.

ಬಹುಧ್ರುವೀಯ ಮತ್ತು ಸ್ಥಿರವಾದ ವಿಶ್ವ ವ್ಯವಸ್ಥೆಯತ್ತ ಅಗತ್ಯವಾದ ಅಂಶಗಳನ್ನು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್, ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುತಿನ್ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಸಮ್ಮುಖದಲ್ಲಿ ತಿಯಾಂಜಿನ್ ಪ್ರದರ್ಶಿಸಿದೆ. ಪ್ರಾದೇಶಿಕ ಮತ್ತು ಜಾಗತಿಕ ಭದ್ರತೆ ಮೇಲೆ ಎಸ್‌ಸಿಒ ಫೋಕಸ್ ಮಾಡಿದೆ. ತಿಯಾಂಜಿನ್ ಘೋಷಣೆಯು ಸುಸ್ಪಷ್ಟವಾಗಿದೆ. ಅದು ಇಸ್ರೇಲ್ ಮತ್ತು ಅಮೆರಿಕದ ಮಿಲಿಟರಿ ಆಕ್ರಮಣಗಳನ್ನು ಬಲವಾಗಿ ಖಂಡಿಸಿದೆ. ಅವುಗಳು ಅಂತಾರಾಷ್ಟ್ರೀಯ ಕಾನೂನು ಮತ್ತು ವಿಶ್ವ ಸಂಸ್ಥೆ ಸನದಿನ ನಗ್ನ ಉಲ್ಲಂಘನೆಯಾಗಿವೆ. ಇರಾನ್‌ನ ಸಾರ್ವಭೌಮತೆಯ ಅತಿಕ್ರಮಣವಾಗಿದೆ ಎಂದು ಘೋಷಣೆ ವರ್ಣಿಸಿದೆ. ಇದು, ಇದಕ್ಕೂ ಹಿಂದೆ ಎಸ್‌ಸಿಒ ಹೊರಡಿಸಿದ್ದ ಹೇಳಿಕೆಯಿಂದ ಭಾರತ ಗೈರಾಗಿದ್ದ ನಿಲುವಿಗಿಂತ ತೀರಾ ಭಿನ್ನವಾಗಿದೆ. ಎಸ್‌ಸಿಒದ ನೀತಿ ನಿರ್ಧಾರದಲ್ಲಿ ಭಾರತ ಭಾಗವಹಿಸಿಲ್ಲ. ತೀವ್ರ ಕಳವಳ ವ್ಯಕ್ತಪಡಿಸುವುದಕ್ಕೆ ಮತ್ತು ಮಾತುಕತೆ ಹಾಗೂ ರಾಜತಾಂತ್ರಿಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬೇಕೆಂದು ಒತ್ತಾಯಿಸುವುದಕ್ಕೆ ಭಾರತ ಸೀಮಿತವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಆಗ ಹೇಳಿತ್ತು. ಅದಕ್ಕೂ ಮುನ್ನ, ಅಮೆರಿಕದ ಕುಮ್ಮಕ್ಕಿರುವ ಇಸ್ರೇಲ್‌ನಿಂದ ಗಾಜಾದಲ್ಲಿ ನಡೆಯುತ್ತಿರುವ ನರಮೇಧದ ವಿಚಾರದಲ್ಲಿ ಕೂಡ ಭಾರತ ಇದೇ ಧೋರಣೆ ತಾಳಿತ್ತು. ತಿಯಾಂಜಿನ್ ಗೊತ್ತುವಳಿಯು ಈ ಧೋರಣೆಯಲ್ಲಿನ ಬದಲಾವಣೆಯನ್ನು ತೋರಿಸುತ್ತದೆ. ಪ್ಯಾಲೆಸ್ಟೀನ್–ಇಸ್ರೇಲ್ ಸಂಘರ್ಷ ತೀವ್ರಗೊಂಡು ಮುಂದುವರಿಯುತ್ತಿರುವುದಕ್ಕೆ ಘೋಷಣೆ ತೀವ್ರ ಕಳವಳ ವ್ಯಕ್ತಪಡಿಸಿದೆ. ಅಸಂಖ್ಯಾತ ನಾಗರಿಕರ ಪ್ರಾಣ ಹಾನಿ ಮತ್ತು ಗಾಜಾದಲ್ಲಿ 'ವಿನಾಶಕಾರಿ ಮಾನವೀಯ ಪರಿಸ್ಥಿತಿ'ಗೆ ಕಾರಣವಾಗಿರುವ ಅದನ್ನು ಘೋಷಣೆ ಖಂಡಿಸಿದೆ.

ವಾಸ್ತವವಾಗಿ, ತಿಯಾಂಜಿನ್ ಘಟನೆಗೂ ಮುಂಚೆಯೇ ಗಾಳಿ ಯಾವ ಕಡೆಗೆ ಬೀಸುತ್ತಿದೆ ಎನ್ನುವುದು ಷಿ –ಮೋದಿ ಶೃಂಗಸಭೆಯಿಂದ ಸ್ಪಷ್ಟವಾಗಿತ್ತು. ಭಾರತ ಮತ್ತು ಚೀನಾ 'ಸಹಭಾಗಿಗಳೇ ಹೊರತು ಪ್ರತಿಸ್ಪರ್ಧಿಗಳಲ್ಲ' ಎನ್ನುವುದು ಸಾಮಾನ್ಯವಾದ ಅಭಿಪ್ರಾಯವಾಗಿತ್ತು. ಎರಡು ಬೃಹತ್ ನೆರೆಹೊರೆ ದೇಶಗಳು ನ್ಯಾಯಸಮ್ಮತ, ಸೂಕ್ತ ಮತ್ತು ಅಂಗೀಕಾರಾರ್ಹವಾದ ಪರಿಹಾರಕ್ಕೆ ಒಪ್ಪಿಕೊಂಡಿವೆ. ಬಹುಧ್ರುವೀಯ ಜಗತ್ತು, ಮುಕ್ತ ವಾಣಿಜ್ಯ ಮತ್ತು ವಿಶ್ವ ವಾಣಿಜ್ಯವನ್ನು ಸ್ಥಿರಗೊಳಿಸುವಲ್ಲಿ ಉಭಯ ಆರ್ಥಿಕತೆಗಳ ಪಾತ್ರವನ್ನು ವಿದೇಶಾಂಗ ಸಚಿವಾಲಯದ (ಎಂಇಎ) ಹೇಳಿಕೆ ಎತ್ತಿತೋರಿಸಿತ್ತು.

ಉಭಯ ರಾಷ್ಟ್ರಗಳು ವ್ಯೂಹಾತ್ಮ ಸ್ವಾಯತ್ತೆಯ ನೀತಿಯನ್ನು ಅನುಸರಿಸುತ್ತವೆ. ಎರಡೂ ದೇಶಗಳು ಸಾಮಾನ್ಯ ಹಿತಾಸಕ್ತಿಗಳನ್ನು ರಕ್ಷಿಸಲು ಬಹುಪಕ್ಷೀಯ ಸಹಕಾರವನ್ನು ಬಲಪಡಿಸಬೇಕೆಂದು ಷಿ ಜಿನ್‌ಪಿಂಗ್ ಕರೆನೀಡಿದರು. ಗಡಿ ಸಮಸ್ಯೆಯು ಭಾರತ ಮತ್ತು ಚೀನಾದ ಒಟ್ಟಾರೆ ಬಾಂಧವ್ಯವನ್ನು ನಿರ್ಣಯಿಸಲು ಬಿಡಬಾರದು ಎಂದೂ ಷಿ ಹೇಳಿದರು. ಷಿ ಅವರ ವರ್ಣನೆ ಪ್ರಕಾರ 'ಆನೆಯೊಂದಿಗೆ ಡ್ರ್ಯಾಗನ್ ನರ್ತಿಸುವ ಕಾಲ ಕೂಡಿಬಂದಿದೆ'.

ಚೀನಾ ಮತ್ತು ಅದರ ನಾಯಕತ್ವದ ವಿರುದ್ಧ ವಿಷ ಕಕ್ಕುವ ಬಿಜೆಪಿ ಐಟಿ ಸೆಲ್‌ನ ಮಾರಕ ಪ್ರಚಾರಗಳಿಗೆ ಒಗ್ಗಿಹೋಗಿರುವ ಭಾರತದ ದೇಶೀಯ ಪ್ರೇಕ್ಷಕರಿಗೆ ಈ ಎಲ್ಲದರ ವ್ಯಂಗ್ಯವು ಕಳೆದು ಹೋಗಬಾರದು.

ತಿಯಾಂಜಿನ್ ಒಂದು ರೀತಿಯಲ್ಲಿ ಬಹುತೇಕ ರಿಯೋ ಡಿ ಜನ್ಯೆರೋದಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯ ಸರಾಗ ಮುಂದುವರಿಕೆಯಾಗಿದೆ. ದುರದೃಷ್ಟವಶಾತ್ ಷಿ ಅಥವಾ ಪುತಿನ್ ಆ ಸಭೆಯಲ್ಲಿ ಖುದ್ದಾಗಿ ಭಾಗವಹಿಸಿರಲಿಲ್ಲ. ಸುಂಕಗಳ ಏರಿಕೆ ಮತ್ತು ಇರಾನ್ ಮೇಲಿನ ಆಕ್ರಮಣಗಳನ್ನು ಅಭಿವೃದ್ಧಿಶೀಲ ದೇಶಗಳ ಬ್ರಿಕ್ಸ್ ಕೂಟ ಜುಲೈ 5ರಂದು ಖಂಡಿಸಿತ್ತು. ಆದರೆ, ಅಮೆರಿಕ ಅಧ್ಯಕ್ಷ ಟ್ರಂಪ್‌ರನ್ನು ಹೆಸರಿಸುವುದರಿಂದ ಅದು ದೂರ ಉಳಿದಿತ್ತು. ಮಧ್ಯ ಪ್ರಾಚ್ಯದಲ್ಲಿನ ಕೃತ್ಯಗಳಿಗಾಗಿ ಇಸ್ರೇಲ್‌ನ ಮಿಲಿಟರಿಯನ್ನು ಕೂಡ ಗುರಿಯಾಗಿಸಿದ ಬ್ರಿಕ್ಸ್ ಘೋಷಣೆಯು ಸದಸ್ಯ ದೇಶ ರಷ್ಯಾವನ್ನು ಟೀಕಿಸಿರಲಿಲ್ಲ. ಯುದ್ಧದಿಂದ ಜರ್ಝರಿತವಾಗಿರುವ ಉಕ್ರೇನ್ ಬಗ್ಗೆ ಆ ಘೋಷಣೆ ಒಮ್ಮೆ ಮಾತ್ರ ಪ್ರಸ್ತಾಪಿಸಿತ್ತು.

ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ ಬ್ರಿಕ್ಸ್ ಕೂಟವನ್ನು ಸ್ಥಾಪಿಸಿದ್ದವು. ಆದರೆ ಕಳೆದ ವರ್ಷ ಇಂಡೋನೇಷ್ಯಾ, ಇರಾನ್, ಈಜಿಪ್ಟ್, ಇಥಿಯೋಪಿಯಾ ಮತ್ತು ಅರಬ್ ಸಂಯುಕ್ತ ಸಂಸ್ಥಾನವನ್ನು (ಯುಎಇ) ಸೇರಿಸಿಕೊಂಡು ಅದು ವಿಸ್ತರಣೆಗೊಂಡಿದೆ.

ಹೊಸ ಸದಸ್ಯರೊಂದಿಗೆ ಈ ಕೂಟವು 10 ವ್ಯೂಹಾತ್ಮಕ ಪಾಲುದಾರ ದೇಶಗಳನ್ನೂ ಹೊಂದಿದೆ. ಕಳೆದ ವರ್ಷದ ಶೃಂಗದಲ್ಲಿ ಈ ವರ್ಗವನ್ನು ಸೃಷ್ಟಿಸಲಾಗಿದ್ದು ಬೆಲಾರುಸ್, ಕ್ಯೂಬಾ ಮತ್ತು ವಿಯೆಟ್ನಾಂ ಈ ಗುಂಪಿನಲ್ಲಿದೆ. ಅಭಿವೃದ್ಧಿಶೀಲ ದೇಶಗಳಿಗೆ ಪ್ರತಿಕ್ರಿಯಿಸಲು, ಪರ್ಯಾಯಗಳನ್ನು ಕಾಣಲು ಮತ್ತು ತಮ್ಮ ಆರ್ಥಿಕ ಪಾಲುದಾರರನ್ನು ವೈವಿಧ್ಯಗೊಳಿಸಲು ಶೃಂಗಸಭೆ ಅವಕಾಶ ಕಲ್ಪಿಸಿತ್ತು.

ಬ್ರಿಕ್ಸ್ ಕೂಟವು ಜಾಗತಿಕ ಆರ್ಥಿಕ ಸನ್ನಿವೇಶವನ್ನು ತ್ವರಿತವಾಗಿ ಬದಲಾಯಿಸುತ್ತಿದೆ. ಆವಿಷ್ಕಾರಕ ವಾಣಿಜ್ಯ ಒಡಂಬಡಿಕೆಗಳು ಮತ್ತು ವ್ಯೂಹಾತ್ಮಕ ಆರ್ಥಿಕ ಉಪಕ್ರಮಗಳೊಂದಿಗೆ, ಬ್ರಿಕ್ಸ್–ಕೂಟದೊಳಗಿನ (ಇಂಟ್ರಾ–ಬ್ರಿಕ್ಸ್) ವಾಣಿಜ್ಯವು ಸಾಂಪ್ರದಾಯಿಕ ಪಾಶ್ಚಿಮಾತ್ಯ ನಿಯಂತ್ರಿತ ಮಾರುಕಟ್ಟೆಗಳ ವಿರುದ್ಧ ಬಲಿಷ್ಠವಾದ ಕ್ರಮವಾಗಿ ಹೊರಹೊಮ್ಮುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಬ್ರಿಕ್ಸ್ ದೇಶಗಳು ತಮ್ಮ ತಮ್ಮೊಳಗೆ ವಾಣಿಜ್ಯ ವ್ಯವಹಾರಗಳನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿವೆ. ಸಂಯೋಜಿತ ಜಿಡಿಪಿ ಅಂಕಿಸಂಖ್ಯೆಗಳು ಮತ್ತು ವಿಸ್ತರಿಸುತ್ತಿರುವ ಗ್ರಾಹಕ ನೆಲೆಯನ್ನು ಹೊಂದುವುದರೊಂದಿಗೆ ಈ ಉದಯೋನ್ಮುಖ ಆರ್ಥಿಕತೆಗಳು ಸಾಂಪ್ರದಾಯಿಕ ಜಾಗತಿಕ ಕರೆನ್ಸಿಗಳು ಮತ್ತು ಪಾಶ್ಚಾತ್ಯ ಹಣಕಾಸು ವ್ಯವಸ್ಥೆಗಳ ಮೇಲಿನ ಅವಲಂಬನೆಯನ್ನು ತಗ್ಗಿಸಲು ಅಂತರ್–ಕೂಟ ವಾಣಿಜ್ಯವನ್ನು ಹೆಚ್ಚಿಸಿಕೊಳ್ಳುತ್ತಿವೆ.

ರಾಜತಾಂತ್ರಿಕತೆಯ 'ಪಪ್ಪಿ ಮತ್ತು ಝಪ್ಪಿ' ಬ್ರ್ಯಾಂಡ್‌ನೊಂದಿಗೆ ಟ್ರಂಪ್ ಮತ್ತು ಮೋದಿಯ ಮೈತ್ರಿಯು ಸುಂಕ ಆಕ್ರಮಣ ಮತ್ತು ಅಮೆರಿಕದ ಷರತ್ತಿನ ಆಧಾರದಲ್ಲಿ ವಾಣಿಜ್ಯ ಒಡಂಬಡಿಕೆ ಮಾಡಿಕೊಳ್ಳುವ ಭಾರತದ ಅಸಾಮರ್ಥ್ಯವನ್ನು ತ್ವರಿತವಾಗಿ ಅನಾವರಣಗೊಳಿಸುತ್ತಿದೆ. ವಿಶಾಲ ಜಾಗತಿಕ ರಾಜಕೀಯ ಹಿನ್ನೆಲೆಯಲ್ಲಿ ಟ್ರಂಪ್ ಭಾರತದ ಹಿತಾಸಕ್ತಿಗಳನ್ನು ಕಾಣುವುದಿಲ್ಲ ಎನ್ನುವುದು ತುಂಬಾ ಸ್ಪಷ್ಟವಾಗಿದೆ.

ಮೋದಿ ಮತ್ತು ಅವರ ನೇತೃತ್ವದ ಬಿಜೆಪಿ ಸರಕಾರದ ಬಗ್ಗೆ ಕಣ್ಣೀರು ಸುರಿಸುವವರು ಹೆಚ್ಚಿನ ಜನರೇನೂ ಇಲ್ಲ. ಆದರೆ, ಭಾರತ–ಅಮೆರಿಕ ಸಂಬಂಧಗಳನ್ನು ಗಮನಿಸುತ್ತಾ ಬಂದವರಿಗೆ, ಇದರಲ್ಲಿ ಅಚ್ಚರಿ ಪಡುವಂಥದ್ದು ಏನೂ ಇಲ್ಲ. ಇದು ನಡೆಯಲೇ ಬೇಕಿತ್ತು.

ಆಪರೇಷನ್ ಸಿಂಧೂರದ ನಂತರ, ಮೋದಿ ಸರಕಾರ ಸ್ವಯಂ ಅಭಿನಂದನಾತ್ಮಕವಾಗಿ ಎದೆ ಬಡಿದು ಕೊಂಡು ಪ್ರಚಾರ ಮಾಡುವುದರ ಹೊರತಾಗಿಯೂ, ಸಂಘರ್ಷ ನಿಲುಗಡೆಯ ಶ್ರೇಯಸ್ಸು ಪಡೆಯುವ ಏಕಪಕ್ಷೀಯ ಹುಚ್ಚು ಮತ್ತು ಸೌಮ್ಯವಾದ ಪ್ರತಿಕ್ರಿಯೆಯನ್ನು ನೋಡಿದರೆ, ಟ್ರಂಪ್ ಎರಡು ಕೋಳಿಗಳ ಕೂಗಿಗೆ ಗಮನಕೊಡುವುದಿಲ್ಲ ಎನ್ನುವುದು ಸ್ಪಷ್ಟವಾಯಿತು.

ಭಾರತ ಮತ್ತು ಪಾಕಿಸ್ತಾನದ ಹೈಫನೇಶನ್ ಮರಳಿರುವುದು ಪ್ರಾದೇಶಿಕ–ಜಾಗತಿಕ ಶಕ್ತಿ ಸಮತೋಲದಲ್ಲಿ ಭಾರತದ ಮೌಲ್ಯದ ಸ್ಪಷ್ಟ ಸೂಚನೆಯಾಗಿದೆ. ಮತ್ತು ಅದರ ಪರಿಣಾಮವಾಗಿ ವ್ಯೂಹಾತ್ಮಕ ಮಹತ್ವದಲ್ಲಿ ಇಳಿಕೆಯನ್ನು ತೋರಿಸುತ್ತದೆ.

ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ರೂಪಿಸುವಂತೆ ಎಡಪಕ್ಷಗಳು ಸದಾ ಎಚ್ಚರಿಸುತ್ತಲೇ ಇವೆ. ರಾಷ್ಟ್ರೀಯ ಹಿತಾಸಕ್ತಿ ಮತ್ತು ವ್ಯೂಹಾತ್ಮಕ ಸ್ವಾಯತ್ತೆಯು ಈ ನೀತಿಯ ಅಡಿಪಾಯವಾಗಿರಬೇಕು ಎಂಬುದು ಎಡ ಪಕ್ಷಗಳ ಅಭಿಮತವಾಗಿದೆ.

ಸಾಮ್ರಾಜ್ಯಶಾಹಿಯು 'ಚುಕ್ಕೆ ಗುರುತುಗಳನ್ನು ಬದಲಾಯಿಸಲಾಗದ ಚಿರತೆಯಿದ್ದಂತೆ'. ಎಡ ಪಂಥೀಯರನ್ನು ಬಿಟ್ಟುಬಿಡಿ. ಅಮೆರಿಕದ ವಿದೇಶಾಂಗ ನೀತಿಯ ಅತಿ ಮಹತ್ವದ ಚಿಂತಕರಾದ ಹೆನ್ರಿ ಕಿಸಿಂಜರ್ ಕೂಡ 'ಅಮೆರಿಕವನ್ನು ಎದುರು ಹಾಕಿಕೊಳ್ಳುವುದು ಅಪಾಯಕಾರಿ. ಆದರೆ, ಅದನ್ನು ಅಪ್ಪಿಕೊಳ್ಳುವುದು ಮಾರಕವಾಗಿರುತ್ತದೆ' ಎಂದು ಹೇಳಿದ್ದರು. ಆದರೆ, ಆ ದೂರದೃಷ್ಟಿಯ ಸ್ಪಷ್ಟತೆಯನ್ನು ಒದಗಿಸಲು ಆರ್‌ಎಸ್‌ಎಸ್ ಮತ್ತು ಹಿಂದುತ್ವ ಬ್ರಿಗೇಡ್ ಅಸಮರ್ಥವಾಗಿದೆ.

ಇದು ಸುಸಮಯವಾಗಿದೆ. ಅಮೆರಿಕದ ಭೌಗೋಳಿಕ ರಾಜಕೀಯ ವ್ಯೂಹಾತ್ಮಕ ಗೇಮ್‌ಪ್ಲ್ಯಾನ್‌ಗೆ ಮಣಿಯುವುದರಿಂದ ದೂರ ಸರಿಯಲು ಇದೊಂದು ಅವಕಾಶವೆಂದು ಸದ್ಯದ ಸನ್ನಿವೇಶವನ್ನು ನೋಡಬೇಕು. ಬ್ರಿಕ್ಸ್ ಮತ್ತು ಎಸ್‌ಸಿಒ ಪ್ರಕ್ರಿಯೆ ಮೂಲಕ ದಕ್ಷಿಣದೊಂದಿಗೆ ನೈಜವಾದ ಪಾಲುದಾರಿಕೆಯನ್ನು ಕಟ್ಟಲು ಸದವಕಾಶವೆಂದು ಭಾವಿಸಬೇಕು. ಈ ನಡುವೆ, ನಿರ್ದಿಷ್ಟ ವಲಯವಾರಾಗಿ ಟ್ಯಾರಿಫ್ ಯುದ್ಧದ ಪರಿಣಾಮದ ಬಗ್ಗೆ ಅಧ್ಯಯನ ನಡೆಸಲು ಸರಕಾರ ಗಮನ ಹರಿಸಬೇಕು. ಹೆಚ್ಚು ಸಂತ್ರಸ್ತವಾಗುವ ಎಂಎಸ್‌ಎಂಇ, ಉದ್ಯೋಗ ಮತ್ತು ಕೃಷಿ ವಲಯಗಳಲ್ಲಿನ ಜನರ ದುಸ್ಥಿತಿಯನ್ನು ಸುಧಾರಿಸಲು ಕ್ರಮಗಳನ್ನು ಕೈಗೊಳ್ಳಬೇಕು.

ಆರ್‌ಟಿಐ ಪ್ರಶ್ನೆಗಳಿಗೆ ಚುನಾವಣಾ ಆಯೋಗದ 'ಉತ್ತರಗಳು': ನ್ಯಾಯಾಲಯಕ್ಕೆ ಸಲ್ಲಿಸಿದ ಅಫಿಡವಿಟ್ ಮುಂದೆ ಪ್ರಶ್ನೆಯ ಚಿಹ್ನೆಗಳು

"24.06.2025ರ ಎಸ್‌ಐಆರ್ ಆದೇಶದಲ್ಲಿ ಹೇಳಿರುವಂತೆ ಚುನಾವಣಾ ಆಯೋಗ ಈ ಹಿಂದೆ ಹಲವು ಬಾರಿ ಎಸ್‌ಐಆರ್‌ಗಳನ್ನು ನಡೆಸಿದೆ. ಬಿಹಾರದಲ್ಲಿ ಕೊನೆಯ ಬಾರಿಗೆ ಇದನ್ನು 2002–2003ರಲ್ಲಿ ಕೈಗೊಳ್ಳಲಾಯಿತು ಮತ್ತು ಗಣತಿಯ ಅವಧಿ 15.07.2002ರಿಂದ 14.08.2002 ರವರೆಗೆ ಇತ್ತು" ಎಂದು ಅದರಲ್ಲಿ ತಿಳಿಸಲಾಗಿತ್ತು.

"ಪ್ರಸ್ತುತ ಎಸ್‌ಐಆರ್ 25.06.2025 ರಿಂದ 26.07.2025 ರವರೆಗೆ ಎಣಿಕೆಯ ಅವಧಿಯನ್ನು ಹೊಂದಿದೆ. ಹೀಗಾಗಿ, ಚುನಾವಣಾ ಆಯೋಗ ತರಾತುರಿಯಲ್ಲಿ ಇದನ್ನು ನಡೆಸುತ್ತಿದೆ ಎಂಬ ಆರೋಪವು ತಪ್ಪು ಕಲ್ಪನೆಯಾಗಿದೆ" ಎಂದು ಅದು ಹೇಳಿತ್ತು.

ಎರಡನೆಯದಾಗಿ, ಈ ಅಫಿಡವಿಟ್‌ನಲ್ಲಿ, ಚುನಾವಣಾ ಆಯೋಗವು ಒಂದು ಸ್ವತಂತ್ರ ಮೌಲ್ಯಮಾಪನವನ್ನು ನಡೆಸಿದ್ದು, ಅದರ ಆಧಾರದ ಮೇಲೆ ದೇಶಾದ್ಯಂತ ಎಸ್‌ಐಆರ್ ಅನ್ನು ನಡೆಸಲು ನಿರ್ಧರಿಸಿದೆ ಎಂದೂ ಹೇಳಲಾಗಿತ್ತು. ಈ ಅಫಿಡವಿಟ್ ಸಾರ್ವಜನಿಕಗೊಂಡ ಕೂಡಲೇ 'ಸತರ್ಕ್ ನಾಗರಿಕ್ ಸಂಘಟನ್' ಮತ್ತು ಜನತೆಯ ಮಾಹಿತಿ ಹಕ್ಕಿಗಾಗಿ ರಾಷ್ಟ್ರೀಯ ಅಭಿಯಾನ' (ಎನ್‌ಸಿಪಿಆರ್‌ಐ)ದ ಅಂಜಲಿ ಭಾರದ್ವಾಜ್ ಈ ಬಗ್ಗೆ ದಾಖಲೆಗಳನ್ನು ಒದಗಿಸುವಂತೆ ಎರಡು ಆರ್‌ಟಿಐ ಅರ್ಜಿಗಳನ್ನು ಸಲ್ಲಿಸಿದ್ದರು.

"ಯಾವುದೇ ಮಾಹಿತಿ ಲಭ್ಯವಿಲ್ಲ"!

ಮೊದಲನೆಯದಾಗಿ, 2003ರಲ್ಲಿ ಬಿಹಾರದಲ್ಲಿ ನಡೆಸಿದ ಮತದಾರ ಪಟ್ಟಿಯ ತೀವ್ರ ಪರಿಷ್ಕರಣೆಯ ಆದೇಶದ ಪ್ರತಿ ಅಥವ ಅಧಿಸೂಚನೆಯ ಪ್ರತಿ ಹಾಗೂ ಆ ಪರಿಷ್ಕರಣೆಯ ರೀತಿ ಮತ್ತು ವಿಧಾನ, ವಿಧಿಸಿದ ಫಾರ್ಮ್‌ಗಳು ಮತ್ತು ಸಲ್ಲಿಸಬೇಕಾಗಿದ್ದ ದಾಖಲೆಗಳನ್ನು ನಿರೂಪಿಸುವ ಮಾರ್ಗದರ್ಶಿ ಸೂಚಿಯ ಒಂದು ಪ್ರತಿಯನ್ನು ಅವರು ಕೇಳಿದ್ದರು.

ಇದಕ್ಕೆ ಉತ್ತರವಾಗಿ, ಚುನಾವಣಾ ಆಯೋಗ ಈಗಾಗಲೇ ಅದರ ವೆಬ್‌ಸೈಟಿನಲ್ಲಿರುವ ಜೂನ್ 24, 2025ರ ಮಾರ್ಗಸೂಚಿಗಳನ್ನು ಮಾತ್ರ ಉಲ್ಲೇಖಿಸಿದೆ. ಸುಪ್ರಿಂ ಕೋರ್ಟಿಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಕೂಡ ಅದು 2003ರ ಎಸ್‌ಐಆರ್ ಬಗ್ಗೆ ಆದೇಶದ ಅಥವ ಆಗಿನ ಮಾರ್ಗಸೂಚಿಗಳ ಪ್ರತಿಯನ್ನು ಲಗತ್ತಿಸದೇ ಅದರ ಕಾಲಾವಧಿ ಕೂಡ ಒಂದು ತಿಂಗಳಷ್ಟೇ ಎಂದಿತ್ತು. ಅಲ್ಲದೆ ಆಗ ಕೇವಲ 4 ದಸ್ತಾವೇಜುಗಳನ್ನು ಮಾತ್ರ ಪ್ರಮಾಣವಾಗಿ ತೆಗೆದುಕೊಳ್ಳಲಾಗಿತ್ತು ಎಂದೂ ಹೇಳಲಾಗಿತ್ತು. ಆದರೆ ಚುನಾವಣಾ ಆಯೋಗದ ವೆಬ್‌ಸೈಟಿನಲ್ಲಿ ಈ ಕುರಿತು ಯಾವ ದಾಖಲೆಯೂ ಲಭ್ಯವಿಲ್ಲ. ಈಗಲೂ ಅದು ನೀಡಿರುವ ಉತ್ತರವೆಂದರೆ, ಈಗಾಗಲೇ ಸಾರ್ವಜನಿಕವಾಗಿ ಲಭ್ಯವಿರುವ ಜೂನ್ 24, 2025ರ (ಈಗಿನ ಎಸ್‌ಐಆರ್‌ನ) ಆದೇಶವನ್ನು ನೋಡಿ ಎಂದು. ಅದರಲ್ಲಿಯಂತೂ 2003ರ ಪರಿಷ್ಕರಣೆಯ ಬಗ್ಗೆ ಕೇಳಿದ ಯಾವ ಮಾಹಿತಿಗಳೂ ಇರಲಿಲ್ಲ. ಇದ್ದಿದ್ದರೆ ಆರ್‌ಟಿಐ ಪ್ರಶ್ನೆಗಳು ಉದ್ಭವಿಸುತ್ತಿರಲಿಲ್ಲ.

ಆ ತೀವ್ರ ಪರಿಸ್ಕರಣೆಯ ಆದೇಶ ಮತ್ತು ಮಾರ್ಗಸೂಚಿ ಮಹತ್ವದ್ದಾಗುತ್ತದೆ. ಏಕೆಂದರೆ ಈ ಬಾರಿಯ ತೀವ್ರ ಪರಿಷ್ಕರಣೆಯಲ್ಲಿ ಆ ಪರಿಷ್ಕರಣೆ ತಯಾರಿಸಿದ ಪಟ್ಟಿಯಲ್ಲಿ ಇರುವವರಿಗೆ ದಾಖಲೆಗಳ ವಿಷಯದಲ್ಲಿ ವಿನಾಯ್ತಿ ಕೊಡಲಾಗಿದೆ ಎನ್ನುತ್ತಾರೆ ಅಂಜಲಿ ಭಾರದ್ವಾಜ್

ಬಿಹಾರದಲ್ಲಿ ಎಸ್‌ಐಆರ್ ನಡೆಸಿರುವ ರೀತಿಗೆ ಬಂದಿರುವ ಟೀಕೆ–ಟಿಪ್ಪಣಿಗಳು ಮತ್ತು ಕರಡು ಪಟ್ಟಿಯಲ್ಲಿನ ಗಮನಾರ್ಹ ಸಂಖ್ಯೆಯ ತಪ್ಪುಗಳು ಮತದಾರ ಪಟ್ಟಿಯನ್ನು ಶುಚಿಗೊಳಿಸುವ ಪ್ರಯತ್ನ, ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂಬ ಚುನಾವಣಾ ಆಯೋಗದ ಹೇಳಿಕೆಯ ಪ್ರಾಮಾಣಿಕತೆಯ ಬಗ್ಗೆ ಪ್ರಶ್ನೆಗಳನ್ನು ಎಬ್ಬಿಸಿರುವುದೂ ಸಾಲದೆಂಬಂತೆ, ಚುನಾವಣಾ ಆಯೋಗ ಸುಪ್ರಿಂ ಕೋರ್ಟಿಗೆ ಜುಲೈ 21ರಂದು ಸಲ್ಲಿಸಿದ ಅಫಿಡವಿಟ್ ಬಗ್ಗೆಯೂ ಈಗ ಪ್ರಶ್ನೆಯೆದ್ದಿದೆ.

ಅವರ ಮತ್ತೊಂದು ಆರ್‌ಟಿಐ ಕೋರಿಕೆ–ಯಾವ ಸ್ವತಂತ್ರ ಅಧ್ಯಯನದ ಅಥವ ವಿಶ್ಲೇಷಣೆಯ ಆಧಾರದಲ್ಲಿ ಚುನಾವಣಾ ಆಯೋಗ ದೇಶಾದ್ಯಂತ ಎಸ್‌ಐಆರ್ ನಡೆಸಲು ನಿರ್ಧರಿಸಿರುವುದಾಗಿ ಹೇಳಿದೆಯೋ, ಆ ಸ್ವತಂತ್ರ ಅಧ್ಯಯನದ ಅಥವ ವಿಶ್ಲೇಷಣೆಯ ಪ್ರತಿ ಮತ್ತು ಎಸ್‌ಐಆರ್‌ಗೆ ಸಂಬಂಧಪಟ್ಟ ಎಲ್ಲ ಕಡತಗಳು, ಅದರಲ್ಲಿನ ಟಿಪ್ಪಣಿಗಳು, ಪತ್ರವ್ಯವಹಾರ ಮತ್ತು ದಾಖಲೆಗಳ ಪ್ರತಿಗಳು.

ಇದಕ್ಕೂ ಅವರಿಗೆ ಚುನಾವಣಾ ಆಯೋಗದಿಂದ ಸಿಕ್ಕ ಉತ್ತರ, ಅದೇ 'ಜೂನ್ 24, 2025ರ ಮಾರ್ಗಸೂಚಿಗಳನ್ನು ನೋಡಿ', ಅದರಲ್ಲಿ ಎಲ್ಲವೂ ತಿಳಿಯುತ್ತದೆ ಎಂದು. ಜತೆಗೆ "ಇಲ್ಲ, ಈ ವಿಷಯದಲ್ಲಿ ಆಯೋಗದ ಬಳಿ ಯಾವುದೇ ಮಾಹಿತಿ ಲಭ್ಯವಿಲ್ಲ" ಎಂಬ ಸಾಲು!

ಫೈಲ್‌ಗಳು ಲಭ್ಯವಿಲ್ಲದಿರುವುದು "ಆಶ್ಚರ್ಯಕರ"


ಆಯೋಗದಲ್ಲಿ ಅಂತಹ ಯಾವುದೇ ಫೈಲ್‌ಗಳು ಲಭ್ಯವಿಲ್ಲದಿರುವುದು "ಆಶ್ಚರ್ಯಕರ" ಎಂದು ಈ ಬಗ್ಗೆ ಅಂಜಲಿ ಭಾರದ್ವಾಜ್ ಟಿಪ್ಪಣಿ ಮಾಡಿದ್ದಾರೆ.

"ಸಾಮಾನ್ಯವಾಗಿ, ದೇಶಾದ್ಯಂತ ಎಸ್‌ಐಆರ್ ನಂತಹ ಪ್ರಕ್ರಿಯೆಯ ಪ್ರಮಾಣ ಮತ್ತು ಸ್ವರೂಪವನ್ನು ನೋಡಿದರೆ, ಆಯೋಗದ ಒಳಗೆ ಮತ್ತು ವಿವಿಧ ಸಚಿವಾಲಯಗಳು ಸೇರಿದಂತೆ ಇತರ ಸಂಸ್ಥೆಗಳೊಂದಿಗೆ ಪತ್ರವ್ಯವಹಾರ ಮತ್ತು ಕಲಾಪಗಳು ನಡೆದಿರುತ್ತವೆ ಎಂದು ನಿರೀಕ್ಷಿಸಬಹುದು. ಆದ್ದರಿಂದ, 2025ರಲ್ಲಿ ದೇಶಾದ್ಯಂತ ವಿಶೇಷ ತೀವ್ರ ಪರಿಷ್ಕರಣೆಯನ್ನು ಪ್ರಾರಂಭಿಸುವ ನಿರ್ಧಾರವನ್ನು ಸಂಸ್ಕರಿಸಿ ಅನುಮೋದಿಸಿದ ಯಾವುದೇ ಫೈಲ್‌ಗಳು ಆಯೋಗದಲ್ಲಿ ಲಭ್ಯವಿಲ್ಲ ಎಂದು ಭಾರತದ ಚುನಾವಣಾ ಆಯೋಗ ಹೇಳಿರುವುದು ಆಶ್ಚರ್ಯಕರವಾಗಿದೆ" ಎಂದು ಅವರು ಹೇಳಿದ್ದಾರೆ.

'ರಿಪೋರ್ಟರ್ಸ್ ಕಲೆಕ್ಟಿವ್'ನ ಆಯುಷಿ ಕರ್ ಮತ್ತು ಹರ್ಷಿತ ಮನ್ವಾಣಿಯವರು ಕೂಡ ಈ ಬಗ್ಗೆ ದಾಖಲೆಗಳನ್ನು ಒದಗಿಸುವಂತೆ ಆರ್‌ಟಿಐ ಅರ್ಜಿಗಳನ್ನು ಸಲ್ಲಿಸಿದ್ದರು. ಮಾಹಿತಿ ನೀಡಲು ನಿಗದಿತ ಒಂದು ತಿಂಗಳ ಅವಧಿಯ ನಂತರ ಈಗ ಅವರಿಗೂ ಸಿಕ್ಕಿದ್ದು ಇಂತಹುದೇ 'ಉತ್ತರಗಳು'.

ಇದಕ್ಕ ಮೊದಲು ಈ ಸಂಸ್ಥೆ ಕಾನೂನು ಸಚಿವಾಲಯದಿಂದಲೂ, ಚುನಾವಣಾ ಆಯೋಗ ಈ ಕುರಿತು ಕಾನೂನು ಅಭಿಪ್ರಾಯ ಕೇಳಿದೆಯೇ, ಕೇಳಿದ್ದರೆ ಅದರ ಕಾಗದಪತ್ರಗಳು, ಕಡತಗಳು,

ವ್ಯಂಗ್ಯಚಿತ್ರ: ಮಂಜುಲ್, ಫೇಸ್‌ಬುಕ್



"ಈ ನಿರ್ವಾಚನ್, ಸದನ್'ನಲ್ಲಿ ಮೂವರಿಗಿಂತ ಹೆಚ್ಚು ಮಂದಿ ಇರುವರೇನೋ ಎಂದು ನನಗನಿಸುತ್ತಿದೆ"

ಪತ್ರವ್ಯವಹಾರ, ಮೆಮೋಗಳು, ಟಿಪ್ಪಣಿಗಳು, ಪ್ರಸ್ತುತಿಗಳು ಇತ್ಯಾದಿಗಳನ್ನು ಒದಗಿಸಿ ಎಂದು ಕೇಳಿತ್ತಂತೆ. ಅದಕ್ಕೆ ಸಚಿವಾಲಯದಿಂದ ಸಿಕ್ಕ ಉತ್ತರ 'ಇಂತಹ ಸಮಾಲೋಚನೆಗಳ ದಾಖಲೆ ತಾವು ಇಟ್ಟುಕೊಂಡಿರಲಿಕ್ಕಿಲ್ಲ' ಹೀಗನ್ನುತ್ತ ಕೋರಿಕೆಯನ್ನು ಅದು ಚುನಾವಣಾ ಆಯೋಗಕ್ಕೆ ವರ್ಗಾಯಿಸಿತಂತೆ. ಆಗಸ್ಟ್ 20ರಂದು ಅಂದರೆ ಈ ಆರ್‌ಟಿಐ ಅರ್ಜಿ ಸಲ್ಲಿಸಿ ಒಂದು ತಿಂಗಳು ಕಳೆದ ಮೇಲೆ ಸಿಕ್ಕ ಉತ್ತರ–'ನಮ್ಮ ಬಳಿ ಈ ಕುರಿತು ಮಾಹಿತಿ ಲಭ್ಯವಿಲ್ಲ'!

ಅಧಿಸೂಚನೆ ಮೊದಲು, ಅದಕ್ಕೆ ಆಧಾರದ ಹುಡುಕಾಟ ನಂತರ?

ಅಂದರೆ, ಎಸ್‌ಐಆರ್ ಬಗ್ಗೆ ಬಹಳಷ್ಟು ಪ್ರಶ್ನೆಗಳಿದ್ದರೂ ಕಾನೂನಾತ್ಮಕ ಸಮಾಲೋಚನೆ ಇಲ್ಲದೆಯೇ ಅದನ್ನು ನಡೆಸಲಾಗುತ್ತಿದೆಯೇ? ಚುನಾವಣಾ ಆಯೋಗ ನಾಗರಿಕರಿಂದ ಅವರ ಅಸ್ತಿತ್ವ, ಮತದಾನದ ಹಕ್ಕು, ಪೌರತ್ವದ ಹಕ್ಕನ್ನು ಊರ್ಜಿತಗೊಳಿಸಲು ದಾಖಲೆಗಳನ್ನು ಒಂದು ತಿಂಗಳ ಒಳಗೆ ಒದಗಿಸುವಂತೆ ಕೇಳುತ್ತದೆ, ಆದರೆ ತಾನೇ, ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಕನಿಷ್ಟ ಪಾರದರ್ಶಕತ್ವವನ್ನು ನಿರಾಕರಿಸುತ್ತದೆ ಎಂದು ಆಯುಷಿಕರ್ ಮತ್ತು ಹರ್ಷಿತ ಮನ್ವಾಣಿಯವರು ಟಿಪ್ಪಣಿ ಮಾಡಿದ್ದಾರೆ.

ಅಲ್ಲದೆ, ತಾನು 11 ದಸ್ತಾವೇಜುಗಳನ್ನು ಕೇಳಿರುವುದನ್ನು ಮತ್ತು ಆಧಾರ್, ಮತದಾರ ಕಾರ್ಡ್ ಮತ್ತು ಪಡಿತರ ಚೀಟಿಯನ್ನು ಸ್ವೀಕರಿಸದಿರುವುದನ್ನು ಚುನಾವಣಾ ಆಯೋಗ ವಿಚಾರಣೆಯ ವೇಳೆಯಲ್ಲಿ ಸಮರ್ಥಿಸಿಕೊಂಡಿತು. ಆದರೆ ಈ 11 ದಸ್ತಾವೇಜುಗಳ ಲಭ್ಯತೆಯ ಬಗ್ಗೆ ಮಾಹಿತಿಗಳು ಜೂನ್ 24ರಂದು ಎಸ್‌ಐಆರ್‌ನ ಅಧಿಸೂಚನೆ ಹೊರಡಿಸುವಾಗ ಅದರ ಬಳಿ ಇರಲಿಲ್ಲ, ಅದಕ್ಕೆ ಸವಾಲು ಬಂದ ಮೇಲೆಯೇ ಅವನ್ನು ಪಡೆಯಲು ಪ್ರಯತ್ನಿಸಲಾಯಿತು ಎಂಬುದು ಆಯೋಗದ ಜುಲೈ 21ರ ಅಫಿಡವಿಟ್‌ನಿಂದ ತಿಳಿಯುತ್ತದೆ ಎನ್ನುತ್ತಾರೆ ಪತ್ರಕರ್ತೆ ಶ್ರಾವಸ್ತಿ ದಾಸ್‌ಗುಪ್ತ (ದಿ ವೈರ್, ಸಪ್ಟಂಬರ್4). ಉದಾ: ಪಾಟ್ನಾದ ಪಾಸ್‌ಪೋರ್ಟ್ ಕಚೇರಿಗೆ ಪಾಸ್‌ಪೋರ್ಟ್ ಮಾಹಿತಿಯನ್ನು ಜುಲೈ 15ರಂದು ಆಯೋಗ ಕೇಳಿತು; ಜನನ–ಮರಣ ನೋಂದಾವಣೆಗಳ ಮಾಹಿತಿಯನ್ನು ಜುಲೈ 16ರಂದು ಕೇಳಿತು. ಬಹುಶಃ ತಮ್ಮ ಬಳಿ ಯಾವುದೇ ಮಾಹಿತಿ ಲಭ್ಯವಿಲ್ಲ ಎಂದು ಆಯೋಗ ಪ್ರಾಮಾಣಿಕವಾಗಿಯೇ ಹೇಳುತ್ತಿರಬಹುದು, ಏಕೆಂದರೆ ಇದು ಆಯೋಗದ ನಿರ್ಧಾರವಾಗಿರದೆ, ಬೇರೆ ಯಾವುದೋ 'ಸರ್' ನಿರ್ಧಾರವಿರಬಹುದೇನೋ ಎಂದು ಒಬ್ಬ ರಾಜಕೀಯ ವಿಶ್ಲೇಷಕರು ವ್ಯಂಗ್ಯವಾಗಿ ಹೇಳುತ್ತಾರೆ.

ಈಗ, "ಸೆಪ್ಟೆಂಬರ್ 1ರ ನಂತರವೂ ಆಕ್ಷೇಪಣೆಗಳನ್ನು ಸಲ್ಲಿಸಬಹುದು"

ಸುಪ್ರಿಂ ಕೋರ್ಟಿನಲ್ಲಿ ಆಗಸ್ಟ್ 22ರಂದು ಮುಂದುವರೆದ ವಿಚಾರಣೆಯ ವೇಳೆ ಚುನಾವಣಾ ಆಯೋಗದ ವಕೀಲರು "ರಾಜಕೀಯ ಪಕ್ಷಗಳು ತಮ್ಮ ರಾಜಕೀಯ ಹಿತಾಸಕ್ತಿಗಳನ್ನು ಸಾಧಿಸಲಿಕ್ಕಷ್ಟೇ ಕೂಗೆಬ್ಬಿಸುತ್ತಾರೆ. ಅವು ಹೆಚ್ಚು ಬಿಎಲ್‌ಎಗಳನ್ನು ನೇಮಿಸಬಹುದು, ಆದರೆ ನೇಮಿಸುವುದಿಲ್ಲ" ಎಂದರು. ನ್ಯಾಯಪೀಠ ಕೂಡ ಕೈಬಿಟ್ಟ ಮತದಾರರನ್ನು ಮತ್ತೆ ಪಟ್ಟಿಗೆ ತರಲು ಆಯೋಗಕ್ಕೆ ನೆರವಾಗಿ ಎಂದು ರಾಜಕೀಯ ಪಕ್ಷಗಳಿಗೆ ಹೇಳಿತು ಮತ್ತು ಅವನ್ನು ಪ್ರತಿವಾದಿಗಳಾಗಿ ಸೇರಿಸಿತು.

ಆದರೆ ಈ ಮೊಕದ್ದಮೆ ಬಿಎಲ್‌ಎಗಳ ಬಗ್ಗೆ ಅಲ್ಲ, ಬಿಹಾರದ ಸಾಮಾನ್ಯ ಮತದಾರರ ಹಕ್ಕುಗಳ ಬಗ್ಗೆ ಎಂದು ಅರ್ಜಿದಾರ ಪರ ವಕೀಲರಾದ ಕಪಿಲ್ ಸಿಬಲ್ ಮತ್ತು ಎಎಂ ಸಿಂಗ್ವಿ ಹೇಳಿದರು. ಬಿಎಲ್‌ಎಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಬಿಡುತ್ತಿಲ್ಲ ಎಂದು ಪ್ರಶಾಂತ ಭೂಷಣ್ ಹೇಳಿದರು. ಈ ಎಸ್‌ಐಆರ್ ಕಾನೂನುಬದ್ಧವಾಗಿದೆಯೇ ಎಂಬ ಪ್ರಶ್ನೆಯೇ ಅತ್ಯುಚ್ಚ ನ್ಯಾಯಾಲಯದ ಮುಂದಿದೆಯಲ್ಲ ಎಂದು ಮತ್ತೊಬ್ಬ ಹಿರಿಯ ವಕೀಲ ಗೋಪಾಲ ಶಂಕರನಾರಾಯಣನ್ ಆಕ್ಷೇಪ ವ್ಯಕ್ತಪಡಿಸಿದರು (ದಿ ಹಿಂದು, ಆಗಸ್ಟ್ 23).

ಕರಡು ಪಟ್ಟಿಯಲ್ಲಿ ಬಹಳಷ್ಟು ಸಮಸ್ಯೆಗಳು ಕಂಡುಬಂದಿರುವುದರಿಂದ ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿಯನ್ನು ಸಪ್ಟಂಬರ್ 1ರಿಂದ 15ಕ್ಕೆ ವಿಸ್ತರಿಸಬೇಕು ಎಂದೂ ಕೇಳಲಾಯಿತು. ಇದನ್ನು ಪರಿಶೀಲಿಸಿ ಎಂದು ನ್ಯಾಯಪೀಠ ಆಯೋಗಕ್ಕೆ ಹೇಳಿತು. ಸಪ್ಟಂಬರ್ 8ರಂದು ಮುಂದಿನ ವಿಚಾರಣೆ ನಡೆಯುವುದಾಗಿ ಹೇಳಲಾಯಿತು.

ರಾಜಕೀಯ ಪಕ್ಷಗಳಿಂದ ಆಕ್ಷೇಪಣೆಗಳು ಬರುತ್ತಿಲ್ಲ ಎಂದು ಆಯೋಗ ಪತ್ರಿಕಾ ಹೇಳಿಕೆಗಳನ್ನು ನೀಡುತ್ತಿದ್ದರೆ, ಆಧಾರ್ ಕಾರ್ಡ್‌ಗಳನ್ನು ಪರಿಗಣಿಸಬೇಕು ಎಂಬ

....ಪುಟ 14 ಕ್ಕೆ

ರಷ್ಯಾದಿಂದ ರಿಯಾಯಿತಿ ದರದ ಕಚ್ಚಾ ತೈಲ ಆಮದು, ಆದರೆ, ಅದರ ಲಾಭ ಗ್ರಾಹಕರಿಗೆ ಸಿಗುತ್ತಿಲ್ಲ!!

ಭಾರತವು ಕಳೆದ ಎರಡು ವರ್ಷಗಳಲ್ಲಿ, ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿದೆ. ಆದರೂ ಭಾರತದಲ್ಲಿ ಪೆಟ್ರೋಲ್, ಡೀಸಲ್ ಬೆಲೆ ಕಡಿಮೆ ಆಗಲಿಲ್ಲವೇಕೆ? ಇದರ ಲಾಭ ಯಾರಿಗೆ ಹೋಗುತ್ತಿದೆ? ರಿಯಾಯಿತಿ ದರದ ಕಚ್ಚಾ ತೈಲವನ್ನು ಸಂಸ್ಕರಿಸಿ, ಅದರ ಉತ್ಪನ್ನಗಳನ್ನು ವಿದೇಶದಲ್ಲಿ ಹೆಚ್ಚಿನ ಲಾಭಕ್ಕೆ ಮಾರಾಟ ಮಾಡುವ ಮೂಲಕ, ಭಾರತದ ಸಂಸ್ಕರಣಾಗಾರರು ಲಾಭ ಮಾಡಿಕೊಳ್ಳುತ್ತಿದ್ದಾರೆ. ಖಾಸಗಿ ತೈಲ ಕಂಪನಿಗಳಾದ ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ನಯಾರಾ ಎನರ್ಜಿ ಮಾತ್ರವಲ್ಲ, ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಹಾಗೂ ದರ ಕಡಿತಮಾಡದ ಕಾರಣಕ್ಕೆ ಹೆಚ್ಚಿನ ದರಕ್ಕೆ ತೆರಿಗೆ ವಿಧಿಸುವ ಸರ್ಕಾರಗಳೂ ಜನಸಾಮಾನ್ಯರನ್ನು ವಂಚಿಸಿ ಸುಲಿಗೆ ಮಾಡತೊಡಗಿವೆ. ಲಾಭಗಳು ಮನೆಯ ಬಜೆಟ್‌ಗಳಲ್ಲಿ ಅಲ್ಲ, ಕಾರ್ಪೊರೇಟ್ ಬ್ಯಾಲೆನ್ಸ್ ಶೀಟ್ ಗಳು ಮತ್ತು ಸರ್ಕಾರಿ ಆದಾಯದ ಹರಿವುಗಳಲ್ಲಿ ಕೇಂದ್ರೀಕೃತವಾಗಿವೆ.

ಕಳೆದ ಎರಡು ವರ್ಷಗಳಲ್ಲಿ, ಭಾರತವು ಶೇ. 20ರಿಂದ ಶೇ. 50ರ ವರೆಗಿನ ರಿಯಾಯಿತಿ ದರದಲ್ಲಿ ರಷ್ಯಾದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಇದು ಜಾಗತಿಕ ಬೆಲೆಗಳಿಗಿಂತ ಬ್ಯಾರೆಲ್‌ಗೆ 5 ಡಾಲರ್‌ಗಳಿಂದ 30 ಡಾಲರ್‌ಗಳಷ್ಟು (ಅಮೆರಿಕನ್ ಡಾಲರ್) ಕಡಿಮೆಯಾಗಿದೆ. ಆದರೂ ಪೆಟ್ರೋಲ್ ಬೆಲೆಗಳು ಲೀಟರ್‌ಗೆ ಬೆಂಗಳೂರಿನಲ್ಲಿ 100 ರೂ.ಗಳಷ್ಟಿದೆ. ಡೀಸೆಲ್ ಲೀಟರ್‌ಗೆ ರೂ.90 ರೂ.ಗಳಷ್ಟಿದೆ. ಇದೇ ಅವಧಿಯಲ್ಲಿ, ಸರ್ಕಾರಿ ಸ್ವಾಮ್ಯದ ತೈಲ ಮಾರುಕಟ್ಟೆ ಕಂಪನಿಗಳು (OMC – Oil Marketing Companies) ಸಂಯೋಜಿತ ಲಾಭದಲ್ಲಿ ಭಾರಿ ಏರಿಕೆಯನ್ನು ವರದಿ ಮಾಡಿವೆ, ಆದರೆ ಕೇಂದ್ರ ಮತ್ತು ರಾಜ್ಯಗಳು ಇಂಧನ ತೆರಿಗೆಗಳಲ್ಲಿ ವಾರ್ಷಿಕವಾಗಿ ಸುಮಾರು 7 ಲಕ್ಷ ಕೋಟಿ ರೂ.ಗಳನ್ನು ಸಂಗ್ರಹಿಸುತ್ತಿವೆ. ಆದಾಗ್ಯೂ, ಭಾರತದ ಗ್ರಾಹಕರು ಖರೀದಿಸುವ ಇಂಧನ ಬೆಲೆಗಳಲ್ಲಿ ಯಾವುದೇ ಕಡಿತವನ್ನು ಕಂಡಿಲ್ಲ.

ತೆರಿಗೆ ಹೆಚ್ಚಳದ ಮೂಲಕ ಗ್ರಾಹಕರಿಗೆ ವಂಚನೆ

ಇತ್ತೀಚೆಗೆ, ಅಂದರೆ 2025ರ ಏಪ್ರಿಲ್ 8ರಂದು ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ತಲಾ 2 ರೂಪಾಯಿ ಹೆಚ್ಚಳ ಮಾಡಿತು. ಆದರೂ, ಇದು ಗ್ರಾಹಕರ ಮೇಲೆ ನೇರವಾಗಿ ಪರಿಣಾಮ ಬೀರಲಿಲ್ಲ. ಏಕೆಂದರೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ಬೆಲೆ ಇಳಿಕೆಯಾಗಿತ್ತು. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು 2 ರೂ ಇಳಿಸುವ ಮೂಲಕ ಈ ಇಳಿಕೆಯ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಬೇಕಾಗಿತ್ತು. ಆದರೆ, ಕೇಂದ್ರ ಸರ್ಕಾರ ಸುಂಕ ಹೆಚ್ಚಳಮಾಡುವ ಮೂಲಕ ಅದನ್ನು ತಾನೇ ಪಡೆದುಕೊಳ್ಳಲು ಮುಂದಾಯಿತು. ಕಳೆದ 11 ವರ್ಷಗಳಿಂದಲೂ ಮೋದಿ ನೇತೃತ್ವದ ಕೇಂದ್ರ ಸರ್ಕಾರವು, ಅಂತರರಾಷ್ಟ್ರೀಯ ತೈಲ ಬೆಲೆಗಳು ಕುಸಿದಾಗಲೆಲ್ಲಾ ಇದೇ ರೀತಿ ಅಬಕಾರಿ ಸುಂಕ ಹೆಚ್ಚಳಮಾಡುವ ಮೂಲಕ ಗ್ರಾಹಕರಿಗೆ ಸಿಗಬೇಕಾದ ಲಾಭವನ್ನು ತಾನೇ ಕಸಿದುಕೊಳ್ಳುತ್ತಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ದರ ಕಡಿಮೆಯಾದರೆ ಅಥವಾ ವಿದೇಶದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲವು ಕಡಿಮೆ ದರದಲ್ಲಿ ಸಿಗುವುದಿದ್ದರೆ, ಇದಕ್ಕೆ ಅನುಗುಣವಾಗಿ ಭಾರತದಲ್ಲಿಯೂ ಪೆಟ್ರೋಲ್, ಡೀಸೆಲ್ ಬೆಲೆಗಳು ಕಡಿಮೆ ಆಗಬೇಕಲ್ಲವೇ? ಬೆಲೆ ಕುಸಿತದ ಲಾಭ ಗ್ರಾಗಕರಿಗೆ ಸಿಗಬೇಕಲ್ಲವೇ? ಆದರೆ, ಭಾರತದಲ್ಲಿ ಆ ರೀತಿ ಆಗುತ್ತಿಲ್ಲ. ಅಂತರರಾಷ್ಟ್ರೀಯ ಮಟ್ಟದ ಬೆಲೆ ಕುಸಿತದ ಲಾಭ ಗ್ರಾಹಕರಿಗೆ ಸಿಗದಂತೆ ಮಾಡಲು ಕೇಂದ್ರದಲ್ಲಿ ಆಡಳಿತ ಮಾಡುತ್ತಿರುವ ಮೋದಿ ಸರ್ಕಾರವು ಅಬಕಾರಿ ಸುಂಕ ಹೆಚ್ಚಳಮಾಡಿದ್ದನ್ನು ನಾವೀಗಾಗಲೇ ನೋಡಿದ್ದೇವೆ. 2014ರಿಂದ 2016ರ ನಡುವೆ ತೈಲ ಬೆಲೆ ಕುಸಿತದತ್ತ ಸಾಗುತ್ತಿದ್ದಾಗ ಕೇಂದ್ರ ಸರ್ಕಾರ ಒಂಬತ್ತು ಬಾರಿ ಡೀಸೆಲ್ ಮತ್ತು ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು ಹೆಚ್ಚಿಸಿತ್ತು. ಒಟ್ಟಾರೆಯಾಗಿ ಆ 15 ತಿಂಗಳಲ್ಲಿ ಪೆಟ್ರೋಲ್ ಮೇಲಿನ ಸುಂಕವನ್ನು ಲೀಟರ್‌ಗೆ ರೂ.11.77 ಮತ್ತು ಡೀಸೆಲ್ ಮೇಲಿನ ಸುಂಕವನ್ನು ಲೀಟರ್‌ಗೆ ರೂ.13.47 ಹೆಚ್ಚಿಸಲಾಯಿತು. ಇದು ಸರಕಾರಿ ಅಬಕಾರಿ ಸುಂಕ ವಸೂಲಿಯನ್ನು 2016–



17ರಲ್ಲಿ ದ್ವಿಗುಣಗೊಳಿಸಿ 2,42,000 ಕೋಟಿ ರೂ. ಗೆ ತಲುಪಲು ಸಹಾಯ ಮಾಡಿತು. 2014–15ರಲ್ಲಿ 99,000 ಕೋಟಿ ರೂ.ಗಳಷ್ಟಿತ್ತು.

ಕೇಂದ್ರ ಸರ್ಕಾರ ವಿಧಿಸುವ ಅಬಕಾರಿ ಸುಂಕ 2014ರಲ್ಲಿ ಒಂದು ಲೀಟರ್ ಪೆಟ್ರೋಲ್ ಗೆ ರೂ. 9.20 ಇತ್ತು. ಇಂದು ರೂ. 13 ಆಗಿದೆ. ಅದೇ ರೀತಿ ಅಂದು ಡೀಸೆಲ್ ಮೇಲಿದ್ದ ಅಬಕಾರಿ ಸುಂಕ ರೂ. 3.46 ಇತ್ತು, ಇಂದು 10 ರೂಪಾಯಿ ಇದೆ. ಪೆಟ್ರೋಲ್‌ನ ಮೂಲ ಬೆಲೆ ಮತ್ತು ಅದರ ತೆರಿಗೆಗಳನ್ನು ಕೂಡಿದಾಗ ಬರುವ ಒಟ್ಟು ಮೊತ್ತದ ಮೇಲೆ ಶೇಕಡಾವಾರು ತೆರಿಗೆ ಲೆಕ್ಕ ಹಾಕುವುದರಿಂದ ಸಹಜವಾಗಿ ರಾಜ್ಯ ಸರ್ಕಾರಗಳು ವಿಧಿಸುವ ತೆರಿಗೆಗಳು ಹೆಚ್ಚಾಗುತ್ತವೆ.

2014ರ ಏಪ್ರಿಲ್ ತಿಂಗಳಲ್ಲಿ ಒಂದು ಬ್ಯಾರಲ್ (119.24 ಲೀಟರ್) ಕಚ್ಚಾ ತೈಲದ ಬೆಲೆ 105 ಡಾಲರ್ (ಅಂದಿನ ರೂಪಾಯಿ ಮೌಲ್ಯದ ಲೆಕ್ಕದಲ್ಲಿ ಅಂದಾಜು 6,100 ರೂಪಾಯಿ) ಇತ್ತು. ಅಂದಿನ ಪೆಟ್ರೋಲ್ ಬೆಲೆ ಸರಿಸುಮಾರು 79 ರೂ.ಗಳಾಗಿತ್ತು. ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 64.83 ಡಾಲರ್ (ರೂ. 5,710– ಸೆಪ್ಟೆ, 02, 2025) ದರದಲ್ಲಿ ಸಿಗುತ್ತಿದ್ದರೂ ಪೆಟ್ರೋಲ್ ಬೆಲೆ ಇಳಿಕೆಯಾಗುವ ಬದಲು ಮತ್ತಷ್ಟು ಹೆಚ್ಚಾಗಿ ರೂ. 100 ದಾಟಿದೆ.

ಉಳಿತಾಯವನ್ನು ದೇಶೀಯ ಗ್ರಾಹಕರಿಗೆ ವರ್ಗಾಯಿಸುವ ಬದಲು ರಫ್ತಿಗೆ ಆದ್ಯತೆ

2025ರಲ್ಲೂ ರಷ್ಯಾ ಭಾರತದ ಪ್ರಮುಖ ಕಚ್ಚಾ ತೈಲ ಪೂರೈಕೆದಾರನಾಗಿ ಮುಂದುವರೆದಿದ್ದು, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ನಯಾರಾ ಎನರ್ಜಿಯಂತಹ ಖಾಸಗಿ ಸಂಸ್ಕರಣಾಗಾರರು ಅತಿ ಹೆಚ್ಚು ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ಮೂಲಕ ಹೆಚ್ಚಿನ ಲಾಭಗಳಿಸಿದ್ದಾರೆ. ಈ ಸಂಸ್ಕರಣಾಗಾರಗಳು ರಿಯಾಯಿತಿ ದರದಲ್ಲಿ ರಷ್ಯಾದ ತೈಲವನ್ನು ಆಮದು ಮಾಡಿಕೊಂಡು ಪೆಟ್ರೋಲ್, ಡೀಸೆಲ್ ಮತ್ತು ವಾಯುಯಾನ ಟರ್ಬೈನ್ ಇಂಧನವನ್ನಾಗಿ (ATF) ಸಂಸ್ಕರಿಸಿ, ಯುರೋಪಿಯನ್ ಒಕ್ಕೂಟ ಮತ್ತು ಯುನೈಟೆಡ್ ಸ್ಟೇಟ್ಸ್ ಸೇರಿದಂತೆ ಪ್ರಮುಖ ಮಾರುಕಟ್ಟೆಗಳಿಗೆ ಉತ್ಪನ್ನಗಳನ್ನು ರಫ್ತುಮಾಡುತ್ತಿವೆ. ಪೆಟ್ರೋಲಿಯಂ ಉತ್ಪನ್ನಗಳ ರಫ್ತು 2024–25ರ ಆರ್ಥಿಕ ವರ್ಷದಲ್ಲಿ 60 ಬಿಲಿಯನ್ ಡಾಲರ್ ತಲುಪಿದೆ. ಯುರೋಪಿಯನ್ ಖರೀದಿದಾರರು ರಷ್ಯಾದ ತೈಲವನ್ನು ನಿರ್ಬಂಧಿಸಿದರೂ, ಯುರೋಪಿಯನ್ ಒಕ್ಕೂಟಕ್ಕೆ (EU) ಮಾತ್ರವೇ 15 ಬಿಲಿಯನ್ ಡಾಲರ್ ಮೌಲ್ಯದ ತೈಲ ರವಾನೆಯಾಗಿದೆ. ರಿಯಾಯಿತಿ ದರದ ಕಚ್ಚಾ ತೈಲವನ್ನು ಸಂಸ್ಕರಿಸುವ ಮೂಲಕ ಮತ್ತು ಹೆಚ್ಚಿನ ಲಾಭದ ಉತ್ಪನ್ನಗಳನ್ನು ವಿದೇಶದಲ್ಲಿ ಮಾರಾಟಮಾಡುವ ಮೂಲಕ, ಈ ಸಂಸ್ಕರಣಾಗಾರರು ದೇಶೀಯ ಗ್ರಾಹಕರಿಗೆ ಉಳಿತಾಯವನ್ನು ವರ್ಗಾಯಿಸುವ ಬದಲು ರಫ್ತಿಗೆ ಆದ್ಯತೆ ನೀಡಿದ್ದಾರೆ.

ಅಂತರರಾಷ್ಟ್ರೀಯ ಮಾಧ್ಯಮಗಳಲ್ಲಿ ಉಲ್ಲೇಖಿಸಲಾದ ಕೆಲವು ಅಂದಾಜಿನ ಪ್ರಕಾರ, ಭಾರತದ ಸಂಸ್ಕರಣಾಗಾರಗಳು ರಿಯಾಯಿತಿ ದರದಲ್ಲಿ ರಷ್ಯಾದ ತೈಲವನ್ನು ಆಮದು ಮಾಡಿಕೊಳ್ಳುವುದರಿಂದ 16 ಬಿಲಿಯನ್ ಡಾಲರ್ (1.40 ಲಕ್ಷ ಕೋಟಿ ರೂ.) ಹೆಚ್ಚುವರಿ ಲಾಭ ಗಳಿಸಿವೆ. ಅದರಲ್ಲಿ ಸುಮಾರು 6 ಬಿಲಿಯನ್ ಡಾಲರ್ (ಅಥವಾ ರೂ. 50,000 ಕೋಟಿಗೂ ಹೆಚ್ಚು) ರಿಲಯನ್ಸ್ ಇಂಡಸ್ಟ್ರೀಸ್‌ಗೆ ಹೋಗುತ್ತಿದೆ.

3 OMC ಗಳ ಲಾಭ 3,400 ಕೋಟಿಗಳಿಂದ 86,000 ಕೋಟಿಗೆ ಏರಿಕೆ!!

2022ರಲ್ಲಿ ರಷ್ಯಾ–ಉಕ್ರೇನ್ ಸಂಘರ್ಷದ ನಂತರ, ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪೊರೇಷನ್ (IOCL), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (BPCL), ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (HPCL) ಸೇರಿದಂತೆ ಭಾರತೀಯ ತೈಲ ಕಂಪನಿಗಳು ರಿಯಾಯಿತಿ ದರದಲ್ಲಿ ರಷ್ಯಾದ ಕಚ್ಚಾ ತೈಲದ ಆಮದು ಹೆಚ್ಚಿಸಿದವು. ಸರ್ಕಾರಿ ಸಂಸ್ಕರಣಾಗಾರರು ಪ್ರಾಥಮಿಕವಾಗಿ ದೇಶೀಯ ಮಾರುಕಟ್ಟೆಗೆ ಸರಬರಾಜು ಮಾಡಿದರೆ, ರಿಲಯನ್ಸ್ ಮತ್ತು ನಯಾರಾದಂತಹ ಖಾಸಗಿ ಸಂಸ್ಕರಣಾಗಾರರು ಯುರೋಪ್, ಯುಎಇ, ಸಿಂಗಾಪುರ ಮತ್ತು ಇತರ ಮಾರುಕಟ್ಟೆಗಳಿಗೆ ಆಕ್ರಮಣಕಾರಿಯಾಗಿ ರಫ್ತು ಮಾಡಿದರು.

2023–24ನೇ ಹಣಕಾಸು ವರ್ಷದಲ್ಲಿ, ಐಒಸಿ, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಒಟ್ಟು 86,000 ಕೋಟಿ ರೂ. ಲಾಭ ಗಳಿಸಿದ್ದು, ಹಿಂದಿನ ವರ್ಷದ ಲಾಭ ಕೇವಲ 3,400 ಕೋಟಿ ರೂ. ಗಳಷ್ಟಿತ್ತು. ಇಂಡಿಯನ್ ಆಯಿಲ್‌ನ ಲಾಭ ಮಾತ್ರ 8,242 ಕೋಟಿ ರೂ.ಗಳಿಂದ 39,619 ಕೋಟಿ ರೂ.ಗಳಿಗೆ ಏರಿಕೆಯಾಗಿದ್ದು, ಇದು ಶೇ. 381ರಷ್ಟು ಏರಿಕೆಯಾಗಿದೆ. ಭಾರತ್ ಪೆಟ್ರೋಲಿಯಂ ಅಭೂತಪೂರ್ವವಾಗಿ ಶೇ. 1,326ರಷ್ಟು ಏರಿಕೆಯಾಗಿದ್ದು, ಹಿಂದೂಸ್ತಾನ್ ಪೆಟ್ರೋಲಿಯಂ 8,974 ಕೋಟಿ ರೂ.ಗಳ ನಷ್ಟದಿಂದ 14,694 ಕೋಟಿ ರೂ.ಗಳ ಲಾಭದ ಕಡೆಗೆ ಬಂದಿದೆ.

ಬ್ಯಾರೆಲ್‌ಗೆ ರಿಲಯನ್ಸ್‌ಗೆ 12.5 ಡಾಲರ್ ಹೆಚ್ಚಿನ ಲಾಭ

ಖಾಸಗಿ ಸಂಸ್ಕರಣಾಗಾರರು ಇನ್ನೂ ಹೆಚ್ಚಿನ ಲಾಭ ಗಳಿಸಿದರು. ರಿಯಾಯಿತಿ ದರದಲ್ಲಿ ರಷ್ಯಾದ ಕಚ್ಚಾ ತೈಲದ ಅತಿದೊಡ್ಡ ಪಾಲನ್ನು ಆಮದು ಮಾಡಿಕೊಳ್ಳುವ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (RIL), ಪ್ರತಿ ಬ್ಯಾರೆಲ್‌ಗೆ 12.5 ಡಾಲರ್‌ಗಿಂತ ಹೆಚ್ಚಿನ ಸಂಸ್ಕರಣಾ ಲಾಭವನ್ನು ದಾಖಲಿಸಿದರೆ, ರಷ್ಯಾದ ರೋಸ್ ನೆಫ್ಟ್ ಬೆಂಬಲಿತ ನಯಾರಾ ಎನರ್ಜಿ ಪ್ರತಿ ಬ್ಯಾರೆಲ್‌ಗೆ 15.2 ಡಾಲರ್ ಲಾಭದ ವರದಿ ಮಾಡಿದೆ. ಈ ಲಾಭಗಳು ಪ್ರತಿದಿನ ಲಕ್ಷಾಂತರ ಬ್ಯಾರೆಲ್‌ಗಳಿಗಿಂತ ಹೆಚ್ಚು ಗುಣಿಸಿ, ಹತ್ತಾರು ಸಾವಿರ ಕೋಟಿಗಳಷ್ಟು ಅನಿರೀಕ್ಷಿತ ಲಾಭಕ್ಕೆ ಕಾರಣವಾಯಿತು. 2025ರ ಮೊದಲ ಆರು ತಿಂಗಳಲ್ಲಿ ರಿಲಯನ್ಸ್ ಇಂಡಸ್ಟ್ರೀಸ್‌ನ ಸಂಸ್ಕರಣಾಗಾರವು 21.66 MMT (ಮಿಲಿಯನ್ ಮೆಟ್ರಿಕ್ ಟನ್) ಸಂಸ್ಕರಿಸಿದ ಉತ್ಪನ್ನಗಳನ್ನು bp, ExxonMobil, Glencore, Vitol ಮತ್ತು Trafigura ನಂತಹ ಖರೀದಿದಾರರಿಗೆ ರಫ್ತುಮಾಡಿದೆ ಎಂದು ಡೇಟಾ ತೋರಿಸಿದೆ.

ಮಾರ್ಕೆಟಿಂಗ್ ಅಂಚುಗಳು: ಗುಪ್ತ ಪದರ

ತೆರಿಗೆಗಳನ್ನು ಮೀರಿ, OMCಗಳು ತಮ್ಮ ಮಾರುಕಟ್ಟೆ ಲಾಭವನ್ನು ನಾಟಕೀಯವಾಗಿ ವಿಸ್ತರಿಸಿವೆ. ಇಂಧನ ಮಾರಾಟದ ಲಾಭವು ಪೆಟ್ರೋಲ್ ಲೀಟರ್‌ಗೆ ರೂ. 15 ಮತ್ತು ಡೀಸೆಲ್‌ಗೆ ರೂ. 12 ತಲುಪಿದೆ, ಇದು ಚಿಲ್ಲರೆ ಬೆಲೆ ರಚನೆಯಲ್ಲಿ ಅತಿದೊಡ್ಡ ಗುಪ್ತ ಘಟಕಗಳಲ್ಲಿ ಒಂದಾಗಿದೆ. ಜಾಗತಿಕ ಕಚ್ಚಾ ತೈಲ ಬೆಲೆಯಲ್ಲಿ ಪ್ರತಿ ಬ್ಯಾರೆಲ್‌ಗೆ ಒಂದು ಡಾಲರ್ ಕುಸಿತವು OMC ಲಾಭವನ್ನು ಲೀಟರ್‌ಗೆ ಸುಮಾರು 55 ಪೈಸೆ ಹೆಚ್ಚಿಸುತ್ತದೆ, ಆದರೂ ಈ ಲಾಭವನ್ನು ಸಂಪೂರ್ಣವಾಗಿ ಕಂಪನಿಗಳು ಉಳಿಸಿಕೊಳ್ಳುತ್ತವೆ.

ಸರ್ಕಾರದ ನಿಲುವು ಮತ್ತು ತೆರಿಗೆಗಳು

ಭಾರತ ಸರ್ಕಾರವು ವಿವಿಧ ತೆರಿಗೆಗಳು ಮತ್ತು ಸುಂಕಗಳ ಮೂಲಕ ಪೆಟ್ರೋಲ್ ಮತ್ತು ಡೀಸೆಲ್‌ನಿಂದ ಗಮನಾರ್ಹ ಆದಾಯವನ್ನು ಗಳಿಸುತ್ತದೆ. 2024–25ನೇ ಹಣಕಾಸು ವರ್ಷದಲ್ಲಿ, ಇದು ವಿವಿಧ ತೆರಿಗೆಗಳು ಮತ್ತು ಸುಂಕಗಳ ಮೂಲಕ ಕೇಂದ್ರ ಖಜಾನೆಗೆ 4,15,181 ಕೋಟಿ ರೂ. ಕೊಡುಗೆ ನೀಡಿದೆ. ವ್ಯಾಟ್, ರಾಯಧನ ಮತ್ತು ಇತರ ಸುಂಕಗಳ ಮೂಲಕ ರಾಜ್ಯ ಖಜಾನೆಗೆ ಕೊಡುಗೆಗಳು 3,25,583 ಕೋಟಿ ರೂ.ಗಳು. 2023–24ರಲ್ಲಿ ಕೇಂದ್ರ ಮತ್ತು ರಾಜ್ಯ ಆದಾಯಕ್ಕೆ ರೂ. 7.5 ....ಪುಟ 14 ಕ್ಕೆ

ಸಾವರ್ಕರ್: ಕಟ್ಟುಕತೆ ಮತ್ತು ವಾಸ್ತವ

ಸಾವರ್ಕರ್ ಸ್ವಾತಂತ್ರ್ಯ ಚಳವಳಿಯ ವಿರುದ್ಧ ಮತ್ತು ಬ್ರಿಟಿಷ್ ಸರ್ಕಾರದ ಪರವಾಗಿ ಕೆಲಸಮಾಡಿದ್ದ ಮಹಾನ್ 'ವೀರ' ಎಂದು ಜಗತ್ತಿನಾದ್ಯಂತ ಕುಖ್ಯಾತರಾಗಿದ್ದರು. ಬ್ರಿಟಿಷ್ ಅಧಿಕಾರಿಯ ಕೊಲೆಗೆ ಕಾರಣನಾಗಿ ಅಂಡಮಾನ್ ದ್ವೀಪದ ಜೈಲಿನಲ್ಲಿದ್ದಾಗ ಬಿಡುಗಡೆಗಾಗಿ ದಯಾಭಿಕ್ಷೆ ಬೇಡಿದ್ದರು ಸಾವರ್ಕರ್. ಒಂದಲ್ಲ ಎರಡಲ್ಲ, ಐದು ಬಾರಿ ಬ್ರಿಟಿಷ್ ಸರ್ಕಾರಕ್ಕೆ ದಯಾಭಿಕ್ಷೆಗಾಗಿ ಗೋಗರೆದು ಪತ್ರವನ್ನು ಬರೆದಿದ್ದರು.

–ಸವೇರಾ

ಈ ವರ್ಷದ ಸ್ವಾತಂತ್ರ್ಯ ದಿನದಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟಿಸಿದ ಜಾಹೀರಾತಿಗೆ ದೇಶಾದ್ಯಂತ ಆಕ್ರೋಶ ಹಾಗೂ ತಿರಸ್ಕಾರ ವ್ಯಕ್ತವಾಗಿದ್ದವು. ಅದರ ಶೀರ್ಷಿಕೆ ಹೀಗಿತ್ತು: "ಸ್ವಾತಂತ್ರ್ಯ ದಿನದ ಶುಭಾಶಯಗಳು" ಅದರ ಕೆಳಗಡೆಯಲ್ಲಿ ವಿ.ಡಿ.ಸಾವರ್ಕರ್, ಮಹಾತ್ಮಾ ಗಾಂಧಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಮತ್ತು ಹುತಾತ್ಮ ಭಗತ್ ಸಿಂಗ್ ಅವರುಗಳ ಮುಖಗಳನ್ನು ಚಿತ್ರಿಸಲಾಗಿತ್ತು. ಮೇಲುಗಡೆ ಸಾರ್ವಕರ್ ಚಿತ್ರವನ್ನು ಹಾಕಿ ಕೆಳಗಡೆ ಮಹಾತ್ಮಾ ಗಾಂಧಿ ಹಾಗೂ ಮತ್ತಿಬ್ಬರ ಚಿತ್ರಗಳನ್ನು ಮುದ್ರಿಸಲಾಗಿದೆ. ಇನ್ನೂ ಕೆಳಗಡೆಯಲ್ಲಿ "ಸ್ವಾತಂತ್ರ್ಯ ಅವರ ಕೊಡುಗೆ / ಭವಿಷ್ಯ ರೂಪಿಸುವುದು ನಮ್ಮ ಗುರಿ" ಎಂಬ ಘೋಷಣೆಯನ್ನು ಮುದ್ರಿಸಲಾಗಿದೆ.

ಮೂವರು ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರ ಜತೆ ಒಬ್ಬ ಸ್ವಾತಂತ್ರ್ಯ ಹೋರಾಟದ ವಿರೋಧಿಯ ಚಿತ್ರವನ್ನೂ ಪ್ರಕಟಿಸಲಾಗಿತ್ತು. ಆದ್ದರಿಂದ ಸಹಜವಾಗಿಯೇ ಎಲ್ಲೆಡೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು.

ಸಾವರ್ಕರ್ ಸ್ವಾತಂತ್ರ್ಯ ಚಳವಳಿಯ ವಿರುದ್ಧ ಮತ್ತು ಬ್ರಿಟಿಷ್ ಸರ್ಕಾರದ ಪರವಾಗಿ ಕೆಲಸಮಾಡಿದ್ದ ಮಹಾನ್ 'ವೀರ' ಎಂದು ಜಗತ್ತಿನಾದ್ಯಂತ ಕುಖ್ಯಾತರಾಗಿದ್ದರು. ಬ್ರಿಟಿಷ್ ಅಧಿಕಾರಿಯ ಕೊಲೆಗೆ ಕಾರಣನಾಗಿ ಅಂಡಮಾನ್ ದ್ವೀಪದ ಜೈಲಿನಲ್ಲಿದ್ದಾಗ ಬಿಡುಗಡೆಗಾಗಿ ದಯಾಭಿಕ್ಷೆ ಬೇಡಿದ್ದರು ಸಾವರ್ಕರ್. ಒಂದಲ್ಲ ಎರಡಲ್ಲ, ಐದು ಬಾರಿ ಬ್ರಿಟಿಷ್ ಸರ್ಕಾರಕ್ಕೆ ದಯಾಭಿಕ್ಷೆಗಾಗಿ ಗೋಗರೆದು ಪತ್ರವನ್ನು ಬರೆದಿದ್ದರು.

ನಂತರದಲ್ಲಿ 1948ರಲ್ಲಿ ಮಹಾತ್ಮಾ ಗಾಂಧಿಯವರ ಹತ್ಯೆ ಪ್ರಕರಣದಲ್ಲಿ ಸಾವರ್ಕರ್ ಅವರ ವಿರುದ್ಧ ದೋಷಾರೋಪಣೆ ಮಾಡಲಾಗಿತ್ತು. ಆದರೆ ಸಾಕಷ್ಟು ಸಾಕ್ಷಿ ಇಲ್ಲ ಎಂದು ಬಿಡುಗಡೆ ಮಾಡಲಾಗಿತ್ತು. ತನಿಖಾ ಆಯೋಗವು ಮಹಾತ್ಮಾ ಗಾಂಧಿ ಹತ್ಯೆಗೆ ಸಾವರ್ಕರ್ ಹೊಣೆಗಾರ ಎಂದು ಹೇಳಿತ್ತು. ಮಹಾತ್ಮಾ ಗಾಂಧಿ ಹತ್ಯೆಯ ಪಿತೂರಿಗಾರ ಹಾಗೂ ಬ್ರಿಟಿಷರ ಸಹಯೋಗಿಯಾಗಿದ್ದವನ್ನು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತ್ಯಾಗ, ಬಲಿದಾನ ಮಾಡಿದ ಮಹಾನ್ ಹೋರಾಟಗಾರರೆಂದು ಪ್ರಖ್ಯಾತರಾಗಿರುವ ಮೂರು ಮುಖಂಡರಿಗೆ ಸಮಾನವಾಗಿ ಭಿತ್ತಿಚಿತ್ರದಲ್ಲಿ ಪ್ರಕಟ ಮಾಡಿರುವುದು ಸ್ವಾತಂತ್ರ್ಯ ಸಂಗ್ರಾಮ ಇತಿಹಾಸದ ಆಘಾತಕಾರಿ ವಿಡಂಬನೆಯಷ್ಟೆ.

ಸಾವರ್ಕರರನ್ನು ಹಾಡಿ, ಹೊಗಳಿ, ಸ್ವಾತಂತ್ರ್ಯ ಸಂಗ್ರಾಮದ ಮಹತ್ವದ ಹೋರಾಟಗಾರನೆಂದು ಬಿಂಬಿಸುವುದು ಸಂಘ ಪರಿವಾರದ ಬಹಳ ದಿನಗಳ ಕನಸಾಗಿದೆ. 2003ರಲ್ಲಿ ಅಟಲ್ ಬಿಹಾರಿ ವಾಜಪೇಯಿಯವರು ಎನ್‌ಡಿಎ ಸರ್ಕಾರದ ಪ್ರಧಾನ ಮಂತ್ರಿಯಾಗಿದ್ದಾಗ ಸಂಸತ್ ಭವನದಲ್ಲಿ ಅವರ ಭಾವಚಿತ್ರವನ್ನು ಅನಾವರಣ ಮಾಡಲಾಯಿತು. ಪೋರ್ಟ್‌ಬ್ಲೇರ್ ವಿಮಾನ ನಿಲ್ದಾಣವನ್ನು ವೀರ ಸಾವರ್ಕರ್ ನಿಲ್ದಾಣವೆಂದು ಮರುನಾಮಕರಣ ಮಾಡಲಾಯಿತು. ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ಸಂಪುಟ ಸದಸ್ಯರು ಮತ್ತು ಬಿಜೆಪಿ ಮುಖಂಡರುಗಳು ಅವಕಾಶ ಸಿಕ್ಕಾಗಲೆಲ್ಲಾ ಸಾವರ್ಕರ್ ಅವರನ್ನು ಹಾಡಿ ಹೊಗಳುತ್ತಿದ್ದಾರೆ.

ತೀರ ಇತ್ತೀಚೆಗಷ್ಟೆ, ಸಾವರ್ಕರ್ ಅವರ ಜನ್ಮದಿನಾಚರಣೆಯ ದಿನ, 'ತಾಯಿ ಭಾರತಿಯ ನೈಜ ಪುತ್ರ' ಎಂದು ಅವರನ್ನು ಪ್ರಧಾನಿ ಮೋದಿಯವರು ಹೊಗಳಿದರು. ಸಾವರ್ಕರ್ ಅವರ 'ಮುಸ್ಲಿಂ ವಿರೋಧಿ ವಿಷಪೂರಿತ ಹಾಗೂ ಉದ್ರೇಕಕಾರಿ ಸಿದ್ಧಾಂತ'ದ ಕಾರಣ ಬಿಜೆಪಿಯವರು ಸಾವರ್ಕರ್ ಅವರನ್ನು ಹೀಗೆ ಹಾಡಿ ಹೊಗಳುತ್ತಾರೆ. ಆರ್‌ಎಸ್‌ಎಸ್ ಸಿದ್ಧಾಂತದ ಮೂಲ ಕೂಡ ಅದೇ ಆಗಿದೆ.

ಸಾವರ್ಕರ್ ಪರವಾಗಿನ ಈ ಭಟ್ಟಂಗಿತನವನ್ನು ಮುಖ್ಯವಾಹಿನಿ ಮಾಧ್ಯಮ ಹಾಗೂ ಸಾಮಾಜಿಕ ಮಾಧ್ಯಮದ ಒಂದು ವಿಭಾಗ ಕೂಡ ನಿರಂತರವಾಗಿ ಮುಂದುವರಿಸುತ್ತಿವೆ. ಆದ್ದರಿಂದ ಸಾವರ್ಕರ್ ಕುರಿತ ಸುಳ್ಳುಗಳನ್ನು ಬಯಲು ಮಾಡಿ ಸತ್ಯವನ್ನು ಜಗತ್ತಿಗೆ ಸಾರಬೇಕಾಗಿದೆ.

ಸಾವರ್ಕರ್ ಜೀವನ

ಸಾವರ್ಕರ್ ಅವರ ಜೀವನದಲ್ಲಿ ಎರಡು ವಿಶಿಷ್ಟ ಘಟ್ಟಗಳಿವೆ. ಮೊದಲನೆಯದು ಅಂಡಮಾನ್ ದ್ವೀಪದಲ್ಲಿ ಬಂಧನವಾಗುವುದಕ್ಕಿಂತ ಮುಂಚಿನದು ಮತ್ತು ಎರಡನೆಯದು ಅಲ್ಲಿಂದ ಬಿಡುಗಡೆಯಾದ ನಂತರದ್ದು. ಮೊದಲ ಅವಧಿಯಲ್ಲಿ ಮುಖ್ಯವಾಹಿನಿ ರಾಷ್ಟ್ರೀಯ ಚಳವಳಿಯೊಂದಿಗೆ ತಾಳ್ಮೆ ಕಳೆದುಕೊಂಡ ಹತ್ಯೆಯಂತಹ ಕ್ಷಿಪ್ರ ನಿರ್ಣಾಯಕ ನಿರ್ಧಾರಗಳಿಗಾಗಿ ಹಾತೊರೆಯುತ್ತಿದ್ದ ಯುವಕರಾಗಿದ್ದರು.

1857ರಲ್ಲಿ 'ಮೊದಲ ಸ್ವಾತಂತ್ರ್ಯ ಸಂಗ್ರಾಮ'ದ ಇತಿಹಾಸ ಬರೆದರು. ಹಿಂದೂ ಸಮಾಜವನ್ನು ಪೀಡಿಸುತ್ತಿದ್ದ ಜಾತಿ ಪದ್ಧತಿಯ ವಿರುದ್ಧ ಅದರಲ್ಲಿ ನಿಂದಿಸಿದ್ದರು. ಮಿತ್ರ ಮೇಳ ಎಂಬ ಗುಪ್ತ ಸಂಘವನ್ನು ಸೇರಿದರು. ನಂತರ ತಮ್ಮದೇ ಆದ ಒಂದು ಗುಪ್ತ ಸಂಘಟನೆಯನ್ನು –ಅಭಿನವ ಭಾರತ (ನವ ಭಾರತ)– ರಚಿಸಿದರು. ಬ್ರಿಟಿಷ್ ದೊರೆಗಳನ್ನು ಕಿತ್ತೊಗೆಯಲು ಹಿಂಸಾತ್ಮಕ ವಿಧಾನಗಳಲ್ಲಿ 'ಅಭಿನವ ಭಾರತ' ನಂಬಿಕೆ ಇಟ್ಟುಕೊಂಡಿತ್ತು.

ಆರಂಭದ ವರ್ಷಗಳು

ಪುಣೆಯ ಫರ್ಗ್ಯುಸನ್ ಕಾಲೇಜಿನಿಂದ ಪದವಿ ಪಡೆದ ಸಾವರ್ಕರ್, ನಂತರ ಕಾನೂನು ಅಧ್ಯಯನಕ್ಕಾಗಿ ಲಂಡನ್ನಿಗೆ ತೆರಳಿದರು. ಅಲ್ಲಿ ಅವರು ಇಟಲಿಯ ಉಗ್ರ ರಾಷ್ಟ್ರೀಯವಾದಿಗಳಾಗಿದ್ದ ಮಜ್ಜಿನಿ ಹಾಗೂ ಗಾರಿಬಾಲ್ಡಿ ಅಂಥವರಿಂದ ಪ್ರಭಾವಿತರಾದರು. ಲಂಡನ್ನಿನಲ್ಲಿ, 1909ರಲ್ಲಿ ಯುವ ಭಾರತೀಯ ವಿದ್ಯಾರ್ಥಿಯಾಗಿದ್ದ ಮದನ್ ಲಾಲ್ ಢಿಂಗ್ರಾನನ್ನು ಪ್ರೋತ್ಸಾಹಿಸಿ, ಭಾರತದ ಕಾರ್ಯದರ್ಶಿಯ ಸಹಾಯಕನಾಗಿದ್ದ ವಿಲಿಯಂ ಹಟ್ ಕರ್ಜನ್ ವಿಲೆಯವರನ್ನು ಹತ್ಯೆಮಾಡಲು ಹೇಳಿದರು. ಈ ಕೃತ್ಯಕ್ಕಾಗಿ ಢಿಂಗ್ರಾನನ್ನು ಗಲ್ಲಿಗೇರಿಸಲಾಯಿತು. ಸಾವರ್ಕರ್ ಅವರ ಮೇಲೆ ಅನುಮಾನವಿದ್ದರೂ ಸ್ಪಷ್ಟ ಸಾಕ್ಷಿ ಸಿಗಲಿಲ್ಲ.

ಈ ಮಧ್ಯೆ ಸಾವರ್ಕರ್ ಅವರ ಸೋದರ ಮತ್ತು ಅಭಿನವ್ ಭಾರತದ ಸದಸ್ಯ ಗಣೇಶ್ ಅವರನ್ನು ಬಾಂಬುಗಳ ದಾಸ್ತಾನು ಮಾಡಿಕೊಂಡಿದ್ದಕ್ಕಾಗಿ ಭಾರತದಲ್ಲಿ ಬಂಧಿಸಿದರು. ಅವರಿಗೆ ಜೀವಾವಧಿ ಗಡೀಪಾರು ಶಿಕ್ಷೆ ವಿಧಿಸಲಾಯಿತು. ಆದಕ್ಕೆ ಪ್ರತೀಕಾರವಾಗಿ ಅಭಿನವ ಭಾರತದ ಮತ್ತೊಬ್ಬ ಸದಸ್ಯ ಅನಂತ್ ಕನ್ಹರೆ ನಾಸಿಕ್‌ನ ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ಗುಂಡು ಹೊಡೆದು ಕೊಂದ. ಕನ್ಹರೆ ಮತ್ತಿತರನ್ನು ಬಂಧಿಸಿದರು. ಅವರ ಗಂಟುಮೂಟೆಯಲ್ಲಿ ಸಾವರ್ಕರ್ ಅವರು ಬರೆದಿದ್ದ ಹಲವು ಪತ್ರಗಳು ಸಿಕ್ಕವು. ಅಷ್ಟೇ ಅಲ್ಲ, ಲಂಡನ್ನಿನಿಂದ ಸಾವರ್ಕರ್ ಅವರು ಕಳಿಸಿದ್ದ ರಿವಾಲ್ವರ್ ಕೂಡ ಸಿಕ್ಕಿತು. ಪೋಲಿಸರು ಬಂಧನದ ವಾರಂಟನ್ನು ಟೆಲಿಗ್ರಾಂ ಮೂಲಕ ಲಂಡನ್ನಿಗೆ ಕಳಿಸಿದರು ಮತ್ತು ಅಲ್ಲಿ ಸಾವರ್ಕರ್ ಅವರು ಮಾರ್ಚ್ 13, 1910ರಂದು ಶರಣಾದರು. ಭಾರತಕ್ಕೆ ಕರೆ ತರುತ್ತಿರುವಾಗ ಮಾರ್ಸೆಲ್ಸ್ ಬಂದರಿನಲ್ಲಿ ಹಡಗು ನಿಂತಿರುವಾಗ ಸಾವರ್ಕರ್ ತಪ್ಪಿಸಿಕೊಂಡರು. ಅವರನ್ನು ಬಂಧಿಸಿದರು ಮತ್ತು ಆ ಪ್ರಕರಣವು ಫ್ರಾನ್ಸ್ ಹಾಗೂ ಇಂಗ್ಲೆಂಡಿನಲ್ಲಿ ಹೆಚ್ಚು ಪ್ರಚಾರ ಪಡೆದು ಗೊಂದಲಕ್ಕೆ ಕಾರಣವಾಯಿತು. ಸಾವರ್ಕರ್ ಅವರ ಮನವಿಯನ್ನು ಅಂತಿಮವಾಗಿ ವಜಾಮಾಡಲಾಯಿತು ಮತ್ತು ಭಾರತಕ್ಕೆ ಕರೆತರಲಾಯಿತು. 1911ರಲ್ಲಿ 50 ವರ್ಷಗಳ ಜೈಲು ಶಿಕ್ಷೆ ನೀಡಿ, ಕುಖ್ಯಾತ ಅಂಡಮಾನ್ ದ್ವೀಪದ ಜೈಲಿಗೆ ಸಾವರ್ಕರ್ ಅವರನ್ನು ಕಳಿಸಲಾಯಿತು. ಸಾವರ್ಕರ್ ಅವರ ಜೀವನದ ಈ ಭಾಗವನ್ನೇ ಅವರ ಸ್ವಾತಂತ್ರ್ಯ ಚಳವಳಿಯ ಕೊಡುಗೆ ಎಂದು ಈಗ ಶಾಲಾ ಮಕ್ಕಳಿಗೆ ಕಲಿಸಲಾಗುತ್ತಿದೆ!

ಕ್ರಾಂತಿಕಾರಿಯಾಗಿದ್ದವರು ಬ್ರಿಟಿಷರ ಬೆಂಬಲಿಗರಾಗಿ ಪರಿವರ್ತನೆ

ಬಹುಮಟ್ಟಿಗೆ ಆವಾಗಲೇ, ಸಾವರ್ಕರ್ ಬ್ರಿಟಿಷ್ ದೊರೆಗಳಿಗೆ ದಯಾಭಿಕ್ಷೆಗಾಗಿ ಅರ್ಜಿ ಸಲ್ಲಿಸಲು ಪ್ರಾರಂಭಿಸಿದರು. ಅವರ ಮೊದಲ ಅರ್ಜಿ 1911ರಲ್ಲಿ ಬರೆದಿದ್ದು ಹೆಚ್ಚೂ ಕಡಿಮೆ ಕಳೆದುಹೋಗಿದೆ, ಆದರೆ ಅದು ಅವರ ಎರಡನೆಯ ಅರ್ಜಿಯಲ್ಲಿ ಪ್ರಸ್ತಾಪಿತವಾಗಿದೆ. ಎರಡನೆಯ ಅರ್ಜಿಯನ್ನು ನವಂಬರ್ 14, 1913ರಲ್ಲಿ ಭಾರತ ಸರ್ಕಾರದ ಗೃಹ ಇಲಾಖೆಯ ಸದಸ್ಯರನ್ನು ಉದ್ದೇಶಿಸಿ ಬರೆಯಲಾಗಿತ್ತು. ತಾನು ಜೈಲಿನಲ್ಲಿ ಅನುಭವಿಸುತ್ತಿರುವ ಸಮಸ್ಯೆಗಳನ್ನು ಹೇಳಿದ ನಂತರ, ಕೊನೆಯಲ್ಲಿ ಹೀಗೆ ಬರೆದಿದ್ದರು:

"ಆದಕಾರಣ ಸರ್ಕಾರವು ತಮ್ಮ ಬಹುವಿಧದ ಉಪಕಾರ ಹಾಗೂ ಕರುಣೆಯಿಂದ ನನ್ನನ್ನು ಬಿಡುಗಡೆ ಮಾಡಿದರೆ, ನಾನು ಸಾಂವಿಧಾನಿಕ ಪ್ರಗತಿಯ ಅತ್ಯಂತ ನಿಷ್ಠಾವಂತ ಪ್ರತಿಪಾದಕನಾಗಿರದೇ ಇರಲು ಮತ್ತು ಪ್ರಗತಿಯ ಪ್ರಮುಖ ಸ್ಥಿತಿಯಲ್ಲಿರುವ ಇಂಗ್ಲಿಷ್ ಸರ್ಕಾರಕ್ಕೆ ವಿಧೇಯನಾಗಿರದೇ ಇರಲು ಸಾಧ್ಯವಿಲ್ಲ. ಎಲ್ಲಿಯ ತನಕ ನಾವು ಜೈಲಿನಲ್ಲಿ ಇರುತ್ತೇವೋ, ಅಲ್ಲಿಯ ತನಕ ಭಾರತದ ಮಹಾಮಹಿಮರಾದ ತಮ್ಮ ವಿಧೇಯರಾಗಿರುವ ನೂರಾರು ಸಾವಿರಾರು ಮನೆಗಳಲ್ಲಿರುವ ಪ್ರಜೆಗಳಿಗೆ ನಿಜವಾದ ಸುಖ ಮತ್ತು ಸಂತೋಷಗಳು ಇರಲು ಸಾಧ್ಯವಿಲ್ಲ. ಏಕೆಂದರೆ ರಕ್ತವು ನೀರಿಗಿಂತ ಮಂದವಾಗಿರುತ್ತದೆ; ಆದರೆ ಶಿಕ್ಷಿಸಿ ಪ್ರತೀಕಾರ ತೆಗೆದುಕೊಳ್ಳುವ ಬದಲು ಕ್ಷಮಿಸಿ ತಿದ್ದುವುದು ಹೇಗೆಂದು ತಿಳಿದಿರುವ ತಾವು ನಮ್ಮನ್ನು ಬಿಡುಗಡೆ ಮಾಡಿದ್ರೇ ಆದರೆ ಜನರು ಸಹಜವಾಗಿಯೇ ಸರ್ಕಾರದ ಪರವಾಗಿ ಕೃತಜ್ಞತಾಭಾವದಿಂದ ಸಂತೋಷವಾಗಿ ಕುಣಿದು ಕುಪ್ಪಳಿಸುತ್ತಾರೆ.

ಅದೂ ಅಲ್ಲದೇ, ಸಾಂವಿಧಾನಿಕ ಕಾರ್ಯನೀತಿಗೆ ನನ್ನ ಪರಿವರ್ತನೆಯು ಮಾರ್ಗದರ್ಶನಕ್ಕಾಗಿ ನನ್ನತ್ತ ನೋಡುತ್ತಿದ್ದ ಭಾರತದ ಹಾಗೂ ವಿದೇಶದಲ್ಲಿರುವ ತಪ್ಪುದಾರಿಗೆ ಹೋಗಿರುವ ಯುವಜನರನ್ನು ಹಿಂದಕ್ಕೆ ತರುತ್ತದೆ. ಸರ್ಕಾರವು ಬಯಸುವ ಯಾವುದೇ ಸ್ಥಾನದಲ್ಲಿ ಸೇವೆ ಸಲ್ಲಿಸಲು ನಾನು ಸಿದ್ಧನಿದ್ದೇನೆ ಏಕೆಂದರೆ ನನ್ನ ಪರಿವರ್ತನೆಯು ಪ್ರಜ್ಞಾಪೂರ್ವಕವಾಗಿದೆ ಮತ್ತು ನನ್ನ ಭವಿಷ್ಯದ ನಡವಳಿಕೆ ಕೂಡ ಹಾಗೆಯೇ ಇರುತ್ತದೆ ಎಂಬ ಭರವಸೆ ಇದೆ. ಬಿಡುಗಡೆ ಮಾಡುವುದಕ್ಕೆ ಹೋಲಿಸಿದರೆ ಏನು ದೊರೆಯುವುದೋ ಅದು ನನ್ನನ್ನು ಜೈಲಿನಲ್ಲಿ ಇರಿಸುವುದರಿಂದ ದೊರೆಯುವುದಿಲ್ಲ. ಶ್ರೇಷ್ಠರು ಮಾತ್ರವೇ ಕರುಣಾಮಯಿ ಆಗಿರಲು ಸಾಧ್ಯ ಮತ್ತು ಆದ್ದರಿಂದಲೇ ದುರ್ಮಾರ್ಗದಿಂದ ಸನ್ಮಾರ್ಗಕ್ಕೆ ಹಿಂದಿರುಗುವ ಮಗನು ಅಪ್ಪ ಅಮ್ಮನಂತಿರುವ ತಮ್ಮ ಸರ್ಕಾರದ ಬಾಗಿಲಿಗೆ ಬರದೆ ಬೇರೆಲ್ಲಿಗೆ ಹೋಗಲು ಸಾಧ್ಯ?"

ಅರ್ಜಿಯಿಂದ ಉದ್ಧರಿಸಿದ ಈ ಮೇಲಿನ ಭಾಗವನ್ನು ರಾಷ್ಟ್ರೀಯವಾದಿ ಇತಿಹಾಸಕಾರ ಆರ್.ಸಿ. ಮಜುಂದಾರ ಅವರ 'ಅಂಡಮಾನಿನಲ್ಲಿನ ದಂಡನಾರ್ಹ ಒಪ್ಪಂದಗಳು' ಪುಸ್ತಕದಿಂದ ಉಲ್ಲೇಖಿಸಲಾಗಿದೆ. ಆ ಪುಸ್ತಕವು 1975ರಲ್ಲಿ ಅಂದಿನ ಭಾರತ ಸರ್ಕಾರದ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಚಿವಾಲಯ ಹಾಗೂ ಸಂಸ್ಕೃತಿ ಇಲಾಖೆಯ ಗೆಜೆಟುಗಳ ಘಟಕದಲ್ಲಿ ದೊರೆತಿದೆ. ಆ ಪುಸ್ತಕದ ಈ ಮೇಲಿನ ಪ್ರಸ್ತುತ ಪುಟಗಳನ್ನು (ಪಿ.ಪಿ.211–214) 2020 ರ ಮಾರ್ಚ್ 23ರಂದು ಲೋಕಸಭೆಯಲ್ಲಿ ಸಂಸ್ಕೃತಿ ಮತ್ತು ಪ್ರವಾಸೋದ್ಯಮ (ಸ್ವತಂತ್ರ ಹೊಣೆ) ಸಚಿವರಾದ ಪ್ರಹ್ಲಾದ್ ಸಿಂಗ್ ಪಟೇಲ್ ಅವರು ಪ್ರಶ್ನೆಗೆ ಉತ್ತರವಾಗಿ ವಿತರಿಸಿದ ಅನುಬಂಧದಲ್ಲಿ ಉಲ್ಲೇಖಿಸಲಾಗಿದೆ.

ಸಾವರ್ಕರ್ ಅವರು ತಮ್ಮನ್ನು ತಾವು ವರ್ಣಿಸಿಕೊಂಡ ರೀತಿಯನ್ನು ಗಮನಿಸಿ: "ಸಾಂವಿಧಾನಿಕ ಪ್ರಗತಿಯ ನಿಷ್ಠಾವಂತ ಪ್ರತಿಪಾದಕ" ಮತ್ತು "ಇಂಗ್ಲಿಷ್ ಸರ್ಕಾರದ ನಿಷ್ಠಾವಂತ". ಜೈಲಿನಿಂದ ತನ್ನ ಬಿಡುಗಡೆಯಾದರೆ ತನ್ನ ಎಲ್ಲಾ ಅನುಯಾಯಿಗಳು "ಕೃತಜ್ಞತಾಭಾವದಿಂದ ಸಂತೋಷವಾಗಿ ದನಿ ಎತ್ತುತ್ತಾರೆ" ಮತ್ತು "ಮಾರ್ಗದರ್ಶನಕ್ಕಾಗಿ ನನ್ನತ್ತ ನೋಡುತ್ತಿದ್ದ ಭಾರತದ ಹಾಗೂ ವಿದೇಶದಲ್ಲಿರುವ ತಪ್ಪುದಾರಿಗೆ ಹೋಗಿರುವ ಯುವಜನರನ್ನು ಹಿಂದಕ್ಕೆ ತರುತ್ತದೆ." ಎಂದು ಭರವಸೆ ನೀಡುವ ಪರಿಯನ್ನೂ ಗಮನಿಸಿ. "ಸರ್ಕಾರವು ಬಯಸುವ ಯಾವುದೇ ಸ್ಥಾನದಲ್ಲಿ ಸೇವೆ ಸಲ್ಲಿಸಲು ನಾನು ಸಿದ್ಧನಿದ್ದೇನೆ" ಎಂದು ಆ ನಿರ್ದಯ ಬ್ರಿಟಿಷ್ ದೊರೆಗಳಿಗೆ ಮತ್ತೊಮ್ಮೆ ಭರವಸೆ ನೀಡುವುದನ್ನು ನೋಡಿ. "ದುರ್ಮಾರ್ಗದಿಂದ ಸನ್ಮಾರ್ಗಕ್ಕೆ ಹಿಂದಿರುಗುವ ಮಗನು ಅಪ್ಪ ಅಮ್ಮನಂತಿರುವ ತಮ್ಮ ಸರ್ಕಾರದ ಬಾಗಿಲಿಗೆ ಬರದೆ ಬೇರೆಲ್ಲಿಗೆ ಹೋಗಲು ಸಾಧ್ಯ?" ಎಂದು ಬ್ರಿಟಿಷರ ದಯಾಪರತೆಗೆ ಸಂಪೂರ್ಣ ಶರಣಾಗಿ ತನ್ನ ಆತ್ಮವನ್ನೇ ಅರ್ಪಿಸುವುದನ್ನು ಗಮನಿಸಿ.

1920 ರಲ್ಲಿ ಭಾರತಕ್ಕೆ ವರ್ಗಾವಣೆ ಆಗುವ ತನಕವೂ ನಿರಂತರವಾಗಿ ಇಂತಹ ಅರ್ಜಿ ಪತ್ರಗಳನ್ನು ಬ್ರಿಟಿಷ್ ದೊರೆಗಳಿಗೆ ಸಾವರ್ಕರ್ ಬರೆಯುತ್ತಲೇ ಹೋದರು. ಪುಣೆಯ ಯೆರವಾಡಾ ಜೈಲಿನಲ್ಲಿ ಸೆರೆವಾಸಕ್ಕೊಳಗಾದರು. ಅಂತಿಮವಾಗಿ 1923ರಲ್ಲಿ, ಮಹಾರಾಷ್ಟ್ರದ ಕರಾವಳಿ ರತ್ನಗಿರಿ ಜಿಲ್ಲೆಯ ಒಳಗೆ ಮಾತ್ರವೇ ಇರಬೇಕು ಹಾಗೂ ಯಾವುದೇ ರಾಜಕೀಯ ಚಟುವಟಿಕೆಗಳನ್ನು ಮಾಡಬಾರದು ಎಂಬ ಒಂದು ಷರತ್ತಿಗೆ ಒಳಗಾಗಿ ಬಿಡುಗಡೆಯಾಗುತ್ತಾರೆ.

ಅವರು ಅಂಡಮಾನ ಜೈಲಿನಲ್ಲಿದ್ದ ದೀರ್ಘಕಾಲದಲ್ಲಿ ಕಠಿಣ ಶ್ರಮಪಡಬೇಕಾಯಿತು, ಹಿಂಸೆಗೊಳಗಾದರು ಮತ್ತು ಆ ಕುಖ್ಯಾತ ಜೈಲಿನಲ್ಲಿ ಇತರ ಕೈದಿಗಳು ಅನುಭವಿಸುತ್ತಿದ್ದ ಎಲ್ಲಾ ಶಿಕ್ಷೆಗಳನ್ನೂ ಅನುಭವಿಸಿದರು. ಆ ಜೈಲಿನಲ್ಲಿದ್ದ ಬಹಳಷ್ಟು ಕೈದಿಗಳು ಜೀವಾವಧಿಯನ್ನು ಕಳೆದಿದ್ದಾರೆ ಮತ್ತು ಇನ್ನು ಕೆಲವರು ತೀರಿಕೊಂಡಿದ್ದಾರೆ. ಸಹಜವಾಗಿಯೇ ಸಾವರ್ಕರ್ ಆ ಜೈಲಿನಿಂದ ಹೊರಬರಲು ಬಯಸಿದ್ದರು, ಆದರೆ ಹೊರಬರಲಿಕ್ಕಾಗಿಯೇ ಅವರು ತಮ್ಮ ನೈತಿಕತೆಯನ್ನು,

ಪುಟ 15 ನೋಡಿ

ಎಥನಾಲ್ ಮಿಶ್ರಿತ ಪೆಟ್ರೋಲ್ ಕುರಿತು ಕೋಲಾಹಲ

–ರಘುನಂದನ್
(ಸಾರಸಂಗ್ರಹ: ವಸಂತರಾಜ ಎನ್.ಕೆ)

ಇ20 (20% ಎಥನಾಲ್ ಮಿಶ್ರಿತ ಪೆಟ್ರೋಲ್)ನ ಪೂರೈಕೆ ಆರಂಭವಾಗಿದ್ದು ಅದರ ಬಳಕೆ ಕಡ್ಡಾಯವಾಗಿದೆ. ಇದು ಭಾರೀ ಕೋಲಾಹಲ ಉಂಟುಮಾಡಿದೆ. ಮಾಧ್ಯಮಗಳಲ್ಲಿ ವಾಹನ ಮಾಲೀಕರು, ಚಾಲಕರು, ವಾಹನ ತಯಾರಕರು, ವಿವಿಧ ಉದ್ಯಮಗಳು, ರೈತರು, ತಜ್ಞರು ಮತ್ತು ಕೆಲವು ಹಿತಾಸಕ್ತಿ ಗುಂಪುಗಳ ನಡುವೆ ಭಾರೀ ಚರ್ಚೆಗಳು ನಡೆಯುತ್ತಿವೆ. ವಾಹನ ಮಾಲೀಕರು ಮೈಲೇಜ್ ಕಡಿಮೆಯಾಗುವುದು, ಚಾಲನೆ ಗುಣಮಟ್ಟ ಕುಸಿಯುವುದು, ಎಂಜಿನ್ ಕಾರ್ಯಕ್ಷಮತೆ ಇಳಿಯುವುದು, ನಿರ್ವಹಣಾ ವೆಚ್ಚಗಳು ಹೆಚ್ಚಾಗುವುದು ಮುಂತಾದ ಸಮಸ್ಯೆಗಳ ಬಗ್ಗೆ ದೂರುತ್ತಿದ್ದಾರೆ. ಸರಕಾರ ಅದನ್ನು ಅಲ್ಲಗಳೆಯುತ್ತಿದೆ. ಕೆಲವು ಉದ್ಯಮ/ ಕಂಪನಿಗಳಿಗೆ ದೊಡ್ಡ ಲಾಭ, ಇತರ ಉದ್ಯಮ/ಕಂಪನಿಗಳಿಗೆ ನಷ್ಟದ ಕುರಿತು ಸಹ ಆತಂಕ ವ್ಯಕ್ತಪಡಿಸಲಾಗುತ್ತಿದೆ. ಕೃಷಿ, ಪರಿಸರ ಮತ್ತು ಆಹಾರ ಭದ್ರತೆಯ ಮೇಲೆ ಇದರ ಪರಿಣಾಮಗಳ ಬಗೆಗೂ ಗಂಭೀರ ಅನುಮಾನಗಳು ಎದ್ದಿವೆ. ಇವೆಲ್ಲದರ ಬಗ್ಗೆ ಬೆಳಕು ಚೆಲ್ಲುವ ಲೇಖನ.

ರಾಜಧಾನಿ ದೆಹಲಿ ಸೇರಿದಂತೆ ಕೆಲವು ನಗರಗಳಲ್ಲಿ ಕಡ್ಡಾಯವಾಗಿ 20 ಶೇಕಡಾ ಎಥನಾಲ್ ಮಿಶ್ರಿತ ಪೆಟ್ರೋಲ್ (EBP20 ಅಥವಾ ಇ20) ಸರಬರಾಜು ಪ್ರಾರಂಭಿಸಿರುವ ಬಗ್ಗೆ ಕಾರ್ಪೊರೆಟ್ ಮಾಧ್ಯಮ, ಆನ್‌ಲೈನ್ ಮಾಧ್ಯಮ ಹಾಗೂ ವಿಶೇಷವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ವಾಹನ ಮಾಲೀಕರು, ಚಾಲಕರು, ತಜ್ಞರು ಮತ್ತು ಕೆಲವು ಹಿತಾಸಕ್ತಿ ಗುಂಪುಗಳ ನಡುವೆ ಭಾರೀ ಚರ್ಚೆಗಳು ನಡೆಯುತ್ತಿವೆ. 2022ರಲ್ಲಿ ತಿದ್ದುಪಡಿ ಮಾಡಿದ ರಾಷ್ಟ್ರೀಯ ಜೈವಿಕ ಇಂಧನ ನೀತಿ ಪ್ರಸ್ತುತ ಜಾರಿಗೆ ಬಂದಿದ್ದು, 2009ರಲ್ಲಿ ಮೊದಲು ಪ್ರಸ್ತಾಪವಾದ ನಂತರ ಹಲವು ಬದಲಾವಣೆಗಳನ್ನು ಕಂಡಿದೆ. ಮೊದಲಿಗೆ 10% ಎಥನಾಲ್ ಮಿಶ್ರಣ (ಇ10) ಗುರಿಯಾಗಿದ್ದ ಈ ನೀತಿ ನಂತರ 2030ರೊಳಗೆ 20% (ಇ20) ಗುರಿ ಇಟ್ಟುಕೊಂಡಿತ್ತು. ಆದರೆ ತೈಲ ಮಾರಾಟ ಕಂಪನಿಗಳು (OMCs) ಸರಬರಾಜು ಸರಪಳಿಗಳನ್ನು ನಿರೀಕ್ಷೆಗಿಂತ ಬೇಗ ಸ್ಥಿರಗೊಳಿಸಿರುವುದರಿಂದ, ಇ20 ಅನ್ನು 2025ರಲ್ಲಿ (ನಿರೀಕ್ಷೆಗಿಂತ ಐದು ವರ್ಷ ಮೊದಲೇ) ಜಾರಿಗೆ ತಂದಿದ್ದಾರೆ.

ಪ್ರಸ್ತುತ ಬಳಕೆಯಾಗುತ್ತಿರುವ ಮೊದಲ ತಲೆಮಾರಿನ ಎಥನಾಲ್ ಸಸ್ಯಮೂಲ ಸಂಪನ್ಮೂಲಗಳಿಂದ ಹುದುಗುವಿಕೆ (ಫರ್ಮೆಂಟೇಶನ್) ಮತ್ತು ಭಟ್ಟಿ ಇಳಿಸುವಿಕೆ (ಡಿಸ್ಟಿಲ್ಲಿಂಗ್)ಗಳ ಮೂಲಕ ತಯಾರಿಸಲಾಗುತ್ತಿದೆ. ಇದರಲ್ಲಿ ಮುಖ್ಯವಾಗಿ ಅಕ್ಕಿ, ಜೋಳ ಹಾಗೂ ಕಬ್ಬು ಬಳಕೆಯಾಗುತ್ತಿದೆ. ಎರಡನೇ ತಲೆಮಾರಿನ ಎಥನಾಲ್, ಅಂದರೆ ಕೃಷಿ ಉಳಿಕೆಗಳಿಂದ ತಯಾರಾಗುವ ಪರಿಸರ ಸ್ನೇಹಿ ಎಥನಾಲ್ ಇನ್ನೂ ಭಾರತದಲ್ಲಿ ಅಭಿವೃದ್ಧಿ ಹಂತದಲ್ಲಿದೆ.

ಜೈವಿಕ ಇಂಧನವನ್ನು ದೀರ್ಘಕಾಲದಿಂದ ಪಳೆಯುಳಿಕೆ ಇಂಧನ (ಕಲ್ಲಿದ್ದಲು, ಪೆಟ್ರೋಲ್, ಗ್ಯಾಸ್) ಪರ್ಯಾಯವಾಗಿ ಪರಿಗಣಿಸಲಾಗುತ್ತಿದೆ. ಭಾರತ ಸರ್ಕಾರವು ಇದನ್ನು ಪ್ರಬಲವಾಗಿ ಪ್ರೋತ್ಸಾಹಿಸುತ್ತಿದೆ. ಜೈವಿಕ ಇಂಧನದ ವ್ಯಾಪಕ ಬಳಕೆಯು ಕರಡು ತೈಲದ ಆಮದು ವೆಚ್ಚವನ್ನು ಕಡಿಮೆ ಮಾಡುವುದು, ಹಸಿರುಮನೆ ಅನಿಲಗಳ ಸೂಸುವಿಕೆಯನ್ನು ತಗ್ಗಿಸುವುದು, ರೈತರಿಗೆ ಹೆಚ್ಚುವರಿ ಆದಾಯ ನೀಡುವುದು ಹಾಗೂ ಉದ್ಯೋಗ ಸೃಷ್ಟಿಸುವುದು ಎಂದು ದಾವೆ ಮಾಡುತ್ತಿದೆ. ಅತಿ ಮುಖ್ಯವಾಗಿ, ಇದು ಅಸ್ತಿತ್ವದಲ್ಲಿರುವ ಪೆಟ್ರೋಲ್ ವಿತರಣಾ ಮೂಲಸೌಕರ್ಯ ಬದಲಾಯಿಸದೆ ಜಾರಿಗೊಳಿಸಬಹುದಾದ ಎಂದು ಹೇಳಲಾಗಿದೆ. ಆದರೆ, ಈ ಎಲ್ಲಾ ಹೇಳಿಕೆಗಳಲ್ಲಿ ಸ್ವಲ್ಪ ಸತ್ಯವಿದ್ದರೂ, ಹಲವು ಆಯಾಮಗಳಲ್ಲಿ ಅವು ಪ್ರಶ್ನಾರ್ಹವೂ ಆಗಿವೆ.

ವಾಹನ ಮಾಲೀಕರು, ಬಳಕೆದಾರರು ದೊಡ್ಡ ಧನಿಯಲ್ಲಿ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಕೆಲವು (ತೈಲ, ಎಥನಾಲ್ ಉತ್ಪಾದನಾ) ದೊಡ್ಡ ಉದ್ಯಮ/ ಕಂಪನಿಗಳಿಗೆ ಲಾಭ, ಇತರ (ಸಕ್ಕರೆ ಉತ್ಪಾದಿ) ಉದ್ಯಮ/ಕಂಪನಿಗಳಿಗೆ ನಷ್ಟದ ಕುರಿತು ಸಹ ಆತಂಕ ವ್ಯಕ್ತಪಡಿಸಲಾಗುತ್ತಿದೆ. ಕೃಷಿ, ಪರಿಸರ ಮತ್ತು ಆಹಾರ ಭದ್ರತೆಯ ಮೇಲೆ ಇದರ ಪರಿಣಾಮಗಳ ಬಗೆಗೂ ಗಂಭೀರ ಅನುಮಾನಗಳು ಎದ್ದಿವೆ.

ಇಂಧನ ದಕ್ಷತೆ ಮತ್ತು ಮೈಲೇಜ್ ಕುಸಿತ

ವಾಹನ ಮಾಲೀಕರು ಮೈಲೇಜ್ ಕಡಿಮೆಯಾಗುವುದು, ಚಾಲನೆ ಗುಣಮಟ್ಟ ಕುಸಿಯುವುದು, ಎಂಜಿನ್ ಕಾರ್ಯಕ್ಷಮತೆ ಇಳಿಯುವುದು, ನಿರ್ವಹಣಾ ವೆಚ್ಚಗಳು ಹೆಚ್ಚಾಗುವುದು ಮುಂತಾದ ಸಮಸ್ಯೆಗಳ ಬಗ್ಗೆ ದೂರುತ್ತಿದ್ದಾರೆ. ಸರ್ಕಾರವು ಇದನ್ನು ತಳ್ಳಿ ಹಾಕಿ, ವಾಹನದ ವಯಸ್ಸು, ಇ20 ಟ್ಯೂನಿಂಗ್ ಮಾಡಲಾಗಿದೆಯೆ, ಇ20 ಅನುಗುಣವಾಗಿ ಇದೆಯೆ– ಇವನ್ನು ಅವಲಂಬಿಸಿ ಗರಿಷ್ಠ 1–6% ಮಟ್ಟದಲ್ಲಿ ಮಾತ್ರ ದಕ್ಷತೆ ಕುಸಿತವಾಗಬಹುದು ಎಂದು ಹೇಳಿದೆ. ಸರಕಾರ, ಪರಿಣತರು, ಕಂಪನಿಗಳು ಎಲ್ಲ ಹೇಳುತ್ತಿರುವುದು ಪ್ರಯೋಗಾಲಯಗಳಲ್ಲಿ 'ಆದರ್ಶ ಪರಿಸ್ಥಿತಿಗಳಲ್ಲಿ ಮಾಡಿದ 'ಲ್ಯಾಬ್ ಟೆಸ್ಟ್ ಕಂಡೀಶನ್ಸ್' ಫಲಿತಗಳ ಬಗ್ಗೆ. ಆದರೆ, ಮಾಧ್ಯಮ ಸಂದರ್ಶನಗಳಲ್ಲಿ ಹಲವಾರು ವಾಹನ ಬಳಕೆದಾರರು 20% ತನಕ ಮೈಲೇಜ್ ಕುಸಿತವನ್ನು ವರದಿಮಾಡಿದ್ದಾರೆ. ಇವು ವಾಸ್ತವ ಬಳಕೆಯಲ್ಲಿ ಕಂಡು ಬರುತ್ತಿರುವುದು.



ಅಗತ್ಯ ಇ20 ಪೆಟ್ರೋಲ್ ಬಳಕೆ ಹೆಚ್ಚುವುದರಿಂದ ಅದರ ಬೆಲೆ ಕಡಿಮೆ ಮಾಡಬೇಕೆಂದು ಕೆಲವು ಪರಿಣತರು ಸೂಚಿಸಿದ್ದಾರೆ. ಏಕೆಂದರೆ ಪೆಟ್ರೋಲ್ ಬೆಲೆ ಲೀಟರಿಗೆ 91 ರೂ ಇದ್ದರೆ ಎಥನಾಲ್ ಬೆಲೆ 61 ರೂ ಇದೆ. ಹಾಗಾಗಿ ಇ20 ಪೆಟ್ರೋಲ್ ಮಾರಾಟ ಬೆಲೆ ಕಡಿಮೆಯಾಗಬೇಕು. ಈ ಉಳಿತಾಯವನ್ನು ಪೆಟ್ರೋಲ್ ಕಂಪನಿಗಳು, ಸರಕಾರ ಇಟ್ಟುಕೊಳ್ಳುತ್ತಿವೆ. ಅಂತರರಾಷ್ಟ್ರೀಯ ಬೆಲೆ ಏರಿದಾಗ ಏರಿಸಿ ಬಳಕೆದಾರನಿಗೆ ವರ್ಗಾಯಿಸುತ್ತವೆ. ಆದರೆ ಇಳಿದಾಗ ಉಳಿತಾಯವನ್ನು ಗುಳುಂ ಮಾಡುವುದಿಲ್ಲವೇ ಹಾಗೆ. ಇ20 ಪೆಟ್ರೋಲ್ ಬೆಲೆ ಇಳಿಕೆಗೆ ಗ್ರಾಹಕರು ಒತ್ತಾಯಿಸಬೇಕಾಗಿದೆ.

ವೈಜ್ಞಾನಿಕ ಅಂಕಿ–ಅಂಶಗಳು ಸ್ಪಷ್ಟವಾಗಿವೆ

* ಪೆಟ್ರೋಲ್‌ನ ಕ್ಯಾಲೊರಿಫಿಕ್ ವ್ಯಾಲ್ಯೂ (ಅಗಿ) 46.4 ಮೆಗಾಜೂಲ್/ಕೆಜಿ.
* ಎಥನಾಲ್‌ನ ಅಗಿ 29.7 ಮೆಗಾಜೂಲ್/ಕೆಜಿ (36% ಕಡಿಮೆ).

ಅಂದರೆ, 10 ಲೀಟರ್ ಪೆಟ್ರೋಲ್‌ನಷ್ಟು ಶಕ್ತಿ ಪಡೆಯಲು 10.8 ಲೀಟರ್ ಇ20 ಬೇಕಾಗುತ್ತದೆ. ದೆಹಲಿಯ ದರದ ಪ್ರಕಾರ ಪ್ರತಿ 10 ಲೀಟರ್‌ಗೆ ಸುಮಾರು 70 ರೂ ಹೆಚ್ಚುವರಿ ವೆಚ್ಚ ಬರುತ್ತದೆ. ಇದು ತಿಂಗಳಿಗೆ ಹಲವಾರು ಬಾರಿ ಇಂಧನ ತುಂಬಿಸಿಕೊಳ್ಳುವ ವಾಹನ ಮಾಲೀಕರಿಗೆ ದೊಡ್ಡ ಹೊರೆ. ವಾಸ್ತವ ವಾಹನ ಬಳಕೆಯ ಪರಿಸ್ಥಿತಿಗಳಲ್ಲಿ ಶೇ.10 ಹೆಚ್ಚುವರಿ ಖರ್ಚು ನಿರೀಕ್ಷಿಸಬಹುದೆಂದು ಪರಿಣತರು ಅಂದಾಜು ಮಾಡಿದ್ದಾರೆ.

ವಾಹನ ನಿರ್ವಹಣೆ ಮತ್ತು ಹಾನಿ

ಎಥನಾಲ್ ಒಂದು ಆಲ್ಕೋಹಾಲ್ ಆಗಿದ್ದು, ತೇವ ಆಕರ್ಷಕ (ಹೈಗ್ರೋಸ್ಕೋಪಿಕ್) ಸ್ವಭಾವ ಹೊಂದಿದೆ. ಇದರಿಂದಾಗಿ:

* ರಬ್ಬರ್ ಟ್ಯೂಬ್‌ಗಳು, ಗ್ಯಾಸ್ಕೆಟ್‌ಗಳು, ಸೀಲ್‌ಗಳು, ಇಂಧನ ಫಿಲ್ಟರ್, ಪಂಪ್ ಮುಂತಾದವುಗಳಿಗೆ ಸವೆತ (corrosion) ಹೆಚ್ಚುತ್ತದೆ.
* ಹಳೆಯ ವಾಹನಗಳಲ್ಲಿ ಇ20–ಅನುಗುಣ ಭಾಗಗಳ ಬದಲಾವಣೆ ಮಾಡದಿದ್ದರೆ, ಹೆಚ್ಚುವರಿ ನಿರ್ವಹಣೆ ಖರ್ಚು ಉಂಟಾಗುತ್ತದೆ (ಸುಮಾರು 5,000 ರಿಂದ 7,000 ರೂ. ಗಳು).
* ಇಂಧನ ಫಿಲ್ಟರ್ ಮತ್ತು ಎಂಜಿನ್ ಎಣ್ಣೆ ಹೆಚ್ಚಾಗಿ ಬದಲಾಯಿಸಬೇಕಾಗುತ್ತದೆ.

2023ರ ನಂತರ ಮಾರಾಟವಾದ ಎಲ್ಲಾ ವಾಹನಗಳು ಇ20–ಅನುಗುಣವಾಗಿರಬೇಕು ಎಂಬ ನಿಯಮವಿದ್ದರೂ, ಅನುಷ್ಠಾನ ದುರ್ಬಲವಾಗಿದೆ. ಪ್ರಸ್ತುತ ರಸ್ತೆಗಳಲ್ಲಿ ಓಡುತ್ತಿರುವ ಶೇ. 90ರಷ್ಟು ವಾಹನಗಳು ಹಳೆಯವುಗಳಾಗಿವೆ.

ರಾಷ್ಟ್ರೀಯ ಜೈವಿಕ ಇಂಧನ ನೀತಿ ರೂಪಿಸುವಾಗ ಅದರ ಪರಿಣಾಮ ತಟ್ಟುವ ಎಲ್ಲ ವಿಭಾಗಗಳನ್ನು ಪರಿಗಣಿಸಿ ಸಮಗ್ರ ನೀತಿ ರೂಪಿಸದಿರುವುದೇ ಇದಕ್ಕೆ ಕಾರಣ. ತೈಲ ಕಂಪನಿಗಳು ಮತ್ತು ಎಥನಾಲ್ ಉತ್ಪಾದಕರ ಹಿತಾಸಕ್ತಿ ಮಾತ್ರ ಪರಿಗಣಿಸಿರುವಂತೆ ಕಾಣುತ್ತದೆ. ವಾಹನ ಬಳಕೆದಾರರು, ವಾಹನ ಉತ್ಪಾದಕರು, ರೈತರು, ಪರಿಸರ ಮತ್ತು ಆಹಾರ ಭದ್ರತೆಯ ಮೇಲೆ ಪರಿಣಾಮ ಹೀಗೆ ಇದಕ್ಕೆ ಇರುವ ಹಲವು ಆಯಾಮಗಳ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ

ಆಹಾರ ಬೆಳೆಗಳ ಮೇಲೆ ಪರಿಣಾಮ

ರಾಷ್ಟ್ರೀಯ ಜೈವಿಕ ಇಂಧನ ನೀತಿಯಲ್ಲಿ ಬದಲಾವಣೆಗಳ ನಂತರ ಎಥನಾಲ್ ಉತ್ಪಾದನೆಗೆ ಬಳಸುತ್ತಿರುವ ಕಚ್ಚಾವಸ್ತುಗಳಲ್ಲಿ ಭಾರೀ ಬದಲಾವಣೆಯಾಗಿದೆ.

ಎಥನಾಲ್ ಉತ್ಪಾದನೆಗಾಗಿ ಬಳಸಲಾಗುತ್ತಿರುವ ಮುಖ್ಯ ಬೆಳೆಗಳು

ಕಬ್ಬು: ಆರಂಭದಲ್ಲಿ ಪ್ರಮುಖ ಮೂಲ. ರಫ್ತುಮಾಡುವಷ್ಟು ಹೆಚ್ಚುವರಿ ಸಕ್ಕರೆ ಉತ್ಪಾದನೆಯಾಗುತ್ತಿದ್ದರೂ, ಆಂತರಿಕ ಬೇಡಿಕೆ ಮತ್ತು ಉತ್ಪಾದನೆ ನಡುವೆ ಸಮತೋಲನ ಯಾವಾಗಲೂ ಸರಳವಾಗಿರಲಿಲ್ಲ. ಆದರೆ ಉಪ–ಉತ್ಪನ್ನ ಮೋಲ್ಯಾಸಿಸ್ ಅನ್ನು ಎಥನಾಲ್‌ಗೆ ಉತ್ಪಾದನೆಗೆ ಬಳಸಲಾರಂಭಿಸಿದ ಮೇಲೆ, ಸಕ್ಕರೆ ಬೆಲೆ ಮತ್ತು ಲಭ್ಯತೆಯ ಮೇಲೆ ಪರಿಣಾಮ ಬೀರಿದೆ

ಪುಟ 14 ಕ್ಕೆ

ಪ್ರಮಾದಗಳನ್ನೆಲ್ಲವನ್ನೂ "ಕ್ರಾಂತಿಕಾರಕ" ಪರಿವರ್ತನೆ ಎಂದು ನಂಬಿಸುವ "ಎಕೊಸಿಸ್ಟಮ್"

ಹಾಲೀ ಚರ್ಚೆಯಲ್ಲಿರುವ ಇ20 ಇಂಧನದ ಬಗ್ಗೆ ಹೇಳಲು ಹೊರಟಿದ್ದೇನೆ. ಅರ್ಥಾತ್ ಎಥನಾಲ್ ಅನ್ನು ವಾಹನಗಳ ಇಂಧನದಲ್ಲಿ ಮಿಶ್ರಣಮಾಡಿ ಬಳಸುವ ಸರ್ಕಾರದ ತೀರ್ಮಾನ ಮತ್ತು ಅದರ ಸಮರ್ಥನೆಗಳ ಬಗ್ಗೆ. ನನ್ನ ಅನ್ನಿಸಿಕೆಯಂತೆ, ಈ ಪ್ರಕರಣ ನಾನು ಆಗಾಗ ಹೇಳುತ್ತಾ ಬಂದಿರುವಂತೆ ನೀರಿಗೆ ಧುಮುಕಿದ ಬಳಿಕ ಈಜು ಕಲಿಯುವ ಪುಸ್ತಕ ಅರಸುವ ಹಾಲೀ ಸರ್ಕಾರದ "ಹಾಲ್‌ಮಾರ್ಕ್" ವ್ಯವಸ್ಥೆಗೆ ಮಗದೊಂದು ಉದಾಹರಣೆ. ಸಾರ್ವಜನಿಕ ನೆನಪು ತೀರಾ ಸಣ್ಣದು ಎಂಬುದನ್ನೇ ಲಾಭ ಮಾಡಿಕೊಂಡು ತನ್ನ ಪ್ರಮಾದಗಳನ್ನೆಲ್ಲವನ್ನೂ "ಕ್ರಾಂತಿಕಾರಕ" ಪರಿವರ್ತನೆ ಎಂದು ನಂಬಿಸುವ "ಎಕೊಸಿಸ್ಟಮ್" ಒಂದನ್ನು ಕಟ್ಟಿಕೊಂಡಿರುವುದು ಹಾಲೀ ಆಳುವವರ ದೊಡ್ಡ ಶಕ್ತಿ.

ಈ ಎಥನಾಲ್ ಮಿಶ್ರಣದ ಇಷ್ಯೂವನ್ನೇ ತೆಗೆದುಕೊಳ್ಳಿ. 2019ಕ್ಕೆ ಮುನ್ನ ಭಾರತದಲ್ಲಿ ಇದ್ದುದು ಕೇವಲ 59 ಸ್ಯಾನಿಟೈಸರ್ ಉತ್ಪಾದನಾ ಘಟಕಗಳು. ಈ ಸ್ಯಾನಿಟೈಸರ್ ನಲ್ಲಿ ಶೇ. 96 ಎಥನಾಲ್ ಇದೆ. ಕೋವಿಡ್ ಹೆಸರಲ್ಲಿ ವರ್ಷಕ್ಕೆ 10 ಲಕ್ಷ ಲೀಟರ್ ಇದ್ದ ಎಥನಾಲ್ ಉತ್ಪಾದನೆ 2020 ಆಗಸ್ಟ್ ಹೊತ್ತಿಗೆ ದಿನಕ್ಕೆ 30 ಲಕ್ಷ ಲೀಟರ್ ಆಯಿತು. ಉತ್ಪಾದನೆಯಲ್ಲಿ ಶೇ. 1000ಕ್ಕೂ ಹೆಚ್ಚು ಏರಿಕೆ. 2021ರ ಹೊತ್ತಿಗೆ ದೇಶದಲ್ಲಿ ಬಳಕೆ ಆಗದೇ ದಾಸ್ತಾನು ಉಳಿದ ಎಥನಾಲ್ ಪ್ರಮಾಣ 3.9 ಕೋಟಿ ಲೀಟರ್. ಹೀಗೆ ದೇಶಕ್ಕಲ್ಲದ ಗಾತ್ರದಲ್ಲಿ ಸ್ಯಾನಿಟೈಸರ್ ಹೆಸರಲ್ಲಿ ಉತ್ಪಾದನೆ ಆದ ಎಥನಾಲ್‌ಗೆ ಒಂದು ವಿಲೇವಾರಿ ಹಾದಿ ಬೇಕಲ್ಲ– ಅದು ಈ ಬ್ಲೆಂಡಿಂಗ್ ಎಂಬ ಮಾಸ್ಟರ್ ಸ್ಟ್ರೋಕ್. ಈ ವಿವರಗಳನ್ನೆಲ್ಲ ಮರೆಮಾಚಿ, ಈಗ ಕೇವಲ ಇತ್ತೀಚಿನ ಸಂಗತಿಗಳೊಂದಿಗೆ ಕ್ಲಾಸ್ ಭಕ್ತರು ಸಮರ್ಥನೆ ಶುರುಹಚ್ಚಿಕೊಂಡಿದ್ದಾರೆ.

ಭಾರತದಲ್ಲಿ ಪರ್ಯಾಯ ಇಂಧನಗಳಿಗೆ ಹುಡುಕಾಟದ ಹೆಸರಿನಲ್ಲಿ ಎಥನಾಲ್ ಬ್ಲೆಂಡಿಂಗ್ ಚಿಂತನೆ ಶುರು ಆದದ್ದು 2001ರಲ್ಲೇ. ಆದರೆ, ಈ ಪೈಲಟ್ ಯೋಜನೆ ಕಾರ್ಯಸಾಧು ಅಲ್ಲ ಎಂಬ ಕಾರಣಕ್ಕೆ ವೇಗದಿಂದ ಮುಂದುವರಿದಿರಲಿಲ್ಲ. ಅದು ವೇಗ ಪಡೆದುಕೊಂಡದ್ದು 2019ರ ಕೋವಿಡ್ ಕಾಟದ ಬಳಿಕವೇ. ಅಧಿಕಾರಸ್ಥರು (ಸ್ವತಃ ಹಿರಿಯ ಸಚಿವ ಗಡ್ಕರಿ ಅವರ ಕುಟುಂಬ), ಹಲವು ಆನಿಗಳು – ಎಲ್ಲರೂ ಕೋವಿಡ್ ಕಾಲದ ಲಾಭಕ್ಕೆಂದು ಎಥನಾಲ್ ಉತ್ಪಾದನೆಯಲ್ಲಿ ತೊಡಗಿಕೊಂಡದ್ದರಿಂದ. ಅವರ ಹೂಡಿಕೆಗಳು ನೆಲಕಚ್ಚದಂತೆ ಕಾಪಾಡುವುದಕ್ಕೆ ಸರ್ಕಾರ ಕಂಡುಕೊಂಡ ಸುಲಭ ಮಾರ್ಗವೇ ಈ "ಬ್ಲೆಂಡಿಂಗ್" ಎಂದು ಮೇಲುನೋಟಕ್ಕೆ ಅನ್ನಿಸುತ್ತದೆ. ಇದಕ್ಕೆ ಬ್ರೆಜಿಲ್ ನ ಯಶಸ್ಸು ಮತ್ತಿತರ ಉದಾಹರಣೆಗಳನ್ನೀಗ ಬೊಟ್ಟುಮಾಡಲಾಗುತ್ತಿದೆ. ಆದರೆ ನಮ್ಮಲ್ಲಿ ಬ್ರೆಜಿಲ್ ನಲ್ಲಾದಷ್ಟು ಪೂರ್ವಸಿದ್ಧತೆಗಳೆಲ್ಲ ನಡೆದಿವೆಯೇ ಎಂಬ ಪ್ರಶ್ನೆಗೆ ಉತ್ತರ ಇಲ್ಲ. ಈ ಇಡಿಯ ಪ್ರಕರಣಕ್ಕೆ ಆಹಾರ ಉತ್ಪಾದನೆ– ಪೂರೈಕೆ ಅಸಮತೋಲನದ ಇನ್ನೊಂದು ಮಗ್ಗುಲು ಕೂಡ ಇದೆ.

ಈಗ ಇಲ್ಲಿ ಮೈಲೇಜ್, ವಾಹನ ವಿಮೆ ನಿರಾಕರಣೆ ಮತ್ತಿತರ ಸಂಗತಿಗಳು ಚರ್ಚೆ ಆಗತೊಡಗಿವೆ. ಸರ್ಕಾರ ಸ್ಪಷ್ಟೀಕರಣಗಳಲ್ಲಿ ನಿರತವಾಗಿದೆ. ಇದು ಸರ್ಕಾರಕ್ಕೆ ಸಮಗ್ರ ದೃಷ್ಟಿಕೋನವಾಗಲೀ, ದೂರದೃಷ್ಟಿಯಾಗಲೀ ಇಲ್ಲದಿರುವುದನ್ನಷ್ಟೇ ತೋರಿಸುತ್ತದೆ. ಈ ಬಗ್ಗೆ ರೀಮುಗಟ್ಟಲೆ ಬರೆಯಬಹುದು, ನಾನಿಲ್ಲಿ ಹೇಳಿರುವುದು ಟ್ರೇಲರ್ ಮಾತ್ರ.

–ರಾಜಾರಾಂ ತಲ್ಲೂರ್ (ಫೇಸ್‌ಬುಕ್‌ನಿಂದ)

ಭಾರತವು ಅಮೆರಿಕಾದ ಅಡಿಯಾಳು ಮಿತ್ರನಾಗುವುದನ್ನು ನಿಲ್ಲಿಸುವ ಸಮಯ ಬಂದಿದೆ

ಟ್ರಂಪ್ ಬ್ರಿಕ್ಸ್‌ನ ಮೂರು ಸ್ಥಾಪಕ ಸದಸ್ಯ ದೇಶಗಳಾದ ಬ್ರೆಜಿಲ್, ದಕ್ಷಿಣ ಆಫ್ರಿಕಾ ಮತ್ತು ಭಾರತದ ಮೇಲೆ ಅತ್ಯಧಿಕ ಸುಂಕ ವಿಧಿಸಿರುವುದು ಆಕಸ್ಮಿಕವಲ್ಲ. ಈ ಮೂರು ದೇಶಗಳು ಅನುಕ್ರಮವಾಗಿ ದಕ್ಷಿಣ ಅಮೆರಿಕಾ, ಆಫ್ರಿಕಾ ಮತ್ತು ಏಷ್ಯಾವನ್ನು ಪ್ರತಿನಿಧಿಸುವ ಜಾಗತಿಕ ದಕ್ಷಿಣದ ಪ್ರಮುಖ ರಾಷ್ಟ್ರಗಳಾಗಿವೆ. ಇದು ವ್ಯಾಪಾರ ಮತ್ತು ಹೂಡಿಕೆಯಲ್ಲಿ ಜಾಗತಿಕ ದಕ್ಷಿಣ ಸಹಕಾರವನ್ನು ಹೆಚ್ಚಿಸಬಲ್ಲ ನೀತಿಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಲು ಒಂದು ಅವಕಾಶ. ಆದರೆ ಮೋದಿ ಸರ್ಕಾರ ಸ್ವತಂತ್ರ ವಿದೇಶಾಂಗ ನೀತಿಯನ್ನು ಪುನಃಸ್ಥಾಪಿಸುವ ಮತ್ತು ನಿಜವಾಗಿಯೂ ವ್ಯೂಹಾತ್ಮಕ ಸ್ವಾಯತ್ತತೆಯನ್ನು ಖಚಿತಪಡಿಸುವ ಒಂದು ಹೊಸ ಹಾದಿಯನ್ನು ಧೈರ್ಯದಿಂದ ರೂಪಿಸುವ ದೃಢಸಂಕಲ್ಪ ಮತ್ತು ಕಣ್ಣೋಟವನ್ನು ಹೊಂದಿದೆಯೇ? ಅಥವಾ, ಟ್ರಂಪ್ ಮನಸ್ಥಿತಿಯಲ್ಲಿ ಮುಂದಿನ ಅನುಕೂಲಕರ ತಿರುವು ಬಂದು, ಅಡಿಯಾಳು ಮಿತ್ರನಾಗುವ ಹಿಂದಿನ ಹಾದಿಗೆ ಮರಳುವ ಸಮಯಕ್ಕಾಗಿ ಕಾಯುತ್ತದೆಯೇ?

ಭಾರತದ ವಿದೇಶಾಂಗ ನೀತಿಯಲ್ಲಿ ಬಹಳ ಹಿಂದೆಯೇ ಮಾಡಬೇಕಾಗಿದ್ದ ಹಾದಿ-ಸರಿಪಡಿಕೆಯನ್ನು ಮೋದಿ ಸರ್ಕಾರ ಕೈಗೊಳ್ಳುವಂತೆ ಮಾಡಿದ್ದಕ್ಕಾಗಿ ಡೊನಾಲ್ಡ್ ಟ್ರಂಪ್‌ಗೆ ಧನ್ಯವಾದ ಹೇಳಬೇಕಾಗಿ ಬಂದಿರುವುದು ಒಂದು ವಿಪರ್ಯಾಸವೇ ಸರಿ. ಸುಮಾರು ಮೂರು ದಶಕಗಳ ಕಾಲ, ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಿಂದ ಪ್ರಾರಂಭಿಸಿ, ಮನಮೋಹನ್‌ಸಿಂಗ್ ಸರ್ಕಾರದವರೆಗೆ, ನಂತರ ಇನ್ನಷ್ಟು ವೇಗವಾಗಿ ಮೋದಿ ಸರ್ಕಾರದ ಅವಧಿಯಲ್ಲಿ ಭಾರತವು ಅಮೆರಿಕದ ಅಡಿಯಾಳು ಮಿತ್ರನಾಗುವ ಹಾದಿಯಲ್ಲಿ ಸಾಗಿತ್ತು. ಇದು ಸ್ವತಂತ್ರ ವಿದೇಶಾಂಗ ನೀತಿಯ ಆಧಾರವನ್ನು ಮತ್ತು ವ್ಯೂಹಾತ್ಮಕ ಸ್ವಾಯತ್ತತೆಯ ವ್ಯಾಪ್ತಿಯನ್ನು ಸವೆಸಿದ ಸಾಮರಿಕ ನೀತಿದೃಷ್ಟಿಯಾಗಿತ್ತು.

ಇತ್ತೀಚಿನವರೆಗೂ, ಮೋದಿ ಸರ್ಕಾರವು ಯುಎಸ್‌ನೊಂದಿಗೆ ಎಲ್ಲಾ 'ಬುನಾದಿ' ಮಿಲಿಟರಿ ಒಪ್ಪಂದಗಳಿಗೆ ಸಹಿ ಹಾಕಿದೆ ಮತ್ತು ಭಾರತ-ಶಾಂತಸಾಗರ ಪ್ರದೇಶದಲ್ಲಿ ಅದರ ಭೌಗೋಳಿಕ-ರಾಜಕೀಯ ವ್ಯೂಹದೊಂದಿಗೆ ತನ್ನನ್ನು ಹೊಂದಿಸಿಕೊಂಡಿದೆ ಎಂದು ಹೆಮ್ಮೆಯಿಂದ ಘೋಷಿಸಿತ್ತು. 'ಕ್ವಾಡ್' (ಭಾರತ, ಆಸ್ಟ್ರೇಲಿಯಾ, ಜಪಾನ್ ಮತ್ತು ಯುನೈಟೆಡ್ ಸ್ಟೇಟ್ಸ್ ನಡುವಿನ 'ಚತುರ್ಭುಜ ಭದ್ರತಾ ಸಂವಾದ') ಈ ಉದಯೋನ್ಮುಖ ಮೈತ್ರಿಕೂಟದ ಅಭಿವ್ಯಕ್ತಿಯಾಗಿತ್ತು. ಟ್ರಂಪ್ ಅಧ್ಯಕ್ಷತೆಯ ಮೊದಲ ಅವಧಿಯಲ್ಲಿ, ಭಾರತವು ಇರಾನ್‌ನಿಂದ ತೈಲ ಖರೀದಿಯನ್ನು ಟ್ರಂಪ್ ವಿಧಿಸಿದ್ದ ಏಕಪಕ್ಷೀಯ ನಿರ್ಬಂಧಗಳಿಗೆ ಅನುಗುಣವಾಗಿ, ಅದು ನಮಗೆ ದೊಡ್ಡ ಹಾನಿಯನ್ನು ಉಂಟುಮಾಡಿದ್ದರೂ, ವಿನೀತ ಭಾವದಿಂದ ನಿಲ್ಲಿಸಿತು; ಇದರ ನಂತರ ವೆನೆಜುವೆಲಾದಿಂದ ತೈಲ ಖರೀದಿಯನ್ನು ನಿಲ್ಲಿಸಲಾಯಿತು.

ಎರಡನೇ ಟ್ರಂಪ್ ಆಗಮನವನ್ನು ಟ್ರಂಪ್ ಮತ್ತು ಮೋದಿ ನಡುವಿನ ವೈಯಕ್ತಿಕ ಸ್ನೇಹವನ್ನು ಆಧರಿಸಿ ಯುಎಸ್ ಅನ್ನು ಸಂತುಷ್ಟಗೊಳಿಸಲು ಭಾರತಕ್ಕೆ ಸಿಕ್ಕಿದ ದೈವಿಕ ಅವಕಾಶವೆಂದು ಪರಿಗಣಿಸಲಾಯಿತು. ಇಂತಹ ಒಂದು ನಿಲುವು, ಗಾಜಾದಲ್ಲಿ ಇಸ್ರೇಲ್ ನಡೆಸುತ್ತಿರುವ ನರಮೇಧದ ಬಗ್ಗೆ ಭಾರತ ನಾಚಿಕೆಗೇಡಿ ಮೌನಕ್ಕೆ ಶರಣಾಗುವಂತೆ ಮಾಡಿತು. ಇದು ಟ್ರಂಪ್ ಸಕ್ರಿಯವಾಗಿ ಬೆಂಬಲಿಸುತ್ತಿರುವ ಮತ್ತು ಪ್ರೋತ್ಸಾಹಿಸುತ್ತಿರುವ ಕೃತ್ಯ. ಇರಾನ್‌ನ ಪರಮಾಣು ಸ್ಥಾವರಗಳ ಮೇಲೆ ಯುಎಸ್ ಬಾಂಬ್ ದಾಳಿಯನ್ನು ಸಹ ಭಾರತ ಖಂಡಿಸಲಿಲ್ಲ. ಇದು ಒಂದು ಮಿತ್ರದೇಶದ ಮೇಲೆ ಆಕ್ರಮಣದ ಕೃತ್ಯವಾಗಿತ್ತು.

ಅರಗಿಸಿಕೊಳ್ಳಲಾಗದ ಸಂಗತಿ

ಆದರೆ ಭಾರತವನ್ನು ಬೆದರಿಸಲು ಸುಂಕಗಳನ್ನು ಅಸ್ತ್ರವಾಗಿ ಬಳಸುವಲ್ಲಿ ಟ್ರಂಪ್‌ರ ಅತಿ-ರಾಷ್ಟ್ರೀಯತಾವಾದಿ ನಿಲುವು ಮತ್ತು ಉಗ್ರವಾದವು ಮೋದಿ ಮತ್ತು ಬಿಜೆಪಿಗೆ ಸಹ ಅರಗಿಸಿಕೊಳ್ಳಲಾಗದ ಸಂಗತಿಯಾಯಿತು. ಅಲ್ಲದೆ ಭಾರತವನ್ನು ಪಾಕಿಸ್ತಾನದೊಂದಿಗೆ ಸಮಾನಸ್ಕಂಧವಾಗಿ ಪರಿಗಣಿಸುವುದನ್ನು ಸಹಿಸಲಾಗಲಿಲ್ಲ. ವಾಸ್ತವವೆಂದರೆ ಭಾರತ ಮತ್ತು ಪಾಕಿಸ್ತಾನ ಪರಮಾಣು ಶಸ್ತ್ರಾಸ್ತ್ರ ರಾಷ್ಟ್ರಗಳಾದ ಕ್ಷಣವೇ, ಅವುಗಳ ನಡುವಿನ ಯಾವುದೇ ಮಿಲಿಟರಿ ಸಂಘರ್ಷವು ಅಮೆರಿಕವು ಮಧ್ಯಸ್ಥಗಾರನಾಗಿ ಕಾರ್ಯನಿರ್ವಹಿಸಲು ದಾರಿ ತೆರೆಯುತ್ತದೆ, ಏಕೆಂದರೆ ಎರಡೂ ದೇಶಗಳನ್ನು ಅಮೆರಿಕಕ್ಕೆ ಬಂಧಿಸುವ ಸಾಮರಿಕ ಸಂಬಂಧಗಳಿವೆ.

ಈ ವರ್ಷ ಟ್ರಂಪ್ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳುವ ಮೊದಲೇ, ಅಧ್ಯಕ್ಷ ಜೋ ಬಿಡೆನ್ ನೇತೃತ್ವದಲ್ಲಿ ಅಮೆರಿಕಕ್ಕೆ 'ವ್ಯೂಹಾತ್ಮಕ ಪಾಲುದಾರ'ನಾಗಿ ಭಾರತದ ಬಾಧ್ಯತೆಗಳನ್ನು ಮೋದಿ ಸರ್ಕಾರಕ್ಕೆ ನೆನಪಿಸುವ ಸಂದರ್ಭ ಸಿಕ್ಕಿತ್ತು. ಜುಲೈ 2024ರಲ್ಲಿ ಮೋದಿ ರಷ್ಯಾಕ್ಕೆ ಹೋಗಿ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಭೇಟಿ ಮಾಡಿದಾಗ, ಬಿಡೆನ್ ಆಡಳಿತವು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿತು. ಭಾರತದಲ್ಲಿನ ಅಮೆರಿಕದ ರಾಯಭಾರಿ ಎರಿಕ್ ಗಾರ್ಸೆಟ್ಟಿ, "ಈ ಸಂಬಂಧವನ್ನು ಹಗುರವಾಗಿ ಪರಿಗಣಿಸಬೇಡಿ" ಎಂದು ಎಚ್ಚರಿಸಿದರು ಮತ್ತು "ಭಾರತವು ತನ್ನ ವ್ಯೂಹಾತ್ಮಕ ಸ್ವಾಯತ್ತತೆಯನ್ನು ಇಷ್ಟಪಡುತ್ತದೆ ಎಂದು ನನಗೆ ತಿಳಿದಿದೆ. ಆದರೆ, ಸಂಘರ್ಷದ ಸಮಯದಲ್ಲಿ, ವ್ಯೂಹಾತ್ಮಕ ಸ್ವಾಯತ್ತತೆ ಎಂಬುದೇನೂ ಇರುವುದಿಲ್ಲ" ಎಂದು ಹೇಳಿದರು.

ಭಾರತವು ತನ್ನ ರಕ್ಷಣಾ ಪೂರೈಕೆಗಳಿಗಾಗಿ ರಷ್ಯಾದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದರ ಜೊತೆಗೆ ಅಮೆರಿಕದ ಶಸ್ತ್ರಾಸ್ತ್ರಗಳು ಮತ್ತು ಸಲಕರಣೆಗಳ ಖರೀದಿಯನ್ನು ಗಣನೀಯವಾಗಿ ಹೆಚ್ಚಿಸಿರುವ ಸಾಕಷ್ಟು ಸೂಚನೆಗಳಿವೆ. ಇದು ಯುಎಸ್ ಆಡಳಿತಗಳೆಲ್ಲವೂ ಸತತವಾಗಿ ಹೇರಿರುವ ಒತ್ತಾಯ, ಈಗ ಟ್ರಂಪ್‌ರ ಸಂಪುಟ ಮಂತ್ರಿಗಳು ಇದನ್ನು ಜೋರಾಗಿ ಎತ್ತುತ್ತಿದ್ದಾರೆ.

ಮಗ+ಮಿಗ=ಮೆಗ ಆಗುವುದಿಲ್ಲ

ದಕ್ಷಿಣ ಏಷ್ಯಾ ಮತ್ತು ಏಷ್ಯಾ-ಶಾಂತಸಾಗರ ಪ್ರದೇಶದಲ್ಲಿ ಅಮೆರಿಕದ ಬಂಡಿಗೆ ನಮ್ಮನ್ನು ತಗಲಿಸಿಕೊಂಡಿರುವುದರ ಪರಿಣಾಮಗಳು ಕ್ರಮೇಣವಾಗಿ ಪ್ರಕಟಗೊಳ್ಳುತ್ತಿವೆ. ಇದರ ಫಲಿತಾಂಶವಾಗಿ ಭಾರತದ ವಿದೇಶಾಂಗ ನೀತಿಯು ಗೋಜಲಾಗಿ ಬಿಟ್ಟಿದೆ. ದಕ್ಷಿಣ ಏಷ್ಯಾದಲ್ಲಿ, ಭಾರತವು ತನ್ನ ನೆರೆದೇಶಗಳಿಂದ ಹಿಂದೆಂದಿಗಿಂತಲೂ ಹೆಚ್ಚು ಏಕಾಂಗಿಯಾಗಿದೆ. ಈ ಪ್ರದೇಶದಲ್ಲಿ ಚೀನಾದ ಹೆಚ್ಚುತ್ತಿರುವ ಪ್ರಭಾವವನ್ನು ಎದುರಿಸುವ ವ್ಯರ್ಥ ಅನ್ವೇಷಣೆ ಮತ್ತು ಪಾಕಿಸ್ತಾನ-ಕೇಂದ್ರಿತ ನೀತಿಯ ಗೀಳು ಇವೆರಡೂ ಇದಕ್ಕೆ ಕಾರಣಗಳು. ವಿದೇಶಾಂಗ ನೀತಿ ಮತ್ತು ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಹಿಂದುತ್ವ ವಿಶ್ವದೃಷ್ಟಿಯನ್ನು ತರುತ್ತಿರುವುದು ಜಗತ್ತಿನಲ್ಲಿ ಭಾರತದ ಪ್ರತಿಷ್ಠೆ ಮತ್ತು ಸ್ಥಾನವನ್ನು ಕುಗ್ಗಿಸಿದೆ. ಈಗ ಹಿಂದುತ್ವ ಜನಾಂಗೀಯ-ರಾಷ್ಟ್ರವಾದವು 'ಮಗ' (ಮೇಕ್ ಅಮೆರಿಕ ಗ್ರೇಟ್ ಅಗೇನ್) ಜನಾಂಗದ್ವೇಷಿ ರಾಷ್ಟ್ರವಾದಕ್ಕೆ ಡಿಕ್ಕಿ ಹೊಡೆದಿರುವುದರಿಂದ, ಭಾರತದ ಯುಎಸ್-ಪರ ಸಾಮರಿಕ ಮತ್ತು ವಿದೇಶಾಂಗ ನೀತಿಗಳು ಮುಂದೆ ದಾರಿಗಾಣದ ಸ್ಥಿತಿಯಲ್ಲಿವೆ. ಮಗ+ಮಿಗ (ಅಮೆರಿಕವನ್ನು ಮತ್ತೆ ಮಹಾನ್‌ಗೊಳಿಸಿ ಎಂಬುದು ಮತ್ತು ಭಾರತವನ್ನು ಮತ್ತೆ ಮಹಾನ್‌ಗೊಳಿಸಿ ಎಂಬುದು ಸೇರಿ) 'ಮೆಗ' (ಬೃಹತ್) ಆಗುವುದಿಲ್ಲ.

ಈ ಸಂದರ್ಭದಲ್ಲಿ, ಚೀನಾದೊಂದಿಗಿನ ಸಂಬಂಧಗಳನ್ನು ಉತ್ತಮಪಡಿಸುವ ಇತ್ತೀಚಿನ ಕ್ರಮಗಳು ಮತ್ತು ಶಾಂಘೈ ಸಹಕಾರ ಸಂಸ್ಥೆಯ ಶೃಂಗಸಭೆಯಲ್ಲಿ ಭಾಗವಹಿಸಲು ಮೋದಿಯವರ ತಿಯಾಂಜಿನ್ ಭೇಟಿ ಮತ್ತು ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗಿನ ದ್ವಿಪಕ್ಷೀಯ ಸಭೆ ಸಕಾರಾತ್ಮಕ ಬೆಳವಣಿಗೆಗಳಾಗಿವೆ. ಕುರುಡು ಚೀನಾ-ವಿರೋಧಿ ವೈಷಮ್ಯವನ್ನು ನಿವಾರಿಸಲು ಮತ್ತು ಎರಡೂ ದೇಶಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ಒಂದು ವಾಸ್ತವವಾದೀ ನಿಲುವನ್ನು ಅಳವಡಿಸಿಕೊಳ್ಳಲು ಬಹಳಷ್ಟು ಮಾಡಬೇಕಾಗಿದೆ.

ಬಹುಧ್ರುವೀಯತೆ ಬೆಳೆಯುತ್ತಿರುವ ಜಗತ್ತಿನಲ್ಲಿ


ಭಾರತದಲ್ಲಿ ತಯಾರಿಕಾ ವಲಯಕ್ಕೆ ಶಕ್ತಿ ತುಂಬಲು ಚೀನಾದ ಹೂಡಿಕೆಗಳು ಮತ್ತು ತಂತ್ರಜ್ಞಾನವನ್ನು ಬಳಸಲು ಅಪಾರ ಅವಕಾಶವಿದೆ. ಇದಕ್ಕೆ ವಿವಿಧ ವಲಯಗಳಲ್ಲಿ ಚೀನಾದ ಕಂಪನಿಗಳ ಹೂಡಿಕೆಗಳ ಮೇಲೆ ಇರಿಸಲಾದ ನಿರ್ಬಂಧಗಳನ್ನು ಹಿಂತೆಗೆದುಕೊಳ್ಳುವ ಅಗತ್ಯವಿದೆ. ಉದಾಹರಣೆಗೆ, ದೈತ್ಯ ವಿದ್ಯುತ್ ವಾಹನ ತಯಾರಕ ಕಂಪನಿ ಬಿವೈಡಿಗೆ 2023ರಲ್ಲಿ ವಿದ್ಯುತ್ ಕಾರ್‌ಗಳು ಮತ್ತು ಬ್ಯಾಟರಿಗಳನ್ನು ತಯಾರಿಸಲು ಒಂದು ಭಾರತೀಯ ಕಂಪನಿಯೊಂದಿಗೆ ಜಂಟಿ ಉದ್ಯಮದಲ್ಲಿ ಒಂದು ಬಿಲಿಯನ್ ಡಾಲರ್ ಹೂಡಿಕೆಗೆ ಅನುಮತಿ ನಿರಾಕರಿಸಲಾಯಿತು. ಈ ಉದ್ಯಮವು ಭಾರತಕ್ಕೆ ಇತ್ತೀಚಿನ ತಾಂತ್ರಿಕ ಜ್ಞಾನ ಮತ್ತು ತಯಾರಿಕಾ ಸಾಮರ್ಥ್ಯಗಳನ್ನು ಪಡೆಯಲು ಅನುವು ಮಾಡಿಕೊಡುತ್ತಿತ್ತು, ಏಕೆಂದರೆ ಬಿವೈಡಿ ವಿಶ್ವದ ಪ್ರಮುಖ ವಿದ್ಯುತ್ ವಾಹನ ಕಂಪನಿಯಾಗಿದೆ. ಚೀನಾದೊಂದಿಗಿನ ಆರ್ಥಿಕ ಸಹಕಾರವು ಭಾರತೀಯ ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಗಮನಾರ್ಹವಾಗಿ ಪ್ರಯೋಜನವನ್ನು ನೀಡುವ ಹಲವಾರು ಇತರ ಕ್ಷೇತ್ರಗಳಿವೆ.

ಅಮೆರಿಕ ನೇತೃತ್ವದ ಅಂತರರಾಷ್ಟ್ರೀಯ ವ್ಯವಸ್ಥೆಯು ಕೆಲವು ಸಮಯದಿಂದ ಅವನತಿ ಹೊಂದುತ್ತಿದೆ ಮತ್ತು ಬಹು-ಧ್ರುವೀಯತೆಯಿಂದ ಹೆಚ್ಚು ಹೆಚ್ಚು ಸವಾಲುಗಳನ್ನು ಎದುರಿಸುತ್ತಿದೆ. ವಾಸ್ತವಸಂಗತಿಯೆಂದರೆ, ಯುಎಸ್-ಪರ ನೀತಿಗಳು, ಬಹುಧ್ರುವೀಯತೆ ಬೆಳೆಯುತ್ತಿರುವ ಜಗತ್ತಿನಲ್ಲಿ ಭಾರತಕ್ಕೆ ತನ್ನನ್ನು ತಾನು ಬಲಪಡಿಸಿಕೊಳ್ಳಲು ಇರುವ ಅವಕಾಶಗಳನ್ನು ಬಳಸಿಕೊಳ್ಳುವುದಕ್ಕೆ ಅಡ್ಡಿಯಾಗಿವೆ. ಬ್ರಿಕ್ಸ್ ಮತ್ತು ಎಸ್‌ಸಿಒ (ಶಾಂಘಾಯ್ ಸಹಕಾರ ಸಂಘಟನೆ) ಸದಸ್ಯ ರಾಷ್ಟ್ರವಾಗಿ ಭಾರತವು ಈ ವೇದಿಕೆಗಳನ್ನು ಅಭಿವೃದ್ಧಿಪಡಿಸುವ ಮತ್ತು ಅವಕ್ಕೆ ಚೈತನ್ಯ ತುಂಬುವುದಕ್ಕೆ ತನ್ನ ಪೂರ್ಣ ಶಕ್ತಿಯನ್ನು ಹಾಕಿಲ್ಲ.

ರಷ್ಯಾ ಮತ್ತು ಚೀನಾ ಅಲ್ಲದೆ, ಬ್ರಿಕ್ಸ್‌ನ ಮೂರು ಸ್ಥಾಪಕ ಸದಸ್ಯರ ಮೇಲೆ ಟ್ರಂಪ್ ಅತ್ಯಧಿಕ ಸುಂಕಗಳನ್ನು – ಬ್ರೆಜಿಲ್ ಮೇಲೆ ಶೇ. 50, ದಕ್ಷಿಣ ಆಫ್ರಿಕಾದ ಮೇಲೆ ಶೇ. 30 ಮತ್ತು ಭಾರತದ ಮೇಲೆ ಶೇ. 50 ವಿಧಿಸಿರುವುದು ಆಕಸ್ಮಿಕವಲ್ಲ. ಈ ಮೂರು ದೇಶಗಳು ಅನುಕ್ರಮವಾಗಿ ದಕ್ಷಿಣ ಅಮೆರಿಕಾ, ಆಫ್ರಿಕಾ ಮತ್ತು ಏಷ್ಯಾವನ್ನು ಪ್ರತಿನಿಧಿಸುವ ಜಾಗತಿಕ ದಕ್ಷಿಣದ ಪ್ರಮುಖ ರಾಷ್ಟ್ರಗಳಾಗಿವೆ. ಭಾರತ ಮುಂದಿನ ವರ್ಷ ಬ್ರಿಕ್ಸ್‌ನ ಅಧ್ಯಕ್ಷತೆ ವಹಿಸಲಿದೆ. ಇದು ವ್ಯಾಪಾರ ಮತ್ತು ಹೂಡಿಕೆಯಲ್ಲಿ ಜಾಗತಿಕ ದಕ್ಷಿಣ ಸಹಕಾರವನ್ನು ಹೆಚ್ಚಿಸಬಲ್ಲ ನೀತಿಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಲು ಒಂದು ಅವಕಾಶ.

ಮೋದಿ ಸರ್ಕಾರ ಸ್ವತಂತ್ರ ವಿದೇಶಾಂಗ ನೀತಿಯನ್ನು ಪುನಃಸ್ಥಾಪಿಸುವ ಮತ್ತು ನಿಜವಾಗಿಯೂ ವ್ಯೂಹಾತ್ಮಕ ಸ್ವಾಯತ್ತತೆಯನ್ನು ಖಚಿತಪಡಿಸುವ ಒಂದು ಹೊಸ ಹಾದಿಯನ್ನು ಧೈರ್ಯದಿಂದ ರೂಪಿಸುವ ದೃಢಸಂಕಲ್ಪ ಮತ್ತು ಕಣ್ಣೋಟವನ್ನು ಹೊಂದಿದೆಯೇ? ಅಥವಾ, ಟ್ರಂಪ್ ಮನಸ್ಥಿತಿಯಲ್ಲಿ ಮುಂದಿನ ಅನುಕೂಲಕರ ತಿರುವು ಬಂದು, ಅಡಿಯಾಳು ಮಿತ್ರನಾಗುವ ಹಿಂದಿನ ಹಾದಿಗೆ ಮರಳುವ ಸಮಯಕ್ಕಾಗಿ ಕಾಯುತ್ತದೆಯೇ?





ಮೈಕ್ರೋಫೈನಾನ್ಸ್ ಮತ್ತು ಬಂಡವಾಳಶಾಹಿಯನ್ನು ಸ್ಥಿರೀಕರಿಸಬಹುದೆಂಬ ಹುಚ್ಚು ಕಲ್ಪನೆ

ಪ್ರೊ. ಪ್ರಭಾತ್ ಪಟ್ನಾಯಕ್

ಅನು. ಕೆ.ಎಂ.ನಾಗರಾಜ್



ಬಂಡವಾಳಶಾಹಿ ವ್ಯವಸ್ಥೆಯ ಚೌಕಟ್ಟಿನೊಳಗೇ ಸಾಮೂಹಿಕ ಬಡತನಕ್ಕೆ ಒಂದು ಪ್ರತ್ಯೌಷಧಿಯೆಂದು ಪ್ರಚುರಪಡಿಸಿದ ಮೈಕ್ರೋಫೈನಾನ್ಸ್ ಅಥವ ಕಿರುಸಾಲವ್ಯವಸ್ಥೆಯೇ ಮಹಿಳೆಯರೂ ಸೇರಿದಂತೆ ಜನರನ್ನು ಮತ್ತಷ್ಟು ದಾರಿದ್ರ್ಯಕ್ಕೆ ತಳ್ಳುವ ಒಂದು ಸಾಧನವಾಗಿದೆ ಎಂಬುದನ್ನು ಎಐಡಿಡಬ್ಲ್ಯುಎ ಸುಮಾರು 9,000 ಮಹಿಳೆಯರ ಕಿರು–ಸಾಲದ ಅನುಭವಗಳನ್ನು ಸಂಗ್ರಹಿಸಿ ನಡೆಸಿದ ಒಂದು ಸಮಗ್ರ ಅಧ್ಯಯನವು ಬಹಿರಂಗಪಡಿಸಿದೆ. ಒಂದು ಧ್ರುವದಲ್ಲಿ ಸಂಪತ್ತನ್ನು ಮತ್ತೊಂದು ಧ್ರುವದಲ್ಲಿ ಬಡತನವನ್ನು ಸೃಷ್ಟಿಸುವ ಪ್ರವೃತ್ತಿ ಬಂಡವಾಳಶಾಹಿ ವ್ಯವಸ್ಥೆಯೊಳಗೇ ಅಂತರ್ಗತವಾಗಿರುವಾಗ, ಸಂಪತ್ತಿನ ಅಸಮಾನ ಹಂಚಿಕೆಯ ದುಷ್ಪರಿಣಾಮಗಳನ್ನು ನಿವಾರಿಸಲು ಬಂಡವಾಳಶಾಹಿ ವ್ಯವಸ್ಥೆಯೊಳಗೆ ಕಿರುಸಾಲದಂತಹ ವ್ಯವಸ್ಥೆಗಳನ್ನು ರೂಪಿಸಬಹುದು ಎಂದು ನಂಬುವುದು ಒಂದು ಹುಚ್ಚು ಕಲ್ಪನೆಯಾಗುತ್ತದೆ. ಮತ್ತು ಅದನ್ನು ಒಂದು ಹುಚ್ಚು ಕಲ್ಪನೆಯಾಗಿ ಮಾಡಿರುವುದು ಕೂಡ ಸ್ವತಃ ಬಂಡವಾಳವೇ ಹೊರತು ಬೇರೆ ಯಾವುದೂ ಅಲ್ಲ.

ಬಂಡವಾಳಶಾಹಿಯು ತನ್ನ "ಅತಿರೇಕಗಳನ್ನು" ಸರಿಪಡಿಸಿಕೊಳ್ಳುವ ಮೂಲಕ "ಸ್ಥಿರೀಕರಣ'ಗೊಳ್ಳುತ್ತದೆ, ಆಮೂಲಕ ತನ್ನ ಅಸ್ತಿತ್ವಕ್ಕೆ ಎದುರಾಗುವ ಯಾವುದೇ ಸಾಮಾಜಿಕ ಸವಾಲನ್ನು ಮುಂಚಿತವಾಗಿಯೇ ತಡೆಯುತ್ತದೆ ಎಂಬ ಒಂದು ದೃಷ್ಟಿಕೋನವು ಅರ್ಥಶಾಸ್ತ್ರಜ್ಞರಲ್ಲಿ ಯಾವಾಗಲೂ ಒಂದಲ್ಲ ಒಂದು ರೂಪದಲ್ಲಿ ಗಟ್ಟಿಯಾಗಿ ಉಳಿದಿದೆ. ಇದು ಬಂಡವಾಳಶಾಹಿಯ "ಅತಿರೇಕಗಳನ್ನು" ತೊಡೆದುಹಾಕುವ ಏಕೈಕ ಮಾರ್ಗವೆಂದರೆ ಬಂಡವಾಳಶಾಹಿಯನ್ನೇ ಮೀರುವುದು ಎಂಬ ಮಾರ್ಕ್ಸ್‌ವಾದಿ ಗ್ರಹಿಕೆಗೆ ಸಂಪೂರ್ಣ ವ್ಯತಿರಿಕ್ತವಾಗಿದೆ. ಬಂಡವಾಳಶಾಹಿಯನ್ನು ಸರಿಪಡಿಸಲಾಗಿದೆ, ಅದರಿಂದಾಗಿ 'ಸ್ಥಿರೀಕರಣ'ಗೊಂಡಿದೆ ಎಂಬ ಈ ದೃಷ್ಟಿಕೋನವು ಒಂದು ರೀತಿಯ ಹುಚ್ಚು ಕಲ್ಪನೆ ಎಂಬುದು ಪದೇ ಪದೇ ಕಂಡುಬಂದಿದೆಯಾದರೂ, ಈ ದೃಷ್ಟಿಕೋನವು ಒಂದಲ್ಲ ಒಂದು ರೂಪದಲ್ಲಿ ನಿರಂತವಾಗಿ ಉಳಿದಿರುವುದನ್ನು ಅದರಿಂದ ತಡೆಯಲಾಗಿಲ್ಲ.

ಇಂಗ್ಲಿಷ್ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೀನ್ಸ್ ಅವರು ಬಂಡವಾಳಶಾಹಿ ವ್ಯವಸ್ಥೆಯು ಸದಾ ಕಾಲವೂ ಎದುರಿಸುತ್ತಿರುವ ಬೃಹತ್ ಪ್ರಮಾಣದ ಅನಿಯಂತ್ರಿತ ನಿರುದ್ಯೋಗವನ್ನು ಒಳಗೊಂಡ ಅಂಶವೇ ಈ "ಅತಿರೇಕದ" ಸ್ಥಿತಿ ಎಂಬುದಾಗಿ ಕಂಡಿದ್ದಾರೆ. ಬೃಹತ್ ಪ್ರಮಾಣದ ಈ ನಿರುದ್ಯೋಗವು ಆರ್ಥಿಕ ಕುಸಿತಗಳ ಸಂದರ್ಭದಲ್ಲಿ ಮಾತ್ರ ಇರುವ ಸಮಸ್ಯೆಯಲ್ಲ, ದಿನನಿತ್ಯವೂ ಸಹ ಸಾಧಾರಣವಾಗಿ ಇದ್ದೇ ಇರುವ ಸಮಸ್ಯೆಯೇ. ಕೀನ್ಸ್ ಅವರ ಪ್ರಕಾರ ಈ ಸಮಸ್ಯೆಯನ್ನು ಪರಿಹರಿಸುವ ವಿಧಾನವೆಂದರೆ ಪ್ರಭುತ್ವದ ಮಧ್ಯಪ್ರವೇಶದ ಮೂಲಕ ವ್ಯವಸ್ಥೆಯೊಳಗೆ ಬೇಡಿಕೆಯನ್ನು ತುಂಬುವುದೇ ಆಗಿತ್ತು. ಆದರೆ, ಕೀನ್ಸ್ ಪ್ರೇರಿತ ಪ್ರಭುತ್ವದ ಮಧ್ಯಪ್ರವೇಶದ ಮೂಲಕ "ಸರಿಪಡಿಸಲಾಗಿದೆ" ಎಂದು ಹೇಳಲಾದ ಬಂಡವಾಳಶಾಹಿಯು ಸ್ಥಿರೀಕರಣಗೊಳ್ಳುವ ಬದಲು, ಗಣನೀಯ ನಿರುದ್ಯೋಗ ಪರಿಸ್ಥಿತಿಯಲ್ಲಿ ಮತ್ತೊಮ್ಮೆ ಸಿಲುಕಿಕೊಂಡಿತು. ಈ ಬಗ್ಗೆ ಪ್ರಭುತ್ವವು ಹೊಸ ಪರಿಸ್ಥಿತಿಯಲ್ಲಿ ಏನನ್ನೂ ಮಾಡಲಾಗಲಿಲ್ಲ.

ಒಂದು ಭಿನ್ನ ಸನ್ನಿವೇಶದಲ್ಲಿ, ಮೂರನೇ ಜಗತ್ತಿನ ಸಮಾಜಗಳಲ್ಲಿ ಬಂಡವಾಳಶಾಹಿಯು ಉಂಟುಮಾಡಿದ ಮತ್ತು ಕಾಲಕ್ರಮೇಣ ಹೆಚ್ಚುತ್ತಲೇ ಹೋಗುವ ಸಾಮೂಹಿಕ ಬಡತನವನ್ನು ಕಿರು–ಸಾಲಗಳ (ಮೈಕ್ರೋ–ಕ್ರೆಡಿಟ್) ಮೂಲಕ ಹಿಮ್ಮೆಟ್ಟಿಸಬಹುದು ಮತ್ತು ಸಂಪನ್ಮೂಲಗಳಿಂದ ವಂಚಿತರಾಗುವ ಜನರ ಸಂಖ್ಯೆಯು ನಿರಂತರವಾಗಿ ಬೆಳೆಯುವ ಪರಿಸ್ಥಿತಿಯನ್ನು ತಪ್ಪಿಸಬಹುದು ಮತ್ತು ಆ ಮೂಲಕ ಬಂಡವಾಳಶಾಹಿ ವ್ಯವಸ್ಥೆಯನ್ನು ಮೀರುವ ಅಗತ್ಯವಿಲ್ಲದೇ ಅದನ್ನು ಸ್ಥಿರಗೊಳಿಸಬಹುದು ಎಂಬ ಒಂದು ದೃಷ್ಟಿಕೋನವನ್ನು ಮುಂದಿಡಲಾಯಿತು. ಶೋಷಣಾರಹಿತ ಷರತ್ತುಗಳ ಮೇಲೆ ಸಾಲ ಪಡೆಯುವುದು ಕೆಲವು ಅಂಚಿಗೆ ತಳ್ಳಲ್ಪಟ್ಟ ಕುಟುಂಬಗಳಿಗೆ ಸಾಧ್ಯವಾಗದೇ ಇರಬಹುದಾದರೂ, ಇಂತಹ ತೊಡಕುಗಳನ್ನು ಅವರು ಸ್ವ–ಸಹಾಯ ಗುಂಪುಗಳನ್ನು ರಚಿಸಿಕೊಳ್ಳುವ ಮೂಲಕ ನಿವಾರಿಸಿಕೊಳ್ಳಬಹುದು. ಈ ಸ್ವ–ಸಹಾಯ ಗುಂಪುಗಳು ಸುಲಭ ಷರತ್ತುಗಳ ಮೇಲೆ ಬ್ಯಾಂಕ್‌ಗಳಿಂದ ಸಾಲ ಪಡೆಯಬಹುದು. ಕಿರುಸಾಲಗಳನ್ನು ಪಡೆದು ಕಿರು–ಉದ್ಯಮಗಳನ್ನು ಆರಂಭಿಸುವ ಮೂಲಕ ಅವರು ತಮ್ಮ ಶೋಚನೀಯ ಜೀವನ ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಬಹುದು ಎಂಬ ಒಂದು ಕಲ್ಪನೆಯನ್ನು ವಿಶ್ವ ಬ್ಯಾಂಕ್ ಉತ್ಸಾಹದಿಂದ ಮುಂದಿಟ್ಟಿತು.

ವ್ಯತಿರಿಕ್ತ ಅನುಭವ

ವಿಶ್ವ ಬ್ಯಾಂಕಿನ ಈ ದೃಷ್ಟಿಕೋನದಲ್ಲಿರುವ ಒಂದು ಗಮನಾರ್ಹವಾದ ಅಂಶವೆಂದರೆ, ಪ್ರಭುತ್ವವು ಬಂಡವಾಳಶಾಹಿಯು



ಹೊಂದಿರುವ ಸ್ವಯಂಸ್ಫೂರ್ತತೆಯ ಪ್ರವೃತ್ತಿಗಳ ಮೇಲೆ ನಿರ್ಬಂಧಗಳನ್ನು ಹೇರುವ ಪ್ರಯತ್ನ ಇದರ ಭಾಗವಾಗಿರಲಿಲ್ಲ. ಉದಾಹರಣೆಗೆ, ಭಾರತದಲ್ಲಿ ಬ್ಯಾಂಕಿಂಗ್ ಸಂಸ್ಥೆಗಳು ನೀಡುವ ಸಾಲವನ್ನು ಕುಟುಂಬ ಒಡೆತನದ ಏಕಸ್ವಾಮ್ಯ ಕಂಪೆನಿಗಳಿಂದ ಕೃಷಿಗೆ ಮತ್ತು ಸಣ್ಣ ಸಾಲಗಾರರತ್ತ ಭಾಗಶಃ ತಿರುಗಿಸಲು ಬ್ಯಾಂಕ್ ರಾಷ್ಟ್ರೀಕರಣವನ್ನು ಬಳಸಲಾಯಿತು. ಈ ಕ್ರಮದ ಪರಿಣಾಮವಾಗಿ ಬಂಡವಾಳವನ್ನು ಕೇಂದ್ರೀಕರಿಸುವ ಬಂಡವಾಳಶಾಹಿ ಪ್ರಕ್ರಿಯೆಯ ಸ್ವಯಂಸ್ಫೂರ್ತತೆಯ ಪ್ರವೃತ್ತಿಯನ್ನು ಮಧ್ಯಪ್ರವೇಶದ ಮೂಲಕ ವಾಸ್ತವವಾಗಿ ಭಾಗಶಃ ಹಿಮ್ಮೆಟ್ಟಿಸುವಂತಾಯಿತು. ಕಿರು–ಸಾಲದ ಬಗ್ಗೆ ವಿಶ್ವ ಬ್ಯಾಂಕ್ ಹೊಂದಿದ್ದ ದೃಷ್ಟಿಕೋನವು ಯಾವುದೇ ರಾಷ್ಟ್ರೀಕರಣವನ್ನಾಗಲಿ ಅಥವಾ ಬಂಡವಾಳಶಾಹಿಯ ಪ್ರವೃತ್ತಿಗಳಲ್ಲಿ ಪ್ರಭುತ್ವದ ಯಾವುದೇ ಮಧ್ಯಪ್ರವೇಶವನ್ನಾಗಲಿ ಒಳಗೊಂಡಿರಲಿಲ್ಲ. ಬಂಡವಾಳಶಾಹಿ ಚೌಕಟ್ಟಿನೊಳಗೆಯೇ ಕಿರು ಸಾಲ ಒದಗಿಸುವ ಮೂಲಕ ಬಡತನ ಮತ್ತು ನಿರುದ್ಯೋಗ ಕಣ್ಮರೆಯಾಗುವ ಸಾಧ್ಯತೆಯನ್ನು ಅದು ಕಲ್ಪಿಸಿಕೊಂಡಿತು (ವಿಶ್ವ ಬ್ಯಾಂಕ್‌ನಂತಹ ಸಂಸ್ಥೆಗಳು ಬಂಡವಾಳಶಾಹಿಗೆ ಯಾವುದೇ ಪ್ರವೃತ್ತಿ ಇದೆ ಎಂದು ನೋಡುವುದಿಲ್ಲ ಎಂಬುದು ತಿಳಿದಿರುವ ವಿಷಯವೇ ಆಗಿದೆ). ಹಾಗಾಗಿ, ಅವರ ಮಟ್ಟಿಗೆ ಇದು "ಉಂಡೂ ಹೊಗುವ ಮತ್ತು ಕೊಂಡೂ ಹೋಗುವ" ಒಂದು ಪ್ರಕರಣವೇ ಸರಿ. ಅವರ ಪ್ರಕಾರ, ಬಂಡವಾಳಶಾಹಿಯ ವ್ಯವಸ್ಥೆಯೊಳಗೆ ಬಡತನವನ್ನು ಹೋಗಲಾಡಿಸಲು ನಿರುದ್ಯೋಗಿಗಳಿಗೆ ಅಥವಾ ಅರೆ–ಉದ್ಯೋಗಿಗಳಿಗೆ ಬಂಡವಾಳಶಾಹಿ ಉದ್ದಿಮೆಗಳಲ್ಲೇ ಉದ್ಯೋಗ ಕಲ್ಪಿಸಬೇಕು ಎಂದೇನೂ ಅಲ್ಲ, ಬಡವರಿಗೆ ಕಿರು ಸಾಲಗಳನ್ನು ಒದಗಿಸಿ ಕಿರು–ಉದ್ಯಮಗಳನ್ನು ಸ್ಥಳೀಯವಾಗಿ ಅಭಿವೃದ್ಧಿಪಡಿಸುವ ಮೂಲಕ ಬಡತನವನ್ನು ನಿವಾರಿಸಬಹುದು.

ಇದು ಎಲ್ಲ ಅನುಭವಗಳಿಗೂ ವ್ಯತಿರಿಕ್ತವಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಕಿರು–ಉದ್ಯಮಗಳು ಆರಂಭವಾಗಿರುವ ಎಲ್ಲಿಯಾದರೂ ಅವು ಬಡವರಿಗೆ ಸಹಾಯವಾಗುವಲ್ಲಿ ಯಶಸ್ವಿಯಾಗಿದ್ದರೆ, ಅದು ಪ್ರಭುತ್ವದ ಗಮನಾರ್ಹ ಮಧ್ಯಪ್ರವೇಶದ ಮೂಲಕವೇ ಹೊರತು, ಅನಿಯಂತ್ರಿತ ಬಂಡವಾಳಶಾಹಿಯ ಮೂಲಕ ಅಲ್ಲ. ಈ ನಿಟ್ಟಿನಲ್ಲಿ ಕೇರಳದ 'ಕುಟುಂಬಶ್ರೀ' ಪ್ರಯೋಗವು ಒಂದು ಉತ್ತಮ ಉದಾಹರಣೆಯಾಗಿ ಉಳಿದಿದೆ. ಅಲ್ಲಿ, ರಾಜ್ಯ ಸರ್ಕಾರದ ಧನ ಸಹಾಯದಿಂದ ಆರಂಭವಾದ ಒಂದು ದೊಡ್ಡ ರಾಜ್ಯವ್ಯಾಪೀ ಮಹಿಳಾ ಸಹಕಾರಿ ಸಂಘವು ವೈವಿಧ್ಯಮಯ ಚಟುವಟಿಕೆಗಳನ್ನು ನಡೆಸುವಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಆದರೂ, ವಿಶ್ವಬ್ಯಾಂಕ್ ಮತ್ತು ಅದರ ದೃಷ್ಟಿಕೋನದ ಬಗ್ಗೆ ಸಹಾನುಭೂತಿ ಹೊಂದಿರುವ ಅರ್ಥಶಾಸ್ತ್ರಜ್ಞರ ಒಂದು ವಿಭಾಗವು, ಅನಿಯಂತ್ರಿತ ಬಂಡವಾಳಶಾಹಿಯ ಚೌಕಟ್ಟಿನೊಳಗೆ ಬಡತನವನ್ನು ನಿವಾರಿಸುವ ಕಿರು–ಸಾಲ ಮತ್ತು ಕಿರು–ಉದ್ಯಮಗಳ ಈ ಹುಚ್ಚು ಕಲ್ಪನೆಯನ್ನು ನಂಬುತ್ತಲೇ ಇದ್ದಾರೆ ಮತ್ತು ಅದನ್ನು ಪ್ರಚುರಪಡಿಸುವಲ್ಲಿ ನಿರತರಾಗಿದ್ದಾರೆ.

ಮುಖ್ಯ ಶೋಧಗಳು

ಈಗ, ಅಖಿಲ ಭಾರತ ಜನವಾದೀ ಮಹಿಳಾ ಸಂಘಟನೆಯು (ಎಐಡಿಡಬ್ಲ್ಯುಎ) ಸುಮಾರು 9,000 ಮಹಿಳೆಯರನ್ನು ಕಿರು–ಸಾಲದ ತಮ್ಮ ಅನುಭವವನ್ನು ಹಂಚಿಕೊಳ್ಳುವಂತೆ ಸಂಪರ್ಕಿಸುವ ಮೂಲಕ ನಡೆಸಿದ ಒಂದು ಸಮಗ್ರ ಅಧ್ಯಯನವು, ನಿಜಕ್ಕೂ ಆತಂಕಕಾರಿಯಾದ ಒಂದು ಚಿತ್ರಣವನ್ನು ಬಹಿರಂಗಪಡಿಸಿದೆ. ಈ ಸಂಬಂಧವಾಗಿ ಆಗಸ್ಟ್ 23–24 ರಂದು ದೆಹಲಿಯಲ್ಲಿ ನಡೆದ ಸಾರ್ವಜನಿಕ ವಿಚಾರಣೆಯಲ್ಲಿ ಹಲವಾರು ಸಾಕ್ಷಿಗಳು ಪ್ರಸ್ತುತಪಡಿಸಿದ ಸಾಕ್ಷ್ಯಗಳೊಂದಿಗೆ ಜನವಾದೀ ಮಹಿಳಾ ಸಂಘಟನೆಯ ಅಧ್ಯಯನದ ಮುಖ್ಯ ಶೋಧಗಳು ಈ ಕೆಳಗಿನಂತಿವೆ.

ಮೊದಲನೆಯದಾಗಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಂತಹ ಸಾರ್ವಜನಿಕ ವಲಯದ ಬ್ಯಾಂಕ್‌ಗಳೂ ಸೇರಿದಂತೆ ವಾಣಿಜ್ಯ ಬ್ಯಾಂಕ್‌ಗಳು, ಮಹಿಳಾ ಸಾಲಗಾರರಿಗೆ ಜಾಮೀನು ಅಥವಾ ಮೇಲಾಧಾರ ಮತ್ತು ಅವರು ಪಡೆಯಲು ಕಷ್ಟವಾಗಿರುವ ಕೆಲವು ದಾಖಲೆಗಳನ್ನು ಒದಗಿಸದ ಹೊರತು ಒಂದು ಬಿಡಿಗಾಸಿನ ಸಾಲವನ್ನೂ ನೀಡುವುದಿಲ್ಲ. ಪರಿಣಾಮವಾಗಿ, ಅಂಚಿನಲ್ಲಿರುವ ಕುಟುಂಬಗಳ ಮಹಿಳಾ ಸಾಲಗಾರರು ನೇರ ಸಾಂಸ್ಥಿಕ ಸಾಲದಿಂದ ಹೆಚ್ಚು ಕಡಿಮೆ ಸಂಪೂರ್ಣವಾಗಿ ಹೊರಗಿಡಲ್ಪಡುತ್ತಾರೆ.

ಎರಡನೆಯದು, ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುವ ಈ ವಾಣಿಜ್ಯ ಬ್ಯಾಂಕ್‌ಗಳು ಬಂಡವಾಳಶಾಹಿಗಳಿಂದ ನಿಯಂತ್ರಿಸಲ್ಪಡುವ ಬ್ಯಾಂಕೇತರ ಹಣಕಾಸು ಕಂಪನಿಗಳಿಗೆ (ಎನ್‌ಬಿಎಫ್‌ಸಿ) ಮತ್ತು ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಗೆ (ಎಂಎಫ್‌ಐ) ಸಾಲ ನೀಡುತ್ತವೆ. ಈ ಸಂಸ್ಥೆಗಳು ಬ್ಯಾಂಕುಗಳಿಂದ ಶೇ. 10ಕ್ಕಿಂತ ಕಡಿಮೆ ಬಡ್ಡಿದರದಲ್ಲಿ ಸಾಲ ಪಡೆಯುತ್ತವೆ ಮತ್ತು ಅದನ್ನು ಅಂತಿಮ ಸಾಲಗಾರರಿಗೆ ಶೇ. 21ರಿಂದ ಶೇ. 26ರವರೆಗಿನ ದರದಲ್ಲಿ ಸಾಲ ನೀಡುತ್ತವೆ. ಅದಕ್ಕಿಂತಲೂ ಮಿಗಿಲಾಗಿ, ಹಿಂದಿನ ಕಾಲದ ಹಳ್ಳಿಯ ಲೇವಾದೇವಿಯ ಆಧುನಿಕ ಪ್ರತಿರೂಪವಾಗಿರುವ ಅಂತಹ ಸಾಲಗಳನ್ನು ಆದ್ಯತೆಯ ವಲಯದ ಸಾಲವೆಂದು ಪರಿಗಣಿಸಲಾಗುತ್ತದೆ!

ಮೂರನೆಯದು, ಈ ಎನ್‌ಬಿಎಫ್‌ಸಿಗಳು(ಬ್ಯಾಂಕೇತರ ಹಣಕಾಸು ಸಂಸ್ಥೆಗಳು) ಮತ್ತು ಮೈಕ್ರೊಫೈನಾನ್ಸ್ ಸಂಸ್ಥೆಗಳು ಜನರನ್ನು ಸಾಲ ಪಡೆಯುವಂತೆ ಪುಸಲಾಯಿಸುತ್ತವೆ. ಆಧಾರ್ ಕಾರ್ಡ್‌ಗಳಂತಹ ಸುಲಭವಾಗಿ ಲಭ್ಯವಿರುವ ದಾಖಲೆಗಳನ್ನು ಹೊರತುಪಡಿಸಿ ಸಾಲಗಾರರಿಂದ ಬಹಳ ಕಡಿಮೆ ದಾಖಲೆಗಳನ್ನು ಪಡೆಯುತ್ತವೆ. ಆದರೆ, ಸಾಲ ತೆಗೆದುಕೊಂಡ ನಂತರ, ಕಂತುಗಳನ್ನು (ಇಎಂಐ) ಪಾವತಿಸುವಂತೆ ಅವು ಮಹಿಳೆಯರಿಗೆ ನಿರಂತರವಾಗಿ ಕಿರುಕುಳ ನೀಡುತ್ತವೆ ಮತ್ತು ಅವರನ್ನು ಹೊಲಸು ಮಾತುಗಳಲ್ಲಿ ಹೀಯಾಳಿಸುವುದರ ಜೊತೆಗೆ ಅವರನ್ನು ದೈಹಿಕ ಕಿರುಕುಳಗಳಿಗೂ ಒಳಪಡಿಸುತ್ತವೆ.

ನಾಲ್ಕನೆಯದು, ಮಹಿಳೆಯರು ತಮ್ಮ ಮಕ್ಕಳ ಶಿಕ್ಷಣ ವೆಚ್ಚಗಳಿಗಾಗಿ ಮತ್ತು ಹಠಾತ್ ಅನಾರೋಗ್ಯದ ಸಂದರ್ಭದಲ್ಲಿ ಆರೋಗ್ಯ ವೆಚ್ಚವನ್ನು ಭರಿಸಲು ಸಾಲ ತೆಗೆದುಕೊಳ್ಳಬೇಕಾಗುತ್ತದೆ. ಮುಂದಿನ ದಿಗಳಲ್ಲಿ ಅವರ ವರಮಾನವು ಏರಿಕೆಯಾಗದ ಕಾರಣದಿಂದ ಸಾಲದ ಮರುಪಾವತಿ ಕಷ್ಟಕರವಾಗುತ್ತದೆ. ಈ ಸಾಲಗಳ ಮೇಲೆ ಹೇರಿದ ಅತಿ ದುಬಾರಿ ಬಡ್ಡಿ ದರಗಳು ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತವೆ. ಪರಿಣಾಮವಾಗಿ, ಸಾಲಗಾರರು ಕಂಡ ಕಂಡವರಿಂದ ಇನ್ನೂ ಹೆಚ್ಚು ದುಬಾರಿ ಬಡ್ಡಿಯ ಮೇಲೆ ಹೊಸ ಹೊಸ ಸಾಲ ತೆಗೆದುಕೊಳ್ಳುವ ಒತ್ತಾಯಕ್ಕೆ ಒಳಗಾಗುತ್ತಾರೆ. ಹಿಂದಿನ ಸಾಲವನ್ನು ತೀರಿಸಲು ಮತ್ತೊಂದು ಹೊಸ ಸಾಲ ಮಾಡಬೇಕಾಗುತ್ತದೆ. ಹೀಗೆ ಅವರು ಅನಿವಾರ್ಯವಾಗಿ ಸಾಲದ ಒಂದು ವಿಷ ವರ್ತುಲದಲ್ಲಿ ಸಿಕ್ಕಿಕೊಳ್ಳುತ್ತಾರೆ. ಇದರಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗುವುದೇ ಇಲ್ಲ. **ಪುಟ 15 ಕ್ಕೆ**

ಎಥನಾಲ್ ಮಿಶ್ರಿತ ಪೆಟ್ರೋಲ್ ಕುರಿತು ಕೋಲಾಹಲ..

ಪುಟ 11 ರಿಂದ

ಹಾಗೂ ಇತರ ಅಲ್ಕೊಹಾಲ್ ಕೈಗಾರಿಕೆಗಳಿಗೆ ಹಾನಿಯಾಗಿದೆ. ಮೊದಲ ಹಂತದಲ್ಲಿ ಈ ಏರುಪೇರನ್ನು ನಿಭಾಯಿಸಲು ಎಥನಾಲ್ ಆಮದಿಗೆ ಸಹ ಅನುಮತಿ ನೀಡಲಾಯಿತು! ಮೂಲ ಗುರಿ ಪೆಟ್ರೋಲ್ ಆಮದು ಖರ್ಚು ಮಾಡುವುದಾಗಿದ್ದು, ಅದನ್ನು ಹೆಚ್ಚು ಮಾಡುವ ಪರಿಹಾರ ಹಾಸ್ಯಾಸ್ಪದವಾಗಿತ್ತು. ಈ ಪರಿಸ್ಥಿತಿ ನಿಭಾಯಿಸಲು ಸರಕಾರ ಕಬ್ಬಿನ ರಸವನ್ನು ನೇರವಾಗಿ ಎಥನಾಲ್ ಆಗಿ ಪರಿವರ್ತಿಸುವುದಕ್ಕೆ ಅನುಮತಿ ನೀಡಿತು. ಅದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತು. ಈ ನೀತಿಯನ್ನು ಇತ್ತೀಚೆಗೆ ಕೈಬಿಡಲಾಯಿತು.

ಜೋಳ (ಮೆಕ್ಕೆಜೋಳ): 2021–22ರಲ್ಲಿ ಶೂನ್ಯದಿಂದ 2023–24ರಲ್ಲಿ 2,860 ಮಿಲಿಯನ್ ಲೀಟರ್ ತನಕ (42% ಒಟ್ಟು ಉತ್ಪಾದನೆ) ಇದರ ಬಳಕೆ ಏರಿತು. 2024–25ರಲ್ಲಿ ಶೇ. 51ಕ್ಕೆ ಏರಿತು! ಇದರಿಂದ ಎಥನಾಲ್‌ಗೂ ಮತ್ತು ಜೋಳಕ್ಕೂ ಬೇಡಿಕೆ ಏರಿತು. ಜೋಳದ ಬೆಲೆಯೂ ಜಾಸ್ತಿಯಾಯಿತು.

ಅಕ್ಕಿ ಮತ್ತು ಕೆಲವು ಧಾನ್ಯಗಳು: ಎಫ್‌ಸಿಐ ಗೋದಾಮುಗಳ "ಕೆಟ್ಟ" ಅಕ್ಕಿ ಬಳಕೆಯ ಹೆಸರಿನಲ್ಲಿ ಆರಂಭವಾಗಿ, ವಾಸ್ತವದಲ್ಲಿ ಉತ್ತಮ ಅಕ್ಕಿ ಮತ್ತು ಇತರ ಧಾನ್ಯಗಳನ್ನು ಬಳಸಲಾಗುತ್ತಿದೆ. ಎಥನಾಲ್ ಉತ್ಪಾದಕತೆ ಇತರ ಧಾನ್ಯ (ಪ್ರತಿ ಟನ್‌ಗೆ 380ರಿಂದ 460 ಪ್ರತಿ ಲೀಟರ್), ಮತ್ತು ಮೊಲ್ಯಾಸಿಸ್ (ಪ್ರತಿ ಟನ್‌ಗೆ 225 ಲೀಟರ್), – ಇವುಗಳಿಗಿಂತ, ಅಕ್ಕಿಯದ್ದು (ಪ್ರತಿ ಟನ್‌ಗೆ 450ರಿಂದ 480 ಲೀಟರ್) ಹೆಚ್ಚಿರುವುದರಿಂದ ಅದು ಆಹಾರದಿಂದ ಎಥನಾಲ್ ಉತ್ಪಾದನೆಗೆ ವರ್ಗಾವಣೆಯಾಗುತ್ತಿದೆ.

ಇದರ ಪರಿಣಾಮವಾಗಿ:

* ಕೋಳಿ ಸಾಕಾಣಿಕೆ ಕೈಗಾರಿಕೆ 15% ಮೇಲ್ಪಟ್ಟು ಜೋಳ ಕೊರತೆಯಿಂದ ಸಂಕಷ್ಟ ಅನುಭವಿಸಿದೆ.
* ಭಾರತ, ಹಿಂದಿನಂತೆ ಜೋಳ ರಫ್ತು ಮಾಡದೆ, ಈಗ ಆಮದುದಾರವಾಗಿದೆ.
* ಎಣ್ಣೆಬೀಜ, ಸಣ್ಣ ಧಾನ್ಯಗಳು, ಕಾಳುಗಳು ಇತ್ಯಾದಿ ಪ್ರದೇಶ ಶೇ.10 ರಷ್ಟು ಕಡಿಮೆಯಾಗಿವೆ.
* ಒಟ್ಟಾರೆ ಆಹಾರ ಭದ್ರತೆಗೆ ಕುತ್ತು ಬರುತ್ತಿದೆ.

ಕಬ್ಬು ಬೆಳೆಯ ವಿಸ್ತರಣೆ ನೀರಿನ ಕೊರತೆ ಪ್ರದೇಶಗಳಲ್ಲಿ (ಉದಾ. ವಿದರ್ಭ) ನಡೆಯುತ್ತಿದ್ದು, ಭೂಗರ್ಭಜಲ ಹಾನಿ ಹಾಗೂ ಮಾಲಿನ್ಯ ಹೆಚ್ಚುತ್ತಿದೆ. ಉತ್ತರ ಪ್ರದೇಶದಲ್ಲಿ ಶೇ. 70ರಷ್ಟು ಮೇಲ್ಮೈ ನೀರು ಸಕ್ಕರೆ ಕೈಗಾರಿಕೆಯ ತ್ಯಾಜ್ಯದಿಂದ ಮಾಲಿನ್ಯಗೊಂಡಿದೆ.

ಇಂಧನ ಬದಲಾವಣೆಗೆ ಎಥನಾಲ್ ಉತ್ಪಾದನೆಯ ಏಕಮಾತ್ರ ಗುರಿಯೊಂದಿಗೆ ಜೈವಿಕ ಇಂಧನ ನೀತಿಯನ್ನು ರೂಪಿಸಲಾಗಿದೆ. ಆಹಾರ ಭದ್ರತೆ, ಬೆಳೆ ಸಮತೋಲನ, ರೈತರ ಹಿತಾಸಕ್ತಿ, ಪರಿಸರ ಇತ್ಯಾದಿ ಗುರಿಗಳನ್ನು ಕಡೆಗಣಿಸಲಾಗಿದೆ. ಹಾಗಾಗಿ ಜೈವಿಕ ಇಂಧನ ನೀತಿಯಲ್ಲಿ ಇವೆಲ್ಲ ಕಾಳಜಿಗಳನ್ನು ಒಳಗೊಳ್ಳುವ ಬದಲಾವಣೆ ಬೇಕಾಗಿದೆ.

ಈಗ, "ಸೆಪ್ಟೆಂಬರ್ 1ರ ನಂತರವೂ ಆಕ್ಷೇಪಣೆಗಳನ್ನು ಸಲ್ಲಿಸಬಹುದು" ......

ಪುಟ 8 ರಿಂದ

ನ್ಯಾಯಾಲಯದ ಆದೇಶದ ನಂತರ ಆಗಸ್ಟ್ 22ರಿಂದ 27ರ ನಡುವೆ ಐದೇ ದಿನಗಳಲ್ಲಿ ಆಕ್ಷೇಪಣೆಗಳ ಸಂಖ್ಯೆ ದ್ವಿಗುಣಗೊಂಡಿತು, 84305ರಿಂದ 178948ಕ್ಕೆ ಏರಿತು ಎಂದು ವರದಿಯಾಗಿದೆ. ಆಗಸ್ಟ್ 28ರಂದು ಇದು 1,95,802 ಆಯಿತು. ಇದಲ್ಲದೆ ಆಗಸ್ಟ್ 28 ರ ವೇಳೆಗೆ ಫಾರ್ಮ್ 6ರಲ್ಲಿ ಹೊಸ ಮತದಾರರ ನೋಂದಣಿಗೆ 8,51,788 ಅರ್ಜಿಗಳು ಬಂದಿವೆ ಎಂದೂ ಅಧಿಕೃತವಾಗಿ ಹೇಳಲಾಗಿದೆ.ಇದು ಕೂಡ ಆಗಸ್ಟ್ 26–28ರ ನಡುವೆ ದ್ವಿಗುಣಗೊಂಡಿತು ಎಂದು ಹೇಳಲಾಗಿದೆ.

ಬಿಎಲ್‌ಒಗಳು (ಮತಗಟ್ಟೆ ಮಟ್ಟದ ಅಧಿಕಾರಿಗಳು) ಹೊಸ ಮತದಾರರ ಸೇರ್ಪಡೆಗೆಂದು ವಿಧಿಸಿರುವ ಫಾರ್ಮ್ 6 ರಲ್ಲಿಯೇ ಅರ್ಜಿ ಸಲ್ಲಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ ಎಂದು ಸಿಪಿಐ(ಎಂಎಲ್) ಲಿಬರೇಷನ್ ಹೇಳಿದೆ. ಹಲವು ಜಿಲ್ಲೆಗಳಲ್ಲಿ ಅಧಿಕಾರಿಗಳು ಆಧಾರ್‌ನೊಂದಿಗೆ ಮತದಾರರ ದಾವೆಗಳನ್ನು ಸ್ವೀಕರಿಸಲು ನಿರಾಕರಿಸುತ್ತಿದ್ದಾರೆ ಎಂದು ಆರ್‌ಜೆಡಿ ಹೇಳಿದೆ. ತಮ್ಮ ಬಿಎಲ್‌ಎಗಳು ಆಧಾರ್‌ನೊಂದಿಗೆ ಸಲ್ಲಿಸಿದ ಆಕ್ಷೇಪಣೆ/ಅರ್ಜಿಗಳನ್ನು ಬಿಎಲ್‌ಒ ಗಳಿಗೆ ಸ್ವೀಕೃತಿ ಪತ್ರ ನೀಡಿದರೂ, ಇವು ಆಯೋಗದ ದೈನಂದಿನ ಹೇಳಿಕೆಗಳಲ್ಲಿ ಬಿಂಬಿತವಾಗುವುದಿಲ್ಲ. ಇದು, ಆಯೋಗ ನ್ಯಾಯಪೀಠದ ಎದುರು ಹೇಳಿರುವಂತೆ, ರಾಜಕೀಯ ಪಕ್ಷಗಳು ದಾವೆಗಳನ್ನು ಸಲ್ಲಿಸುವಲ್ಲಿ ಸಹಕರಿಸುತ್ತಿಲ್ಲ ಎಂಬ ತಪ್ಪು ಕಥನವನ್ನು ಸೃಷ್ಟಿಸುವುದಕ್ಕಾಗಿ ಎಂದು ಅದು ಹೇಳಿದೆ. ಈ 'ಕಥನ'ಕ್ಕೆ ಎದುರಾಗಿ ಬಿಎಲ್‌ಒಗಳ 'ಸ್ವೀಕೃತಿ' ಪತ್ರಗಳನ್ನು ಆಗಸ್ಟ್ 25ರಂದು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಲಾಗಿದೆ ಎಂದು ಅದು ಹೇಳಿದೆ.

ಆಕ್ಷೇಪಣೆಗಳನ್ನು ಸಲ್ಲಿಸುವ ಗಡುವನ್ನು ಸಪ್ಟಂಬರ್ 15ಕ್ಕೆ ವಿಸ್ತರಿಸಬೇಕೆಂದು, ಈ ಮೂಲಕ ಪಟ್ಟಿಯಿಂದ ಕೈಬಿಡಲಾದ ಮತದಾರರಿಗೆ ಮತ್ತು ಪ್ರವಾಹ ಪೀಡಿತರಿಗೆ, ತಮ್ಮನ್ನು ಸೇರಿಸುವಂತೆ ಅರ್ಜಿ ಸಲ್ಲಿಸಲು ಹೆಚ್ಚಿನ ಕಾಲಾವಕಾಶ ಕೊಡಬೇಕು ಎಂಬ ಕೋರಿಕೆಯನ್ನು ಆರ್‌ಜೆಡಿ ಮತ್ತು ಸಿಪಿಐ(ಎಂಎಲ್) ಲಿಬರೇಷನ್ ಆಗಸ್ಟ್ 29ರಂದು ಸಲ್ಲಿಸಿದಾಗ ನ್ಯಾಯಪೀಠ, ಅದನ್ನು ಕೇಳಿಸಿಕೊಳ್ಳಲು ಒಪ್ಪಿ ಸಪ್ಟಂಬರ್ 1ರಂದು ವಿಚಾರಣೆಯನ್ನು ನಡೆಸಿತು.

ಈ ವಿಚಾರಣೆಯ ವೇಳೆಯಲ್ಲೂ ಚುನಾವಣಾ ಆಯೋಗದ ವಕೀಲರು, ರಾಜಕೀಯ ಪಕ್ಷಗಳು ಹೆಸರುಗಳ ಸೇರ್ಪಡೆಯ ದಾವೆಗಳನ್ನು ಸಲ್ಲಿಸುತ್ತಿಲ್ಲ, ತೆಗೆದು ಹಾಕುವ ಅರ್ಜಿಗಳನ್ನೇ ಕೊಡುತ್ತಿದ್ದಾರೆ, ಇದು ವಿಚಿತ್ರ ಎಂದು ಆಯೋಗದ 'ಕಥನ'ವನ್ನೇ ಪುನರುಚ್ಚರಿಸಿದರು. ಅತ್ತ ಅರ್ಜಿದಾರರ ವಕೀಲರುಗಳು ಆಯೋಗದ ಅಧಿಕಾರಿಗಳು ತಮ್ಮದೇ ಕೈಪಿಡಿಗಳನ್ನು ಅನುಸರಿಸುತ್ತಿಲ್ಲ, ಬ್ಲಾಕ್‌ಮಟ್ಟದ ಅಧಿಕಾರಿಗಳು ಫಾರ್ಮ್ ಗಳನ್ನು ಸ್ವೀಕರಿಸಲು ನಿರಾಕರಿಸುತ್ತಿದ್ದಾರೆ ಎಂದರು.

ಈ ನಡುವೆ, ಚುನಾವಣಾ ಆಯೋಗ ಸಪ್ಟಂಬರ್1ರಂದು ಆಕ್ಷೇಪಣೆಗಳನ್ನು/ತಿದ್ದುಪಡಿ ಅರ್ಜಿಗಳನ್ನು ಪರಿಗಣನೆಗೆ ತಗೊಳ್ಳುವುದಾಗಿ ಹೇಳಿರುವುದಾಗಿ ನ್ಯಾಯಪೀಠ ಹೇಳಿತು.

"ಸಮಯ ವಿಸ್ತರಣೆಗೆ ಸಂಬಂಧಿಸಿದಂತೆ, ಸೆಪ್ಟೆಂಬರ್ 1 ರ ನಂತರ ದಾವೆಗಳು/ಆಕ್ಷೇಪಣೆಗಳು ಅಥವಾ ತಿದ್ದುಪಡಿಗಳನ್ನು ಸಲ್ಲಿಸುವುದನ್ನು ತಡೆಯಲಾಗುವುದಿಲ್ಲ ಎಂದು ಚುನಾವಣಾ ಆಯೋಗ ಸಲ್ಲಿಸಿದ ಟಿಪ್ಪಣಿ ಹೇಳುತ್ತದೆ. ದಾವೆಗಳು/ಆಕ್ಷೇಪಣೆಗಳು/ತಿದ್ದುಪಡಿಗಳನ್ನು ಗಡುವಿನ ನಂತರವೂ, ಅಂದರೆ ಸೆಪ್ಟೆಂಬರ್ 1 ರ ನಂತರವೂ ಸಲ್ಲಿಸಬಹುದು ಮತ್ತು ಪಟ್ಟಿಯನ್ನು ಅಂತಿಮಗೊಳಿಸಿದ ನಂತರವೂ ಅದನ್ನು ಪರಿಗಣಿಸಲಾಗುತ್ತದೆ ಎಂದು ಹೇಳಲಾಗಿದೆ. ನಾಮಪತ್ರಗಳ ಕೊನೆಯ ದಿನಾಂಕದವರೆಗೆ ಮತ್ತು ಎಲ್ಲಾ ಸೇರ್ಪಡೆಗಳು/ತೆಗೆಯುವುದನ್ನು ಅಂತಿಮ ಪಟ್ಟಿಯಲ್ಲಿ ಸಂಯೋಜಿಸುವವರೆಗೆ ಪ್ರಕ್ರಿಯೆಯು ಮುಂದುವರಿಯುತ್ತದೆ. ಈ ನಿಲುವಿನ ಬೆಳಕಿನಲ್ಲಿ, ದಾವೆಗಳು/ಆಕ್ಷೇಪಣೆಗಳು/ತಿದ್ದುಪಡಿಗಳನ್ನು ಸಲ್ಲಿಸುವುದನ್ನು ಮುಂದುವರಿಸಲಿ. ಏತನ್ಮಧ್ಯೆ, ರಾಜಕೀಯ ಪಕ್ಷಗಳು/ಅರ್ಜಿದಾರರು ಟಿಪ್ಪಣಿಗೆ ಪ್ರತಿಕ್ರಿಯೆಯಾಗಿ ತಮ್ಮ ಅಫಿಡವಿಟ್‌ಗಳನ್ನು ಸಲ್ಲಿಸಬಹುದು" ಎಂದು ನ್ಯಾಯಪೀಠ ಹೇಳಿರುವುದಾಗಿ ವರದಿಯಾಗಿದೆ.

ಜತೆಗೆ, ಬಿಹಾರ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರು ಸೆಪ್ಟೆಂಬರ್ 2 ರ ಮಧ್ಯಾಹ್ನದೊಳಗೆ ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಿಗೆ ಅರೆ–ಕಾನೂನು ಸ್ವಯಂಸೇವಕರ ಹೆಸರುಗಳು ಮತ್ತು ಮೊಬೈಲ್ ಸಂಖ್ಯೆಗಳೊಂದಿಗೆ ಅವರನ್ನು ನಿಯೋಜಿಸಲು ಅಥವಾ ಅವರಿಗೆ ತಿಳಿಸಲು ಸೂಚನೆಗಳನ್ನು ನೀಡಬೇಕು, ಅವರು ದಾವೆಗಳು, ಆಕ್ಷೇಪಣೆಗಳು ಅಥವಾ ತಿದ್ದುಪಡಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಮತದಾರರಿಗೆ ವೈಯಕ್ತಿಕವಾಗಿ ಮತ್ತು ರಾಜಕೀಯ ಪಕ್ಷಗಳಿಗೆ ಸಹಾಯ ಮಾಡಬಹುದು ಎಂದೂ ಸುಪ್ರೀಂ ಕೋರ್ಟ್ ವಿನಂತಿಸಿದೆ.

ಸಪ್ಟಂಬರ್ 8ರಂದು ವಿಚಾರಣೆ ಮುಂದುವರೆಯುತ್ತದೆ ಎಂದೂ ಹೇಳಲಾಗಿದೆ.

ರಷ್ಯಾದಿಂದ ರಿಯಾಯಿತಿ ದರದ ಕಚ್ಚಾ ತೈಲ.....

ಪುಟ 9 ರಿಂದ

ಲಕ್ಷ ಕೋಟಿಗಳಿಗೂ ಹೆಚ್ಚು ಕೊಡುಗೆ ನೀಡಿದೆ. ಈ ಆದಾಯವು ಪ್ರಾಥಮಿಕವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ ವಿಧಿಸುವ ಅಬಕಾರಿ ಸುಂಕ ಮತ್ತು ವ್ಯಾಟ್ ಹಾಗೂ ಇತರ ಸೆಸ್‌ಗಳಿಂದ ಬರುತ್ತದೆ. ಕರ್ನಾಟಕ ಸರ್ಕಾರವು ಪೆಟ್ರೋಲ್‌ಗೆ ಶೇ. 29.84 ಮತ್ತು ಡೀಸೆಲ್‌ಗೆ ಶೇ. 21.17ರಷ್ಟು ಮಾರಾಟ ತೆರಿಗೆ ವಿಧಿಸುತ್ತಿದೆ. (ಫೆ. 13, 2025ರಂದು ಸಂಸತ್ತಿನಲ್ಲಿ ಕೊಟ್ಟ ಮಾಹಿತಿ). ಮೂಲ ಬೆಲೆಗಳು ಹೆಚ್ಚಾದಾಗ ರಾಜ್ಯಗಳು ವಿಧಿಸುವ ತೆರಿಗೆಗಳು ಸ್ವಯಂಚಾಲಿತವಾಗಿ ಏರುತ್ತದೆ.

ಸ್ಥಿರವಾದ ತೆರಿಗೆ ಆದಾಯಕ್ಕಾಗಿ ಹೆಚ್ಚಿನ ಬೆಲೆಗಳನ್ನು ಬಯಸುತ್ತವೆ

ಸರ್ಕಾರವು 'ತೈಲ ನಿಯಂತ್ರಣವನ್ನು ಮುಕ್ತಗೊಳಿಸಲಾಗಿದೆ' ಎಂದು ಹೇಳಿದರೂ ಅದು ಕಾಗದದಲ್ಲಿ ಮಾತ್ರ. ಸರ್ಕಾರದಿಂದಲೇ ಚಿಲ್ಲರೆ ಬೆಲೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತದೆ. ಸರ್ಕಾರಗಳು ಸ್ಥಿರವಾದ ತೆರಿಗೆ ಆದಾಯ ಪಡೆಯಲು ಹೆಚ್ಚಿನ ಬೆಲೆಗಳನ್ನು ಬಯಸುತ್ತವೆ. ಕಡಿಮೆ–ವೆಚ್ಚದ ಕಚ್ಚಾ ತೈಲ ಆಮದುಗಳು ಕಂಪನಿಗಳು ಮತ್ತು ಸರ್ಕಾರಗಳಿಗೆ ಪ್ರಯೋಜನವನ್ನು ನೀಡುತ್ತವೆ ಆದರೆ ಗ್ರಾಹಕರು ನಿರಂತರವಾಗಿ ಹೆಚ್ಚಿನ ಬೆಲೆಗಳನ್ನು ಭರಿಸುತ್ತಾರೆ. ಅಗ್ಗದ ರಷ್ಯಾದ ತೈಲವು 'ಭಾರತದ ಹಿತಾಸಕ್ತಿ'ಗಾಗಿ ಎನ್ನುದಾದರೆ, ಭಾರತದ ಗ್ರಾಹಕರು ಅದರ ಲಾಭದಲ್ಲಿ ಏಕೆ ಹಂಚಿಕೊಳ್ಳುವುದಿಲ್ಲ? ಲಾಭಗಳು ಮನೆಯ ಬಜೆಟ್‌ಗಳಲ್ಲಿ ಅಲ್ಲ, ಕಾರ್ಪೊರೇಟ್ ಬ್ಯಾಲೆನ್ಸ್ ಶೀಟ್‌ಗಳು ಮತ್ತು ಸರ್ಕಾರಿ ಆದಾಯದ ಹರಿವುಗಳಲ್ಲಿ ಕೇಂದ್ರೀಕೃತವಾಗಿವೆ.

ಗ್ರಾಹಕರಿಗೆ ನಿಜವಾದ ಪರಿಹಾರವಾಗಿ ಪರಿವರ್ತಿಸಬೇಕು

ರಷ್ಯಾದ ಕಚ್ಚಾ ತೈಲದ ಅನಿರೀಕ್ಷಿತ ಲಾಭವು OMC ಗಳಿಗೆ ಲಾಭದ ಕುಶನ್ ಆಗಿದ್ದರೆ, ಸರ್ಕಾರಗಳಿಗೆ ಹಣಕಾಸಿನ ಜೀವನಾಡಿಯಾಗಿದೆ. ತೈಲ ಮಾರುಕಟ್ಟೆ ಕಂಪನಿಗಳು, ವಿಶೇಷವಾಗಿ ಖಾಸಗಿ ಸಂಸ್ಕರಣಾಗಾರರು, ತಮ್ಮ ಲಾಭವನ್ನು ಕಡಿಮೆ ಮಾಡಿಕೊಳ್ಳಬೇಕು ಮತ್ತು ಸರ್ಕಾರಗಳು ದಂಡನಾತ್ಮಕ ಇಂಧನ ತೆರಿಗೆಗಳನ್ನು ಮರುಪರಿಶೀಲಿಸಬೇಕು ಎಂದು ಒತ್ತಾಯಿಸುವ ಸಮಯ ಇದು. ಅಗ್ಗದ ತೈಲವು ಇನ್ನು ಮುಂದೆ ಕಾರ್ಪೊರೇಟ್ ಲಾಭಗಳು ಮತ್ತು ಸಾರ್ವಜನಿಕ ಖಜಾನೆಗಳಲ್ಲಿ ಸಿಲುಕಿಕೊಳ್ಳಬಾರದು. ಇದು ಕಡಿಮೆ ಪಂಪ್ ಬೆಲೆಗಳಾಗಿ ಮತ್ತು ರಿಯಾಯಿತಿ ದರದ ಕಚ್ಚಾ ತೈಲದ ಯುಗದ ಹೊರತಾಗಿಯೂ ಹೆಚ್ಚಿನ ಇಂಧನ ವೆಚ್ಚದ ಹೊರೆಯನ್ನು ದೀರ್ಘಕಾಲದಿಂದ ಭರಿಸುತ್ತಿರುವ ಭಾರತದ ಗ್ರಾಹಕರಿಗೆ ನಿಜವಾದ ಪರಿಹಾರವಾಗಿ ಪರಿವರ್ತಿಸಬೇಕು.

(ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ)

ಉಮರ್ ಖಾಲಿದ್ ಸೇರಿದಂತೆ 9 ಮಂದಿಗೆ ಮತ್ತೆ ದೆಹಲಿ ಹೈಕೋರ್ಟ್ ಜಾಮೀನು ನಿರಾಕರಣೆ ನ್ಯಾಯದ ಅಣಕ :ಸಿಪಿಐ(ಎಂ) ಪೊಲಿಟ್‌ಬ್ಯರೊ

ಉಮರ್ ಖಾಲಿದ್, ಶಾರ್ಜೀಲ್ ಇಮಾಮ್ ಮತ್ತು ಇತರ 7 ಜನರಿಗೆ ದೆಹಲಿ ಹೈಕೋರ್ಟ್ ಜಾಮೀನು ನಿರಾಕರಿಸಿರುವುದು ಶೋಚನೀಯ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಬೇಸರ ವ್ಯಕ್ತಪಡಿಸಿದೆ. ಫೆಬ್ರವರಿ 2020ರಲ್ಲಿ ದೆಹಲಿಯಲ್ಲಿ ನಡೆದ ಕೋಮು ಗಲಭೆಯ ಹಿಂದೆ ಇದೆಯೆಂದು ಆರೋಪಿಸಲಾಗಿರುವ "ಪಿತೂರಿ"ಗೆ ಸಂಬಂಧಿಸಿ ಅವರೆಲ್ಲರೂ ಐದು ವರ್ಷಗಳಿಗೂ ಹೆಚ್ಚು ಕಾಲ ಯುಎಪಿಎ ಅಡಿಯಲ್ಲಿ ಬಂಧನದಲ್ಲಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸುತ್ತಿರುವುದು ಇದು ಐದನೇ ಬಾರಿ. ಕಳೆದ ಐದು ವರ್ಷಗಳಿಂದ ಅವರ ವಿರುದ್ಧದ ಆರೋಪಗಳನ್ನು ಸಹ ರೂಪಿಸದಿರುವುದು ಇನ್ನಷ್ಟು ಕಳವಳಕಾರಿಯಾಗಿದೆ. ದೆಹಲಿ ಹೈಕೋರ್ಟ್‌ನ ನಿರ್ಧಾರ ನ್ಯಾಯದ ಒಂದು ಅಣಕ ಮತ್ತು "ಜಾಮೀನು ನೀಡುವುದು ನಿಯಮ ಮತ್ತು ನಿರಾಕರಣೆ ಅಪವಾದ" ಎಂಬ ತತ್ವದ ನಿರಾಕರಣೆಯಾಗುತ್ತದೆ ಎಂದು ಅದು ಹೇಳಿದೆ.

ಈ 9 ಯುವಜನರು ಐದು ವರ್ಷಗಳಿಗೂ ಹೆಚ್ಚು ಕಾಲ ಯಾವುದೇ ಅಪರಾಧ ಸಾಬೀತಾಗದೆ ಮತ್ತು ಯಾವುದೇ ಪುರಾವೆಗಳಿಲ್ಲದೆ ಜೈಲಿನಲ್ಲಿ ಕೊಳೆಯುತ್ತಿರುವಾಗ, ವಾಸ್ತವವಾಗಿ ಅವೇ ದೆಹಲಿ ಕೋಮು ಗಲಭೆಗಳಿಗೆ ತಮ್ಮ ಕಿಡಿಕಾರುವ ಭಾಷಣಗಳಿಂದ ಇಂಧನ ಸುರಿದ ಕಪಿಲ್ ಮಿಶ್ರಾ ಮತ್ತು ಅನುರಾಗ್ ಠಾಕೂರ್‌ರಂತಹ ಬಿಜೆಪಿ ನಾಯಕರು ಯಾವುದೇ ಶಿಕ್ಷೆಯಿಲ್ಲದೆ ಮುಕ್ತವಾಗಿ ಓಡಾಡುತ್ತಿದ್ದಾರೆ ಎಂಬುದನ್ನು ಇಲ್ಲಿ ಗಮನಿಸುವುದು ಸೂಕ್ತವಾಗಿದೆ ಎಂದಿರುವ ಪೊಲಿಟ್‌ಬ್ಯುರೊ, ಮಾಲೇಗಾಂವ್ ಬಾಂಬ್ ಸ್ಫೋಟದ ಆರೋಪಿಗಳಾದ ಪ್ರಜ್ಞಾ ಸಿಂಗ್ ಠಾಕೂರ್, ಕರ್ನಲ್ ಪ್ರಸಾದ್ ಪುರೋಹಿತ್ ಮತ್ತು ಇತರರನ್ನು ಖುಲಾಸೆಗೊಳಿಸಲಾಗಿದ್ದರೂ, ಉಮರ್ ಖಾಲಿದ್, ಶಾರ್ಜೀಲ್ ಇಮಾಮ್ ಮತ್ತು ಇತರರನ್ನು ಐದು ವರ್ಷಗಳಿಗೂ ಹೆಚ್ಚು ಕಾಲ ಜೈಲಿನಲ್ಲಿ ಕೊಳೆಯುವಂತೆ ಮಾಡಲಾಗಿದೆ ಎಂಬುದು ಗಂಭೀರ ನ್ಯಾಯಿಕ ವಿರೋಧಾಭಾಸವಾಗಿದೆ ಎಂದು ಹೇಳಿದೆ.

ಸಾವರ್ಕರ್: ಕಟ್ಟುಕತೆ ಮತ್ತು ವಾಸ್ತವ...

...ಪುಟ 10 ರಿಂದ

ಸಿದ್ಧಾಂತವನ್ನು ಹಾಗೂ ರಾಷ್ಟ್ರೀಯತೆಯನ್ನು ಬಲಿಕೊಡಲು ಸಿದ್ಧರಾಗಿದ್ದರು. ಅಲ್ಲಿ ಸೆರೆಯಾಗಿದ್ದ ನೂರಾರು ಸ್ವಾತಂತ್ರ್ಯ ಹೋರಾಟಗಾರರು ಯಾರೂ ಹಾಗೆ ತಮ್ಮತನವನ್ನು ಕಳೆದುಕೊಳ್ಳಲಿಲ್ಲ, ತಮ್ಮ ಸಿದ್ಧಾಂತ ಹಾಗೂ ಸ್ವಾಭಿಮಾನವನ್ನು ಬಲಿಕೊಡಲಿಲ್ಲ. ಅಂಥವರಲ್ಲಿ ನಮ್ಮ ಹುತಾತ್ಮ ಭಗತ್ ಸಿಂಗ್ ಎಲ್ಲಾ ವೀರೋಚಿತ ಚಳವಳಿಗಾರರಲ್ಲಿ ಮೇರುವ್ಯಕ್ತಿತ್ವ ಹೊಂದಿದ್ದರು. ಭಗತ್ ಸಿಂಗ್ ಕೂಡ ಬ್ರಿಟಿಷರ ಕ್ರೌರ್ಯದ ವಿರುದ್ಧ ಹಿಂಸಾತ್ಮಕ ಪ್ರತಿಭಟನೆಯನ್ನು ಆರಿಸಿಕೊಂಡಿದ್ದರು. ತಮ್ಮ ಸಂಗಾತಿಗಳ ಜತೆ ಭಗತ್ ಸಿಂಗ್ ಕೂಡ ಬಂಧನಕ್ಕೊಳಗಾಗಿ ಜೈಲು ಸೇರಿದ್ದರು. ಆದರೆ ಭಗತ್ ಸಿಂಗ್ ಯಾವಾಗಲೂ ಶೋಷಿತ ಜನರ ಪರವಾಗಿ ಬ್ರಿಟಿಷರ ವಿರುದ್ಧ ಸೆಣಸಾಡಿದವರಾಗಿದ್ದರು. ಅವರು ಕೂಡ ಹಲವಾರು ಪುಸ್ತಕಗಳನ್ನು ಬರೆದರು, ಕರಪತ್ರಗಳನ್ನು ಸಿದ್ಧಪಡಿಸಿದ್ದರು ಹಾಗೂ ಲೇಖನಗಳನ್ನು ಪ್ರಕಟಿಸಿದ್ದರು. ಆದರೆ ಭಗತ್ ಸಿಂಗ್ ಎಂದೂ ದಯಾಭಿಕ್ಷೆ ಬೇಡಲಿಲ್ಲ ಜೈಲಿನಿಂದ ಬಿಡುಗಡೆ ಮಾಡಿ ಎಂದು ಗೋಗರೆಯಲಿಲ್ಲ. 1931 ರಲ್ಲಿ ತಮ್ಮ 23ನೇ ವಯಸ್ಸಿನಲ್ಲೇ ನೇಣುಗಂಬಕ್ಕೇರಿದರು.

ಹಿಂದುತ್ವ ಸಿದ್ಧಾಂತವಾದಿ ಉದಯಿಸಿದ

ಯೆರವಾಡಾ ಜೈಲು ಹಾಗೂ ರತ್ನಗಿರಿ ಜಿಲ್ಲೆಯಲ್ಲಿ ಇದ್ದ ಅವಧಿಯಲ್ಲಿ ಸಾವರ್ಕರ್ ಅವರು ಯಥೇಚ್ಛವಾಗಿ ನಾಟಕಗಳು, ಪ್ರಬಂಧಗಳು ಹಾಗೂ ಕವಿತೆಗಳನ್ನು ಬರೆದರು. ಆದರೆ ಬ್ರಿಟಿಷರನ್ನು ಈ ದೇಶದಿಂದ ಕಿತ್ತೊಗೆಯಬೇಕೆಂಬ ಮಹತ್ವಾಕಾಂಕ್ಷೆ ಮಾಯವಾಗಿತ್ತು, ಬ್ರಿಟಿಷ್ ದೊರೆಗಳ ಟೀಕೆ ಅವುಗಳಲ್ಲಿ ಇರಲಿಲ್ಲ. 1923ರಲ್ಲಿ 'ಹಿಂದುತ್ವ' ಎಂಬ ಅವರ ಪುಸ್ತಕ 'ಮರಾಠಾ' ಎಂಬ ಗುಪ್ತನಾಮದಲ್ಲಿ ಪ್ರಕಟವಾಯಿತು. ಹಿಂದೂವಾದ ಎನ್ನುವುದು ವಿದೇಶಿ ಪದ ಎಂದು ಹೇಳಿದ ಅವರು ಅದರಲ್ಲಿ ತಮ್ಮ ಹಿಂದುತ್ವ ಎಂಬ ಪದ ಬಳಸಿದರು ಮತ್ತು ಅದರಲ್ಲಿ ಸಾವರ್ಕರ್ ಅವರ ಮೂಲ ಚಿಂತನೆಗಳು ಮೂರ್ತರೂಪ ಪಡೆದವು. ಭಾರತೀಯ ಇತಿಹಾಸವು ಹಿಂದೂ ಮುಸ್ಲಿಮರ ನಡುವಿನ ದೀರ್ಘ ಸಮರ ಎಂದು ಅರ್ಥೈಸಿದರು. ಈ ಸಮರದ ಅವಧಿಯಲ್ಲಿ 'ನಮ್ಮ ಜನರು ತಮ್ಮನ್ನು ತಾವು ಹಿಂದೂಗಳು ಎಂಬ ಪ್ರಜ್ಞೆಯನ್ನು ತೀವ್ರಗೊಳಿಸಿಕೊಂಡರು ಮತ್ತು ನಮ್ಮ ಇತಿಹಾಸದಲ್ಲಿ ಎಂದೂ ತಿಳಿಯದಂತಹ ಒಂದು ದೇಶವಾಗಿ ಬೆರೆತರು' ಎಂದು ಸಾವರ್ಕರ್ ತಮ್ಮ ಚಿಂತನೆಯನ್ನು ಮುಂದಿಟ್ಟರು. ಅವರ ಯೂರೋಪಿಯನ್ ಉಗ್ರ ರಾಷ್ಟ್ರೀಯವಾದವು ತಾನೇ ತಾನಾಗಿ ಹಿಂದೂ ದೇಶವಾಗಿ ರೂಪ ಪಡೆದು ಪ್ರಕಟವಾಯಿತು.

ಹಿಂದೂಗಳು ಸಮಾನ ರಕ್ತಸಂಬಂಧಿಗಳಾಗಿ ಒಂದಾಗಿದ್ದಾರೆ ಮತ್ತು "ಹಿಂದೂಗಳು ಒಂದು ಸಮಾನ ಪಾರಂಪರಿಕ ಬಂಧನದಿಂದ ಒಂದುಗೂಡಿದ್ದಾರೆ, ನಮ್ಮ ಮಹಾನ್ ನಾಗರೀಕತೆಗೆ ನಾವು ವಂದಿಸುತ್ತೇವೆ, ಅದು ನಮ್ಮ ಸಂಸ್ಕೃತಿ" ಎಂದು ಅವರು ಪ್ರತಿಪಾದಿಸಿದರು. ಹಿಂದೂಗಳು ಮತ್ತು ಮುಸ್ಲಿಮರು ಎರಡು ದೇಶಗಳವರು ಮತ್ತು ಅವರು ಎಂದಿಗೂ ಒಂದಾಗಿ ಬದುಕಲು ಸಾಧ್ಯವಿಲ್ಲ, ಹಿಂದೂ ಅಸ್ಮಿತೆಯನ್ನು ಸಾಧಿಸಿಕೊಳ್ಳಲು ಮತ್ತು ಒಂದುಗೂಡುವ ಸಲುವಾಗಿ ನಿರ್ದಿಷ್ಟವಾಗಿ ಮುಸ್ಲಿಮರ ವಿರುದ್ಧ ಹಿಂಸೆಯನ್ನು ಕೂಡ ಅವರು ವೈಭವೀಕರಿಸಿದರು. ಈ ಪುಸ್ತಕವನ್ನು 1928ರಲ್ಲಿ "ಹಿಂದುತ್ವ, ಯಾರು ಹಿಂದೂ?" ಎಂದು ವಿಸ್ತರಿಸಿದರು ಮತ್ತು ಅದು ಆರ್‌ಎಸ್‌ಎಸ್ ಸಂಸ್ಥಾಪಕ ಕೆ.ಬಿ.ಹೆಡ್ಗೆವಾರ್ ಅವರನ್ನೂ ಒಳಗೊಂಡಂತೆ ಹಲವಾರು ಜನರಿಗೆ ಸೈದ್ಧಾಂತಿಕ ಸಂಪನ್ಮೂಲವಾಗಿ ಲಭ್ಯವಾಯಿತು.

ಆರ್‌ಎಸ್‌ಎಸ್‌ನ ಎರಡನೇ ಸರಸಂಘಚಾಲಕ ಎಂ.ಎಸ್.ಗೋಳ್ವಾಲ್ಕರ್ ಅವರು ತಮ್ಮ ಬರವಣಿಗೆಗಳಲ್ಲಿ ಈ ಚಿಂತನೆಗಳಿಂದ ಬಹಳವಾಗಿ ಬಳಸಿಕೊಂಡಿದ್ದಾರೆ. ರತ್ನಗಿರಿಯ ಮಿತಿಯೊಳಗೆ ಇರಬೇಕೆಂಬ ಸಾವರ್ಕರ್ ಅವರ ಮೇಲಿದ್ದ ಆದೇಶವನ್ನು 1937ರಲ್ಲಿ ಹಿಂತೆಗೆದುಕೊಳ್ಳಲಾಯಿತು. ಆಗ ಸಾವರ್ಕರ್ ಹಿಂದೂ ಮಹಾಸಭಾದ ಅಧ್ಯಕ್ಷರಾದರು. ಅವರ ಮಾರ್ಗದರ್ಶನದಲ್ಲಿ ಹಿಂದೂ ಮಹಾಸಭಾವು ಬ್ರಿಟಿಷರ ಬಗ್ಗೆ ಮೃದು ಧೋರಣೆಯನ್ನು ತಳೆಯಿತು; ಅವರನ್ನು ಮೆಚ್ಚಿಸಲು ಕೇಂದ್ರ ಪ್ರಾಂತಗಳಲ್ಲಿ ಮತ್ತು ಬಂಗಾಳದಲ್ಲಿ ಸರ್ಕಾರಗಳಲ್ಲಿ ಪಾಲ್ಗೊಂಡಿತು; ನಂತರದಲ್ಲಿ ಎರಡನೇ ವಿಶ್ವ ಮಹಾಸಮರದಲ್ಲಿ ಹೋರಾಡಲು ಬ್ರಿಟಿಷ್ ಸೈನ್ಯಕ್ಕೆ ಸೇರಿಕೊಳ್ಳಬೇಕೆಂದು ಹಿಂದೂಗಳನ್ನು ಪ್ರೋತ್ಸಾಹಿಸಲಾಯಿತು, ಹಾಗೆ ಸೇರಿಕೊಳ್ಳುವ ಮೂಲಕ ತೀರಾ ಅಗತ್ಯವಾಗಿದ್ದ ಶಸ್ತ್ರಾಸ್ತ್ರಗಳನ್ನು ಬಳಸಲು ತರಬೇತಿ ಸಿಗುತ್ತದೆ ಎಂಬ ನೆಪ ಹೇಳಲಾಯಿತು. 'ಭಾರತ ಬಿಟ್ಟು ತೊಲಗಿ' ಚಳವಳಿಯಲ್ಲಿ ಹಿಂದೂ ಮಹಾಸಭಾ ಭಾಗವಹಿಸದಂತೆ ಖಾತ್ರಿಪಡಿಸಲಾಯಿತು. ಆ ಮೂಲಕ ಬ್ರಿಟಿಷರು ಚಳವಳಿಯನ್ನು ಬಗ್ಗುಬಡಿಯಲು ಸಹಾಯವಾಯಿತು. ಭಾರತ ಬಿಟ್ಟು ತೊಲಗಿ ಚಳವಳಿಯ ಸಮಯದಲ್ಲಿ ಹಿಂದೂ ಮಹಾಸಭಾದ ಶ್ಯಾಮ ಪ್ರಸಾದ್ ಮುಖರ್ಜಿ ಬಂಗಾಳದಲ್ಲಿ ಮುಸ್ಲಿಂ ಲೀಗಿನ ಫಜಲುಲ್ ಹಕ್ ಅವರ ಸಂಪುಟದಲ್ಲಿ ಸಚಿವರಾಗಿದ್ದರು. (ನಂತರದಲ್ಲಿ ಭಾರತೀಯ ಜನಸಂಘವನ್ನು ಸ್ಥಾಪಿಸಿದವರು ಇದೇ ಶ್ಯಾಮಪ್ರಸಾದ ಮುಖರ್ಜಿಯವರು.) ವಾಯುವ್ಯ ಗಡಿ ಪ್ರಾಂತ ಮತ್ತು ಸಿಂಧ್ ಪ್ರಾಂತದಲ್ಲಿ ಕೂಡ ಹಿಂದೂ ಮಹಾಸಭಾ ಮುಸ್ಲಿಂ ಲೀಗಿನೊಂದಿಗೆ ಸರ್ಕಾರ ಮಾಡಿತ್ತು. ಈ ಸಾವರ್ಕರ್ ಈಗ ನೂತನ ಸಾವರ್ಕರ್ ಆಗಿದ್ದರು: ಒಬ್ಬ ಹಿಂದುತ್ವ ಮತಾಂಧ ಹಾಗೂ ಒಬ್ಬ ಬ್ರಿಟಿಷ್ ಸಹಯೋಗಿ.

ಮಹಾತ್ಮಾ ಗಾಂಧಿ ಹತ್ಯೆ

19048ರಲ್ಲಿ ಮಹಾತ್ಮಾ ಗಾಂಧಿ ಹತ್ಯೆಯ ಪಿತೂರಿಯಲ್ಲಿ ಭಾಗಿಗಳಾಗಿದ್ದರು ಎಂಬ ಆರೋಪದ ಮೇಲೆ ಸಾವರ್ಕರ್ ಅವರನ್ನು ಬಂಧಿಸಲಾಯಿತು. ಆಗಿನ ಭಾರತ ಸರ್ಕಾರದ ಗೃಹ ಸಚಿವರಾಗಿದ್ದ ಸರ್ದಾರ್ ವಲ್ಲಭ ಭಾಯ್ ಪಟೇಲ್ ಅವರು ಪ್ರಧಾನಿ ನೆಹರೂ ಅವರಿಗೆ ಹೀಗೆ ಬರೆದಿದ್ದರು: "ಸಾವರ್ಕರ್ ಅವರ ನೇರ ನೇತೃತ್ವದಲ್ಲಿರುವ ಹಿಂದೂ ಮಹಾಸಭಾದ ಮತಾಂಧ ಅಂಗವಾಗಿರುವವರ ಪಿತೂರಿ ಇದನ್ನು ಆಗುವಂತೆ ನೋಡಿಕೊಂಡಿತು." (ದುರ್ಗಾ ದಾಸ್, ಸರ್ದಾರ್ ಪಟೇಲ್ ಕರೆಸ್ಪಾಂಡೆನ್ಸ್, 1945–50, ಸಂಪುಟ 6, ಪುಟ 56)

ನಂತರ, ಪಟೇಲ್ ಅವರು ಶ್ಯಾಮ ಪ್ರಸಾದ್ ಮುಖರ್ಜಿಗೆ ಬರೆದರು, "ದುರಂತ ಸಂಭವಿಸಿದಾಗ ಮಹಾಸಭಾದ ಸಾಕಷ್ಟು ಸಂಖ್ಯೆಯ ಸದಸ್ಯರು ಹಿರಿ ಹಿರಿ ಹಿಗ್ಗಿ ಸಿಹಿ ಹಂಚಿದ ಸಂಗತಿಯತ್ತ ನಾವು ಕಣ್ಣು ಮುಚ್ಚಿ ಕುಳಿತುಕೊಳ್ಳಲು ಸಾಧ್ಯವಿಲ್ಲ"

ಮುಂದುವರಿದು, ಕೆಲವೇ ತಿಂಗಳುಗಳ ಹಿಂದೆ ಮಹಾಸಭಾದ ವಕ್ತಾರರಾದ ಮಹಂತ್ ದಿಗ್ವಿಜಯ್ ನಾಥ್, ಪ್ರೊ.ರಾಮ್ ಸಿಂಗ್ ಮತ್ತು ದೇಶಪಾಂಡೆಯಂಥವರು ಬೋಧಿಸಿದ ಉಗ್ರ ಕೋಮುವಾದವನ್ನು ಸಾರ್ವಜನಿಕ ಸುರಕ್ಷತೆಗೆ ಅಪಾಯ ಎಂದು ಪರಿಗಣಿಸದೆ ಇರಲು ಸಾಧ್ಯವಿಲ್ಲ."

ಗುಟ್ಟು ಗುಟ್ಟಾಗಿ ಮಿಲಿಟರಿ ಅಥವಾ ಅರೆ ಮಿಲಿಟರಿ ತರಬೇತಿಯನ್ನು ನೀಡುತ್ತಿರುವ ಸಂಘವೊಂದರಲ್ಲಿ ಅಂತರ್ಗತವಾಗಿರುವ ಹೆಚ್ಚುವರಿ ಅಪಾಯದೊಂದಿಗೆ ಇದು ಆರ್‌ಎಸ್‌ಎಸ್‌ಗೂ ಅನ್ವಯಿಸುತ್ತದೆ." (ಅದೇ ಪುಸ್ತಕದ ಸಂಪುಟ 6, ಪುಟ 66)

ಅಂದಿನ ಬಾಂಬೆಯ ಮುಖ್ಯ ಮಂತ್ರಿ ಬಿ.ಜಿ.ಖೇರ್ ಅವರು ಮಹಾರಾಷ್ಟ್ರದ ಕುರಿತು ಹೇಳುತ್ತಾ ಪಟೇಲರಿಗೆ ಹೀಗೆ ಬರೆದರು: "ಕಾಂಗ್ರೆಸ್ ಹಾಗೂ ಮಹಾತ್ಮಾ ಅವರ ವಿರುದ್ಧ ಹಿಂದೂ ಮಹಾಸಭಾವು ಸೃಷ್ಟಿಸಿದ ದ್ವೇಷದ ವಾತಾವರಣವು ಕೆಲವು ಮಹಾರಾಷ್ಟ್ರದವರ ಕೈಯಲ್ಲಿ ಮಹಾತ್ಮಾ ಗಾಂಧಿಯವರ ಹತ್ಯೆಯಲ್ಲಿ ಪರ್ಯವಸಾನವಾಯಿತು." (ಅದೇ ಪುಸ್ತಕ ಸಂಪುಟ 6, ಪುಟ 77–78)

ಗಾಂಧಿಯವರ ಹತ್ಯೆ ಪ್ರಕರಣದ ವಿಚಾರಣೆಯಲ್ಲಿ ಅನುಮೋದಕನ ಸಾಕ್ಷ್ಯವನ್ನು ದೃಢೀಕರಿಸಲು ಸ್ವತಂತ್ರ ಸಾಕ್ಷಿಯ ಕೊರತೆಯಿಂದಾಗಿ ಸಾವರ್ಕರ್ ಅವರಿಗೆ ಶಿಕ್ಷೆಯಾಗಲಿಲ್ಲ. ಆದರೆ 1965ರಲ್ಲಿ ನ್ಯಾಯಮೂರ್ತಿ ಜೀವನ್ ಲಾಲ್ ಕಪೂರ್ ಅವರ ಅಡಿಯಲ್ಲಿ ನೇಮಿಸಲಾದ ತನಿಖಾ ಆಯೋಗದಲ್ಲಿ ಸಾವರ್ಕರ್ ಅವರ ತೀರಾ ಹತ್ತಿರದ ಸಹಚರರಾದ ಎ.ಪಿ.ಕಸಾರ್ ಮತ್ತು ಜಿ.ವಿ.ದಾಂಬ್ಲೆ ಮುಂಚಿನ ವಿಚಾರಣೆಯಲ್ಲಿ ಸಾಕ್ಷ್ಯ ನುಡಿಯಲಾಗದವರು ಸಾಕ್ಷ್ಯ ನುಡಿದರು. ಅನುಮೋದಕರ ಹೇಳಿಕೆಗಳನ್ನು ದೃಢೀಕರಿಸಿದರು. ಆ ಆಯೋಗವು ಸರ್ದಾರ್ ಪಟೇಲ್ ಅವರ ರೀತಿಯಲ್ಲಿಯೇ ತೀರ್ಮಾನಕ್ಕೆ ಬಂದಿತು: "ಈ ಎಲ್ಲಾ ಸಂಗತಿಗಳನ್ನು ಒಟ್ಟಿಗೆ ತೆಗೆದುಕೊಂಡಾಗ ಸಾವರ್ಕರ್ ಮತ್ತು ಅವರ ಗುಂಪು ಹತ್ಯೆಮಾಡಲು ಪಿತೂರಿ ಮಾಡಿದರು ಎಂಬ ವಾದವಲ್ಲದೇ ಬೇರೆಲ್ಲವೂ ಖಂಡನಾರ್ಹವಾದವು." (ಮಹಾತ್ಮಾ ಗಾಂಧಿಯವರ ಹತ್ಯೆಮಾಡಲು ಪಿತೂರಿಯ ಕುರಿತ ತನಿಖಾ ಆಯೋಗದ ವರದಿ, 1970, ಪುಟ 303, ಪ್ಯಾರಾ 25.106)

(ಕನ್ನಡಕ್ಕೆ: ಟಿ.ಸುರೇಂದ್ರ ರಾವ್)

ಮೈಕ್ರೊಫೈನಾನ್ಸ್ ಮತ್ತು ಬಂಡವಾಳಶಾಹಿಯನ್ನು ಸ್ಥಿರೀಕರಿಸಬಹುದೆಂಬ ಹುಚ್ಚು ಕಲ್ಪನೆ...

ಪುಟ 13 ರಿಂದ

ಹೀಗಾಗಿ, ಬಂಡವಾಳಶಾಹಿ ವ್ಯವಸ್ಥೆಯೊಳಗಿನ ಸಾಮೂಹಿಕ ಬಡತನಕ್ಕೆ ಪರಿಹಾರವಾಗಬೇಕಿದ್ದ ಮೈಕ್ರೋಕ್ರೆಡಿಟ್ ಅಥವ ಕಿರುಸಾಲ, ಮಹಿಳೆಯರು ಸೇರಿದಂತೆ ಜನರನ್ನು ಇನ್ನೂ ಹೆಚ್ಚಿನ ಬಡತನಕ್ಕೆ ತಳ್ಳುವ ಒಂದು ಸಾಧನವಾಗುತ್ತದೆ.

ಏಕೆ ಈ ಪಾತ್ರ ಬದಲಾವಣೆ?

ವಿಪರ್ಯಾಸವೆಂದರೆ, ಬಂಡವಾಳಶಾಹಿ ವ್ಯವಸ್ಥೆಯೊಳಗೆ ಬಡತನವನ್ನು ನಿವಾರಿಸುವುದರ ಬದಲು ಅದನ್ನು ಹೆಚ್ಚಿಸುವ ಕಿರುಸಾಲವ್ಯವಸ್ಥೆಯ ಈ ಪಾತ್ರ ಬದಲಾವಣೆಯು ಬಂಡವಾಳಶಾಹಿಯ ಕಾರ್ಯವೈಖರಿಯಿಂದಾಗಿಯೇ ಸಂಭವಿಸುತ್ತದೆ. ಬಡತನ ನಿರ್ಮೂಲನೆಯ ಒಂದು ಸಾಧನವೆಂದು ಪರಿಗಣಿಸಲ್ಪಟ್ಟದ್ದನ್ನು ಬಡತನ ಹೆಚ್ಚಿಸುವ ಒಂದು ಸಾಧನವಾಗಿ ಪರಿವರ್ತಿಸುವ ಬಂಡವಾಳಶಾಹಿಯ ಕಾರ್ಯವೈಖರಿಯಲ್ಲಿ ಎರಡು ವಿಧಾನಗಳಿವೆ. ಮೊದಲನೆಯದು ಬಂಡವಾಳಶಾಹಿಯ ಕಾರ್ಯವೈಖರಿಯ ಸ್ಥೂಲ ಆರ್ಥಿಕ ಪರಿಣಾಮ. ಈ ಪರಿಣಾಮಗಳು ಅನೇಕ ವಿಧಾನಗಳ ಮೂಲಕ ಪ್ರಕಟಗೊಳ್ಳುತ್ತವೆ: ಖಾಸಗೀಕರಣದ ಮೂಲಕ – ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ವೆಚ್ಚಗಳು ಹೆಚ್ಚುವುದರಿಂದ ಕುಟುಂಬಗಳು ಸಾಲ ಮಾಡಬೇಕಾಗುತ್ತದೆ ಮತ್ತು ಈ ಸಾಲಗಳನ್ನು ಸುಲಭವಾಗಿ ಮರುಪಾವತಿಸುವುದು ಸಾಧ್ಯವಾಗುವುದಿಲ್ಲ; ಮತ್ತು, ಬಿಕ್ಕಟ್ಟಿನ ಮೂಲಕ – ವಸ್ತು ಉತ್ಪಾದಕ ವಲಯಗಳ ಸ್ಥಗಿತತೆಯಿಂದಾಗಿ ವ್ಯವಸ್ಥೆಯು ಅನಿವಾರ್ಯವಾಗಿ ತೊಂದರೆಗೊಳಗಾಗುತ್ತದೆ. ಅದರ ಪರಿಣಾಮವಾಗಿ ಉದ್ಯೋಗಾವಕಾಶಗಳು ಕಡಿಮೆಯಾಗುತ್ತವೆ. ಅದರ ಪರಿಣಾಮವಾಗಿ ಕುಟುಂಬಗಳ ವರಮಾನ ಇಳಿಯುತ್ತದೆ. ಆದ್ದರಿಂದ ಕುಟುಂಬಗಳು ಮತ್ತಷ್ಟು ಸಾಲಕ್ಕೆ ತಳ್ಳಲ್ಪಡುತ್ತವೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಬಂಡವಾಳಶಾಹಿಯಲ್ಲಿ ಅಂತರ್ಗತವಾಗಿರುವ ಬಡತನವನ್ನು ಹೆಚ್ಚಿಸುವ ಪ್ರವೃತ್ತಿಗೆ ಒಂದು ಪರ್ಯಾಯವಾಗಿ ಕಾರ್ಯನಿರ್ವಹಿಸುವುದೆಂದು ಭಾವಿಸಲಾದ ಮೈಕ್ರೋಕ್ರೆಡಿಟ್ ಅಥವ ಕಿರುಸಾಲ ವ್ಯವಸ್ಥೆಯು ಬಂಡವಾಳಶಾಹಿಯ ಈ ಪ್ರವೃತ್ತಿಯ ಕಾರ್ಯಾಚರಣೆಯೊಳಗೆ ಸಿಲುಕಿಕೊಳ್ಳುತ್ತದೆ ಮತ್ತು ಕಾಲಾನಂತರದಲ್ಲಿ ಬುಡಮೇಲಾಗುತ್ತದೆ, ಏಕೆಂದರೆ, ಈ ಪ್ರವೃತ್ತಿಯನ್ನು ಒಟ್ಟಾರೆ ಆರ್ಥಿಕ ಮಟ್ಟದಲ್ಲಿ ಅದು ತಡೆಯುವುದು ಸಾಧ್ಯವಿಲ್ಲ.


ಬಡತನ ನಿವಾರಣೆಯ ಮೂಲಕ ಬಂಡವಾಳಶಾಹಿ ವ್ಯವಸ್ಥೆಯನ್ನು ಸ್ಥಿರಗೊಳಿಸುತ್ತದೆ ಎಂದು ಭಾವಿಸಲಾದ ಈ ಕಿರುಸಾಲ ವ್ಯವಸ್ಥೆಯನ್ನು ಬಂಡವಾಳಶಾಹಿಯು ಹಾಳುಗೈಯ್ಯುವ ಎರಡನೆಯ ಮಾರ್ಗವೆಂದರೆ ಕಿರುಸಾಲ ವ್ಯವಸ್ಥೆಯೊಳಗೆ ಅದರ ಪ್ರವೇಶವೇ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಬಂಡವಾಳಶಾಹಿಯು ಕಿರುಸಾಲ ವ್ಯವಸ್ಥೆಯನ್ನು ಅದರ ಪಾಡಿಗೆ ಬಿಡುವುದಿಲ್ಲ. ಲಾಭಗಳಿಸುವ ಎಲ್ಲ ಅವಕಾಶಗಳನ್ನು ಮೂಸುವಂತೆಯೇ ಈ ಕಿರುಸಾಲ ವ್ಯವಸ್ಥೆಯನ್ನೂ ಅದು ಪ್ರವೇಶಿಸುತ್ತದೆ. ಪರಿಣಾಮವಾಗಿ, ಅಂಚಿನಲ್ಲಿರುವ ಕುಟುಂಬಗಳ ಮಹಿಳೆಯರ ಸ್ವ–ಸಹಾಯ ಗುಂಪುಗಳು ಕಡಿಮೆ ದರದ ಬಡ್ಡಿಯ ಮೇಲೆ ಸಾಂಸ್ಥಿಕ ಸಾಲವನ್ನು ಪಡೆಯುವುದರ ಬದಲು, ಬಂಡವಾಳಶಾಹಿಗಳಿಂದ ನಿಯಂತ್ರಿಸಲ್ಪಡುವ ಎನ್‌ಬಿಎಫ್‌ಸಿಗಳು(ಬ್ಯಾಂಕೇತರ ಹಣಕಾಸು ಸಂಸ್ಥೆಗಳು) ಮತ್ತು ಮೈಕ್ರೊಫೈನಾನ್ಸ್ ಸಂಸ್ಥೆಗಳು ಈ ಅಗ್ಗದ ಸಾಂಸ್ಥಿಕ ಸಾಲಗಳನ್ನು ಪಡೆಯುತ್ತವೆ ಮತ್ತು ಈ ರೀತಿಯಲ್ಲಿ ಪಡೆದ ಸಾಲಗಳನ್ನು ಅಂಚಿನಲ್ಲಿರುವ ಕುಟುಂಬಗಳಿಗೆ ನೀಡುವ ಸಾಲಗಳ ಮೇಲಿನ ಬಡ್ಡಿಯನ್ನು ಬಹು ದುಬಾರಿ ದರಗಳಲ್ಲಿ ವಿಧಿಸುವ ಮೂಲಕ ಅವು ಅಪಾರ ಲಾಭಗಳಿಸುತ್ತವೆ.

ಮಿಲಿಟರಿ ಉಪಕರಣಗಳ ತಯಾರಿಕೆಯೂ ಸೇರಿದಂತೆ, ಒಂದು ಚಿಲ್ಲರೆ ವ್ಯಾಪಾರದಿಂದ ಹಿಡಿದು ಹಣಕಾಸಿನ ಬೃಹತ್ ವ್ಯವಹಾರಗಳ ವರೆಗಿನ ಲಾಭಗಳಿಸುವ ಯಾವ ವಲಯವನ್ನೂ ಬಿಡದೆ ಪ್ರವೇಶಿಸುವ ಅವಕಾಶವನ್ನು ಆಘ್ರಾಣಿಸುವ ಪ್ರವೃತ್ತಿ ಹೊಂದಿರುವ ಬಂಡವಾಳವು ತನ್ನ ಒಳ ಕಾಯಿಲೆಗೆ ಮದ್ದು ತಯಾರಿಸುವ ಕಿರುಸಾಲ ವಲಯವನ್ನೂ ಬಿಡದೆ ಪ್ರವೇಶಿಸುತ್ತದೆ ಎಂಬುದು ಒಂದು ಆಶ್ಚರ್ಯದ ವಿಷಯವೇ ಅಲ್ಲ.

ಬಂಡವಾಳಶಾಹಿಯಲ್ಲಿ ಅಂತರ್ಗತವಾಗಿರುವ ಒಂದು ಧ್ರುವದಲ್ಲಿ ಸಂಪತ್ತನ್ನು ಮತ್ತೊಂದು ಧ್ರುವದಲ್ಲಿ ಬಡತನವನ್ನೂ ಸೃಷ್ಟಿಸುವ ಪ್ರವೃತ್ತಿಯನ್ನು ತಡೆದು ನಿಲ್ಲಿಸಬಹುದು ಮತ್ತು ಈ ರೀತಿಯಲ್ಲಿ ಈ ವ್ಯವಸ್ಥೆಯನ್ನು ಸ್ಥಿರೀಕರಿಸಬಹುದು ಎಂದು ನಂಬುವುದು ಒಂದು ಹುಚ್ಚು ಕಲ್ಪನೆಯಾಗುತ್ತದೆ. ಸಂಪತ್ತಿನ ಅಸಮಾನ ಹಂಚಿಕೆಯ ಪರಿಣಾಮಗಳನ್ನು ಎದುರಿಸಲು ಬಂಡವಾಳಶಾಹಿ ವ್ಯವಸ್ಥೆಯೊಳಗೆ ಕಿರುಸಾಲದಂತಹ ವ್ಯವಸ್ಥೆಗಳನ್ನು ರೂಪಿಸಬಹುದು ಎಂದು ನಂಬುವುದು ಒಂದು ಹುಚ್ಚು ಕಲ್ಪನೆಯಾಗುತ್ತದೆ. ಅಂತಹ ಎಲ್ಲಾ ನಂಬಿಕೆಗಳನ್ನೂ ಒಂದು ಹುಚ್ಚು ಕಲ್ಪನೆಯಾಗಿ ಪರಿವರ್ತಿಸುವಂತದ್ದು ಸ್ವತಃ ಬಂಡವಾಳವೇ ಹೊರತು ಬೇರೆ ಯಾವುದೂ ಅಲ್ಲ. ●

NEW No. MAG(3)/NPP/205/2021-2022
JANASHAKTHI KANNADA VARA PATRIKE September 08- 14, 2025 Price: Rs. 10/- Date of Publication: 05 September 2025 RNI No. KARKAN/2006/17926 Posted on 09-09-2025
Posted at BG PSO, BG - 560026 **Posted at Periodical Rate -** Rs. 2

ಕಲಾಕೃತಿಗಳಾಗಿ ರೂಪಗೊಂಡ ವಿಜೂ ಕೃಷ್ಣನ್ ಅವರ ಛಾಯಾಚಿತ್ರ ಪ್ರದರ್ಶನ




ನಾನು ಕ್ಲಿಕ್ಕಿಸಿರುವ ಇಲ್ಲಿನ ಕೆಲವು ಫೋಟೋಗಳು, ಅದರಲ್ಲೂ ಒಬ್ಬ ಬಾಲಕನ ಫೋಟೋ, ಅದರಲ್ಲೂ ಅವನ ಕಣ್ಣುಗಳು "ಭಾರತದ ನಾಗರೀಕರ ಮೇಲೆ ಇಷ್ಟೊಂದು ಕ್ರೂರ ದಬ್ಬಾಳಿಕೆ ನಡೆಯುತ್ತಿದ್ದರೂ ನೀವುಗಳೆಲ್ಲಾ ಸುಮ್ಮನಿದ್ದೀರಲ್ಲಾ" ಎಂದು ನಮ್ಮೆಲ್ಲರನ್ನು ಉದ್ದೇಶಿಸಿ ಹೇಳುವಂತಿವೆ. ಈ ಫೋಟೋ ನನ್ನನ್ನು ತುಂಬಾ ಕಾಡಿದೆ. ಹಲವರು ಈ ರೀತಿ ವ್ಯಕ್ತಿಗಳ ಫೋಟೋಗಳನ್ನು ಅವರ ಅನುಮತಿ ಇಲ್ಲದೆ ತೆಗೆದು ಪ್ರದರ್ಶಿಸಬಾರದು ಎಂದು ವಾದಿಸುತ್ತಾರೆ. ಆದರೆ ಕೆಲವು ಘಟನೆಗಳನ್ನು ಸಮಾಜಕ್ಕೆ ನೆನಪಿಸಬೇಕಾದರೆ, ಅದರಿಂದ ಸಮಾಜಕ್ಕೆ ಒಂದು ಸಂದೇಶ ಕೊಡಬೇಕಾದರೆ, ಇಂತಹ ಕೆಲವು ಫೋಟೋಗಳನ್ನು ತೆಗೆಯುವುದು ಅನಿವಾರ್ಯವಾಗುತ್ತದೆ ಎನ್ನುತ್ತಾರೆ ವಿಜೂ ಕೃಷ್ಣನ್.



ಇವರು ವೇದಿಕೆಯ ಮೇಲೆ ಭಾಷಣಕ್ಕೆ ನಿಂತರೆ ಅಥವಾ ರೈತರೊಂದಿಗೆ ಹೋರಾಟದಲ್ಲಿ ಹೆಜ್ಜೆ ಹಾಕಿದರೆ, ಸುತ್ತಲೂ ಹತ್ತಾರು ಕ್ಯಾಮರಾಗಳು ಆ ಕ್ಷಣವನ್ನು ಸೆರೆಹಿಡಿಯಲು ನಿಂತಿರುತ್ತವೆ. ಆದರೆ ಇಲ್ಲಿಯೂ ಹತ್ತಾರು ಕ್ಯಾಮರಾಗಳಿದ್ದವು. ಅವೆಲ್ಲವೂ ಇವರ ಜೊತೆಗೆ ಇವರೇ ಸ್ವತಃ ಕ್ಲಿಕ್ಕಿಸಿದ ಫೋಟೋಗಳನ್ನು ಅತ್ಯಂತ ಕುತೂಹಲದಿಂದ ಗಮನಿಸುತ್ತಿದ್ದವು.

ನಾನು ಮಾತನಾಡುತ್ತಿರುವುದು ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಡಾ.ವಿಜೂ ಕೃಷ್ಣನ್ ಅವರ ಫೋಟೋ ಪ್ರದರ್ಶನದ ಬಗ್ಗೆ. ಆಗಸ್ಟ್ 28 ರಂದು ಚಂಗುಡಿಯ ನಾಡು ಕೇರಳದ ಕ್ಯಾಲಿಕಟ್‌ನ ಲಲಿತಕಲಾ ಅಕಾಡೆಮಿಯ ಕಲಾ ಗ್ಯಾಲರಿಯಲ್ಲಿ, ವಿಜೂ ಕೃಷ್ಣನ್‌ರವರು ತಮ್ಮ ಹೋರಾಟ ಮತ್ತು ಪ್ರವಾಸದ ಸಂದರ್ಭದಲ್ಲಿ ತೆಗೆದ ಹಲವು ವಿಶೇಷ ಫೋಟೋಗಳನ್ನು "ಭೂಮಿ, ಜನಜೀವನ ಮತ್ತು ಕಥಾನಕಗಳು"ಎಂಬ ಶೀರ್ಷಿಕೆಯಡಿಯಲ್ಲಿ ಪ್ರದರ್ಶಿಸಲಾಗಿತ್ತು. ಇದರ ಉಧ್ಘಾಟನೆಯನ್ನು ಪಕ್ಷದ ಹಿರಿಯ ಸಂಗಾತಿ ಮಾಜಿ ಪೊಲಿಟ್ ಬ್ಯೂರೋ ಸದಸ್ಯರಾದ ಬೃಂದಾ ಕಾರಟ್ ನೆರವೇರಿಸಿದರು. ಇಲ್ಲಿದ್ದ ಒಂದೊಂದು ಚಿತ್ರಗಳೂ ಒಂದೊಂದು ಕಲಾಕೃತಿ ಮಾತ್ರವಲ್ಲ, ಅವು ಒಂದೊಂದು ಕಾದಂಬರಿಯಷ್ಟು ವಿಷಯಗಳನ್ನು ತಮ್ಮೊಳಗೆ ಅಡಗಿಸಿ ಇಟ್ಟುಕೊಂಡಂತಹವು.

ಈ ಕುರಿತು ವಿಜೂಕೃಷ್ಣನ್ ಅವರನ್ನು ಮಾತನಾಡಿಸುತ್ತಾ, ಅವರಿಗೆ ಫೋಟೋಗ್ರಫಿ ಮೇಲಿನ ಆಸಕ್ತಿ ಆರಂಭವಾದದ್ದು ಯಾವಾಗ ಎನ್ನುವುದನ್ನು, ಮತ್ತು ಅವರು ತೆಗೆದಿರುವ ಫೋಟೋಗಳ ಹಿಂದಿನ ಕಥೆಯನ್ನು ಕೇಳುತ್ತಾ ಹೋದಾಗ ಹಲವು ವಿಷಯಗಳು ಸುರುಳಿಯಂತೆ ಬಿಡಿಸಿಕೊಳ್ಳಲಾರಂಭಿಸಿದವು. ಅವರ ಅನುಭವಗಳನ್ನು ಅವರದ್ದೇ ಮಾತುಗಳಲ್ಲಿ ಕೇಳೋಣ:



ಬೇರೆಯದೇ ಜಗತ್ತನ್ನು ಸೆರೆಹಿಡಿಯುವ ಆಸಕ್ತಿ

1982. ನನಗಾಗ 8 ವರ್ಷ ವಯಸ್ಸಿರಬಹುದು. ನನ್ನ ತಂದೆ ಜೊತೆ ನಾನು ಪ್ರವಾಸ ಹೋದಾಗ ಅವರು ತೆಗೆಯುತ್ತಿದ್ದ ಫೋಟೋಗಳು ಆರಂಭದಲ್ಲಿ ನನ್ನ ಮೇಲೆ ಪ್ರಭಾವ ಬೀರಿದವು. ನಾನು ಎಂಟನೇ ತರಗತಿಯಲ್ಲಿ ಓದುತ್ತಿದ್ದಾಗ ಮರ್ಚಂಟ್ ನೇವಿಯಲ್ಲಿ ಕೆಲಸ ಮಾಡುತ್ತಿದ್ದ ನನ್ನ ಅಂಕಲ್ ಒಬ್ಬರು ನನಗೆ ಒಂದು ಕ್ಯಾಮರಾವನ್ನು ಉಡುಗೊರೆಯಾಗಿ ನೀಡಿದರು. ಈ ಕ್ಯಾಮರಾದ ವಿಶೇಷವೇನೆಂದರೆ, ಅದು ಒಂದು ಬದಿಯಲ್ಲಿ ಕ್ಯಾಮರಾವಾಗಿ ಕೆಲಸ ಮಾಡುತ್ತಿದ್ದರೆ, ಮತ್ತೊಂದು ಬದಿಯಲ್ಲಿ ರೇಡಿಯೋ ಆಗಿ ಕಾರ್ಯನಿರ್ವಹಿಸುತ್ತಿತ್ತು. ಇದು ನ್ಯಾಷನಲ್ ಪ್ಯಾನಸೋನಿಕ್ ಕಂಪನಿಯದ್ದು. ಇದು ಹೀಗಿನ ರೀತಿಯ ಡಿಜಿಟಲ್ ಕ್ಯಾಮರಾವಲ್ಲ, ನೆಗೆಟಿವ್ ರೋಲ್ ಬಳಸಿ ಕ್ಲಿಕ್ಕಿಸುವ ಕ್ಯಾಮರಾ. ನಾನು ಈ ಕ್ಯಾಮರಾ ಕಿಂಡಿಯ ಮೂಲಕ ಬೇರೆಯದೇ ಜಗತ್ತನ್ನು ನೋಡುವ, ಅವುಗಳನ್ನು ಸೆರೆಹಿಡಿಯುವ ಆಸಕ್ತಿಯನ್ನು ಬೆಳೆಸಿಕೊಂಡೆ. ಆ ನಂತರ ನನ್ನ ಆಸಕ್ತಿಯನ್ನು ಗಮನಿಸಿದ ನನ್ನ ತಂಗಿ, ಕೆನಾನ್ ಕಂಪನಿಯ ಒಂದು ಲೆನ್ಸ್ ಕ್ಯಾಮರಾವನ್ನು ಉಡುಗೊರೆಯಾಗಿ ನೀಡಿದರು. ಅದರಲ್ಲಿ ತೆಗೆದ ಹಲವು ಫೋಟೋಗಳು ಇಂದು ನನ್ನ ಬಳಿ ಇಲ್ಲ. ಅದರಲ್ಲೂ, ಗುಜರಾತ್ ಗಲಭೆಯ ಸಂದರ್ಭದಲ್ಲಿ ತೆಗೆದ ಫೋಟೋಗಳ ನೆಗೆಟಿವ್ ಹಾಳಾದ ಕಾರಣ ಮತ್ತೆ ಅವುಗಳನ್ನು ಪುನರ್ ಮುದ್ರಿಸಲು ಸಾಧ್ಯವಾಗಲಿಲ್ಲ. ಈಗೆಲ್ಲಾ ಡಿಜಿಟಲ್ ಯುಗ, ಅದರಲ್ಲೂ ಮೊಬೈಲ್‌ನಲ್ಲೇ ಅತ್ಯುತ್ತಮ ಕ್ಯಾಮರಾಗಳು ಬಂದಿವೆ. ನಾನು ಪ್ರಯಾಣಮಾಡುವಾಗ, ಬಸ್ಸಿನಲ್ಲಿ, ಕಾರಿನಲ್ಲಿ, ರೈಲಿನಲ್ಲಿ, ಹಲವು ಬಾರಿ ವಿಮಾನದಿಂದಲೂ ಅತ್ಯುತ್ತಮ ಫೋಟೋಗಳನ್ನು ಸೆರೆಹಿಡಿಯಲು ಸಾಧ್ಯವಾಗಿದೆ. ಒಮ್ಮೆ ಗಲ್ಫ್‌ನಲ್ಲಿರುವ ಮಲೆಯಾಳಿಗಳ ಕಾರ್ಯಕ್ರಮಕ್ಕೆ ಭಾಗವಹಿಸಲು ಹೋದಾಗ, ನನ್ನ ಕಸಿನ್ ಒಬ್ಬರು ನಿಕೋನ್ 5300 ಡಿಜಿಟಲ್ ಕ್ಯಾಮರಾವನ್ನು ಉಡುಗೊರೆಯಾಗಿ ನೀಡಿದರು.

ಇಲ್ಲಿ ಪ್ರದರ್ಶಿಸಲ್ಪಟ್ಟಿರುವ ಬಹುತೇಕ ಫೋಟೋಗಳನ್ನು ನಾನು ಯೋಜನಾಬದ್ಧವಾಗಿ ತೆಗೆದದ್ದಲ್ಲ, ಬದಲಾಗಿ ಪ್ರಯಾಣದ ಸಮಯದಲ್ಲಿ ತೆಗೆದದ್ದು. ಈ ರೀತಿ ಫೋಟೋ ತೆಗೆಯುವಾಗ ಕೆಲವು ಅಡೆತಡೆಗಳಿರುತ್ತವೆ. ಅವುಗಳನ್ನೆಲ್ಲಾ ನಾನೇ ಸ್ವತಃ ಎಡಿಟ್ ಮಾಡಿಕೊಳ್ಳುತ್ತೇನೆ. ಫೋಟೋಗ್ರಫಿ ಮಾಡಬೇಕು ಅಂತ ಹೋಗಿ ತೆಗೆದದ್ದು ತುಂಬಾ ವಿರಳ. ಇವೆಲ್ಲವೂ ಒಂದು ರೀತಿ ಜೀವನದ ಹಲವು ಕೆಲಸಗಳ ಜೊತೆಗೆ ಇದೊಂದು ಭಾಗ.


ಎಲ್ಲವೂ ಕೊಚ್ಚಿಹೋಗಿದ್ದರೂ ಗಟ್ಟಿಯಾಗಿ ನಿಂತಿರುವ ಬೃಹದಾಕಾರದ ಮರ

ಇಲ್ಲಿ ಆಯ್ದ 64 ಫೋಟೋಗಳನ್ನು ಪ್ರದರ್ಶಿಸಲಾಗಿದೆ. ಇವುಗಳಲ್ಲಿ ನನಗೆ ಅತಿ ಹೆಚ್ಚು ಕಾಡಿದ ಫೋಟೋಗಳಲ್ಲಿ ಕೆಲವುಗಳಿವೆ. ಅದರಲ್ಲಿ ಕೇರಳದ ವೈನಾಡು ಪ್ರಕೃತಿ ದುರಂತದ ಚೂರ್ಲ್ಮಲಾ ಪ್ರದೇಶದಲ್ಲಿ ನೀರಿಗೆ ಎಲ್ಲವೂ ಕೊಚ್ಚಿಹೋಗಿ ನೆಲಸಮವಾಗಿದ್ದರೂ, ಒಂದು ಬೃಹದಾಕಾರದ ಮರ ಮಾತ್ರ ತನಗೆ ಏನೂ ಆಗಿಲ್ಲವೇನೋ ಎಂಬಂತೆ ಗಟ್ಟಿಯಾಗಿ ನಿಂತಿರುವ ಫೋಟೋವನ್ನು ದುರಂತದ ಸ್ಥಳಕ್ಕೆ ಭೇಟಿಕೊಟ್ಟಾಗ ತೆಗೆದದ್ದು.

ಅಸ್ಸಾಂನ ನಿರಾಶ್ರಿತರ ತಾಣದಲ್ಲಿನ ಬಾಲಕನ ಫೋಟೋ

ಅಸ್ಸಾಂನ ದರಾಂಗ್ ಎಂಬ ಒಂದು ಜಿಲ್ಲೆಯಲ್ಲಿ ನೂರಾರು ವರ್ಷಗಳಿಂದ ಬಂಗಾಳಿ ಮಾತನಾಡುವ ಮುಸ್ಲಿಂ ರೈತರು ಕೃಷಿ ಮಾಡಿಕೊಂಡು ಬರುತ್ತಿದ್ದರು. ಆದರೆ, ಬಿಜೆಪಿ ಸರ್ಕಾರ 'ಇವರೆಲ್ಲಾ ಭಾರತೀಯರಲ್ಲಾ, ಬಾಂಗ್ಲಾ ನುಸುಳುಕೋರರು' ಎಂದು ಸುಳ್ಳು ಆಪಾದನೆ ಮಾಡಿ, ಅವರು ವಾಸವಾಗಿದ್ದ ಮನೆಗಳನ್ನೆಲ್ಲಾ ನೆಲಸಮ ಮಾಡಿ, ಎಲ್ಲರನ್ನೂ ಬೀದಿಗೆ ತರಲಾಗಿತ್ತು. ಇವರನ್ನೆಲ್ಲಾ ತಾತ್ಕಾಲಿಕ ನಿರಾಶ್ರಿತರ ತಾಣಗಳಲ್ಲಿ ಇಡಲಾಗಿತ್ತು. ಇವರನ್ನು ಭೇಟಿಯಾಗಲೆಂದು ಹೋದಾಗ ನನಗೆ ನೆನಪಾಗಿದ್ದು ಎರಡು ಸಂಗತಿಗಳು. ಒಂದು, ನಾನು ಚಿಕ್ಕವನಿದ್ದಾಗ ಗಾಂಧಿಯ ಚಲನಚಿತ್ರಗಳನ್ನು ನೋಡುವಾಗ ಅಲ್ಲಿ ಭಾರತ –ಪಾಕಿಸ್ತಾನ ವಿಭಜನೆಯ ಸಂದರ್ಭದಲ್ಲಿ ಹೇಗೆ ಜನರು ನಿರಾಶ್ರಿತರಾಗುತ್ತಾರೆ ಮತ್ತು ಭೀಶ್ಮಸಹನಿಯವರ ಥಮಸ್ ಕಾದಂಬರಿ ಆಧಾರಿತ ಗೋವಿಂದ್ ನಿಲಾನಿಯವರ ಚಲನಚಿತ್ರದಲ್ಲಿ ಹೇಗೆ ನಿರಾಶ್ರಿತರನ್ನು ಚಿತ್ರಿಸಲಾಗಿದೆಯೋ, ಅದಕ್ಕಿಂತ ಕ್ರೂರವಾಗಿ ಇಲ್ಲಿನ ಮುಸ್ಲಿಮರನ್ನು ನಡೆಸಿಕೊಳ್ಳಲಾಗಿತ್ತು. ನಾವು ರೈತ ಸಂಘದಿಂದ ಕೆಲವು ಪರಿಹಾರ ಸಾಮಗ್ರಿಗಳನ್ನು ಹಂಚಲು

ಪುಟ 6 ಕ್ಕೆ



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**